ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಪುಟ 8 ● ಸಂಚಿಕೆ 9 ● ಜನವರಿ 2026 ● ಬೆಲೆ ರೂ. 18/-

ಕನ್ನಡ ಮಾಸಿಕ

VENMAI ಕನ್ನಡ ಮಾಸಿಕ






Available at Ramraj Showrooms And All Leading Textile Shops


RAMRAJ
ಕಾಟನ್
ಭಾರತೀಯ ಸಂಸ್ಕೃತಿ
ನೀತಿಯ ಮಾರ್ಗ ಯಾವುದೆಂಬುದನ್ನು ನಮಗೆ ತೋರಿಸಿ
ಅದರಲ್ಲಿ ಪ್ರಯಾಣಿಸಬೇಕಾದ ಅಗತ್ಯವನ್ನು ಮನವರಿಕೆ ಮಾಡಿಸಿ
ಜೀವನವನ್ನು ನೈತಿಕತೆಯೊಂದಿಗೆ ಮುನ್ನಡೆಸಲು ದಾರಿ ತೋರಿಸುವ
ನೈತಿಕತೆ
ವಿಶೇಷಾಂಕ
ಎನ್ನುವ ಈ ಉಪಯುಕ್ತ ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

# ಗೌರವಾನ್ವಿತರಿಗೆ...

**ನಮಸ್ಕಾರ.**

ಪ್ರತಿಯೊಂದು ಒಳ್ಳೆಯ ಕಥೆಯೂ ಒಂದೊಂದು ಶಕ್ತಿಶಾಲಿ ಬೀಜವಿದ್ದಂತೆ! ಮುಂದೇನು ಮಾಡುವುದೆಂದು ತೋಚದೆ ಅಸಹಾಯಕರಾಗಿ ಗೊಂದಲಗೊಂಡು ದಾರಿ ಕಾಣದೆ ನಿಂತವರಿಗೆ ಕಥೆಗಳ ಮೂಲಕ ನಮ್ಮ ಹಿಂದಿನವರು ನಿರಂತರವಾಗಿ ಮಾರ್ಗದರ್ಶನ ಮಾಡುತ್ತಲೇ ಇದ್ದಾರೆ. ಮಕ್ಕಳ ಪ್ರಪಂಚವು ಕಥೆಗಳ ಮೂಲಕ ವಿಸ್ತರಿಸುತ್ತದೆ. ಐತಿಹಾಸಿಕ ನಾಯಕರು ಸಹ ಸಾಹಿತ್ಯ, ಮಹಾಕಾವ್ಯಗಳು ಮತ್ತು ಕಥೆಗಳ ಮೂಲಕ ಸದಾ ಕಾಲ ಜೀವಂತವಾಗಿರುತ್ತಾರೆ.

ನಮ್ಮ ಕುಟುಂಬಗಳಲ್ಲಿ, ಅಜ್ಜ–ಅಜ್ಜಿಯರ ಮುಖ್ಯ ಕೆಲಸವೆಂದರೆ ಮೊಮ್ಮಕ್ಕಳಿಗೆ ಕಥೆಗಳನ್ನು ಹೇಳುವುದು. ಅದೂ ಕೂಡ ನೈತಿಕ ಕಥೆಗಳನ್ನು ಹೇಳುವುದು. ಔಷಧವನ್ನು ಆಹಾರದಲ್ಲಿ ಬೆರೆಸಿ ನೀಡುವಂತೆ, ಅವರು ಕಥೆಗಳ ಮೂಲಕ ಜೀವನದಲ್ಲಿ ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳನ್ನು ಮಕ್ಕಳಿಗೆ ತಿಳಿಸಿ ಹೇಳುತ್ತಿದ್ದರು. ಕಥೆಗಳನ್ನು ಕೇಳುತ್ತಾ ಬೆಳೆಯುವ ಮಕ್ಕಳು ತಮ್ಮೊಳಗೇ ಒಂದು ಕಥೆಗಳ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ನಂತರ ಅಂತಹ ಕಥೆಗಳನ್ನು ಮುಂದೆ ಮಕ್ಕಳೇ ಸೃಷ್ಟಿಸುತ್ತಾರೆ.

ಇಂದಿಗೂ ಹಳ್ಳಿಗಳಲ್ಲಿ ರಾತ್ರಿ ವೇಳೆ ನಡೆಯುವ ಬೀದಿ ನಾಟಕ ಪ್ರದರ್ಶನಗಳಲ್ಲಿ 'ಹರಿಶ್ಚಂದ್ರನ ಕಥೆ'ಯು ತುಂಬಾ ಹೆಸರುವಾಸಿಯಾಗಿದೆ. ಸುಳ್ಳನ್ನು ತಿರಸ್ಕರಿಸಿ, ಸತ್ಯವನ್ನು ಮಾತ್ರವೇ ನುಡಿಯುತ್ತಾ, ನುಡಿ–ದಂತೆ ನಡೆದು ತೋರಿಸಿದ ಹರಿಶ್ಚಂದ್ರನ ಕಥೆ ನಮ್ಮೆಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಅಚ್ಚೊತ್ತಿದೆ.

ಎಲ್ಲಾ ಋಷಿಗಳಿಗೂ ಗುರುಗಳಾಗಿದ್ದ ವಸಿಷ್ಠ ಮಹರ್ಷಿಗಳು, ಇಂದ್ರಲೋಕದಲ್ಲಿ ನಡೆದ ಒಂದು ಸಭೆಯಲ್ಲಿ ಹೆಮ್ಮೆಯಿಂದ ಹೇಳಿದರು: "ನನ್ನ ಶಿಷ್ಯನಾದ ರಾಜ ಹರಿಶ್ಚಂದ್ರನು ತನ್ನ ಜೀವನದಲ್ಲಿ ಒಂದೇ ಒಂದು ಸುಳ್ಳನ್ನೂ ಹೇಳಿಲ್ಲ, ಮುಂದೆಯೂ ಹೇಳುವುದಿಲ್ಲ. ಏನೇ ಆದರೂ ಅವನು ಸತ್ಯವನ್ನು ಮಾತ್ರವೇ ಮಾತನಾಡುತ್ತಾನೆ." ಆ ಸಭೆಯಲ್ಲಿದ್ದ ಮತ್ತೊಬ್ಬ ಮಹಾನ್ ಋಷಿ ವಿಶ್ವಾಮಿತ್ರರು, ವಸಿಷ್ಠರ ಅಹಂಕಾರವನ್ನು ಮುರಿಯಲು ಬಯಸಿದರು. ಅವರು ಹೇಳಿದರು: "ಮನುಷ್ಯನು ಸಂದರ್ಭಗಳಿಗೆ ಅನುಗುಣವಾಗಿ ತನ್ನನ್ನು ತಾನು ಬದಲಾಯಿಸಿಕೊಳ್ಳುತ್ತಾನೆ. ಆದ್ದರಿಂದ, ನಿಮ್ಮ ಶಿಷ್ಯ ಹರಿಶ್ಚಂದ್ರನು ಕಠಿಣ ಪರಿಸ್ಥಿತಿಯಲ್ಲಿದ್ದಾಗ, ಅವನು ಸ್ವಾಭಾವಿಕವಾಗಿ ಸುಳ್ಳು ಹೇಳುತ್ತಾನೆ. ನಾನು ಅದನ್ನು ನಿಮಗೆ ಸಾಬೀತುಪಡಿಸುತ್ತೇನೆ" ಎಂದು ವಿಶ್ವಾಮಿತ್ರರು ಅದೇ ಸಭೆಯಲ್ಲಿ ವಸಿಷ್ಠರ ಮುಂದೆ ಪ್ರತಿಜ್ಞೆ ಮಾಡಿದರು. ಏಕೆಂದರೆ ಇವರಿಬ್ಬರ ನಡುವೆ ಯಾವಾಗಲೂ ಅಳಿಯದ ದ್ವೇಷವಿತ್ತು.

ನಂತರ, ವಿಶ್ವಾಮಿತ್ರರು ತಮ್ಮ ತಪಸ್ಸಿನ ಪ್ರಭಾವದ ಮೂಲಕ ಒಬ್ಬ ರಾಕ್ಷಸನನ್ನು ಉಗ್ರ ಕಾಡುಹಂದಿಯನ್ನಾಗಿ ಪರಿವರ್ತಿಸಿದರು. ಹೂವುಗಳು ಅರಳಿ ತೂಗಾಡುತ್ತಿದ್ದ ಹರಿಶ್ಚಂದ್ರನ ಸುಂದರವಾದ ನಂದನವನವನ್ನು ನಾಶ ಮಾಡಿ ಬರುವಂತೆ ಅವರು ಹಂದಿಯ ರೂಪದಲ್ಲಿದ್ದ ರಾಕ್ಷಸನಿಗೆ ಹೇಳಿದರು. ಹಂದಿಯೂ ಋಷಿಯ ಆಜ್ಞೆಯನ್ನು ಸ್ವೀಕರಿಸಿತು. ಅದು ಹರಿಶ್ಚಂದ್ರನ ನಂದವನವನ್ನು ಸಂಪೂರ್ಣವಾಗಿ ನಾಶ ಮಾಡತೊಡಗಿತು. ಅಲ್ಲಿ ಕೆಲಸ ಮಾಡುತ್ತಿದ್ದ ಜನರಿಗೆ ಹಂದಿಯನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅವರು ಹಂದಿಯ ಆಕ್ರಮಣದ ಬಗ್ಗೆ ಹರಿಶ್ಚಂದ್ರನಿಗೆ ತಿಳಿಸಿದರು. ಹಂದಿಯನ್ನು ಕೊಲ್ಲುವುದನ್ನು ಬಿಟ್ಟು ಬೇರೆ ದಾರಿಯಿಲ್ಲದ ಪರಿಸ್ಥಿತಿ ಉದ್ಭವಿಸಿತು.

ಬಿಲ್ಲುವಿದ್ಯೆಯಲ್ಲಿ ನಿಪುಣನಾಗಿದ್ದ ಹರಿಶ್ಚಂದ್ರ ಕುದುರೆಯ ಮೇಲೆ ಹೋಗಿ ಕಾಡುಹಂದಿಯನ್ನು ಬೇಟೆಯಾಡಲು ನಿರ್ಧರಿಸಿದನು. ಹಂದಿಯು ಅವನ ಕೈಗೆ ಸಿಗದೆ, ವೇಗವಾಗಿ ಅತ್ತಿತ್ತ ಓಡಾಡುತ್ತಾ ಅವನ ಗುರಿಗೇ ಸಿಕ್ಕದೆ ತಪ್ಪಿಸಿಕೊಳ್ಳುತ್ತಿತ್ತು. ಅವನು ಬಿಡುತ್ತಿದ್ದ ಬಾಣಗಳು ಅದಕ್ಕೆ ತಾಕಲಿಲ್ಲ. ಹೀಗೇ ಓಡುತ್ತಿದ್ದ ಹಂದಿಯನ್ನು ಹಿಂಬಾಲಿಸಿಕೊಂಡು ಹರಿಶ್ಚಂದ್ರನೂ ಬಹಳ ದೂರ ಬಂದು ಬಿಟ್ಟ. ಕೊನೆಗೆ ಅವನು ಎತ್ತ ನೋಡಿದರೂ ಹಂದಿ ಎಲ್ಲಿಯೂ ಅವನ ಕಣ್ಣಿಗೆ ಕಾಣಲಿಲ್ಲ.

ಅಷ್ಟು ಹೊತ್ತಿಗೆ ಅವನು ತುಂಬಾ ದಣಿದಿದ್ದ. ಹತ್ತಿರದಲ್ಲಿ ಹರಿಯುತ್ತಿದ್ದ ಹೊಳೆಯಿಂದ ನೀರು ಮೊಗೆದು ಕುಡಿದು ಒಂದು ಮರದ ನೆರಳಿನಲ್ಲಿ ಕುಳಿತುಕೊಂಡ. ಆಗ ಅಲ್ಲಿಗೆ ಬಂದ ಒಬ್ಬ ವೃದ್ಧನು ಹರಿಶ್ಚಂದ್ರನಿಗೆ ಧರ್ಮಶಾಸ್ತ್ರಗಳನ್ನು ವಿವರಿಸಲು ಪ್ರಾರಂಭಿಸಿದನು. ಶಿಷ್ಯನನ್ನು ಹುಡುಕಿಕೊಂಡು ಬಂದ ಗುರುವಿನಂತೆ, ಅವನು ಹರಿಶ್ಚಂದ್ರನಿಗೆ ತಾನು ಕಲಿತ ಎಲ್ಲವನ್ನೂ ವಿವರಿಸಿದನು.

ಹರಿಶ್ಚಂದ್ರನು ಆ ವೃದ್ಧನನ್ನು ಕುರಿತು, 'ಈ ನಿರ್ಜನ ಕಾಡಿನಲ್ಲಿ ಒಬ್ಬರೇ ಏನು ಮಾಡುತ್ತಿರುವಿರಿ?' ಎಂದು ವಿಚಾರಿಸಿದನು. "ನನ್ನ ಹೆಣ್ಣುಮಕ್ಕಳ ಮದುವೆ ಮಾಡಿದ ನಂತರ, ನಾನು ತುಂಬಾ ಬಡವನಾಗಿ ಬಿಟ್ಟಿದ್ದೇನೆ. ನನಗೆ ಇರಲು ಸ್ಥಳವಿಲ್ಲದೆ ಹೀಗೇ ಸುಮ್ಮನೆ ಅಲೆಮಾರಿಯಾಗಿ ಅಲೆದಾಡಿಕೊಂಡಿದ್ದೇನೆ" ಎಂದು ವೃದ್ಧನು ದುಃಖದಿಂದ ಹೇಳಿದ. ಹರಿಶ್ಚಂದ್ರನು ಅವನ ಮೇಲೆ ಕರುಣೆ ತೋರಿ, "ನೀವು ಈ ವೃದ್ಧಾಪ್ಯದಲ್ಲಿ ಹೀಗೆ ಬಳಲಬಾರದು. ನನ್ನನ್ನು ರಾಜಸಭೆಯಲ್ಲಿ ಬಂದು ಕಾಣಿರಿ. ನೀವು ಬಯಸಿದ್ದನ್ನು ನಾನು ಕೊಡುತ್ತೇನೆ" ಎಂದು ಭರವಸೆ ನೀಡಿ ಬೀಳ್ಕೊಟ್ಟನು.

ಮರುದಿನ, ಆ ವೃದ್ಧ ರಾಜಸಭೆಗೆ ಬಂದು, "ರಾಜ, ನಾನು ಬಯಸಿದ್ದನ್ನು ನನಗೆ ಕೊಡುವುದಾಗಿ ನೀವು ಭರವಸೆ ನೀಡಿದ್ದೀರಿ. ನನಗೆ ನಿಮ್ಮ ದೇಶ, ನಿಮ್ಮ ಎಲ್ಲ ಸಂಪತ್ತು ಮತ್ತು ನಿಮ್ಮ ಅರಮನೆ ಬೇಕು" ಎಂದು ಕೇಳಿದ. ತಾನು ನೀಡಿದ ಭರವಸೆಯನ್ನು ಈಡೇರಿಸದಿದ್ದರೆ ತಾನು ಹೇಳಿದ್ದು ಸುಳ್ಳು ಎಂದು ಪರಿಗಣಿಸಲ್ಪಡುವುದರಿಂದ, ಹರಿಶ್ಚಂದ್ರನು ತನ್ನಲ್ಲಿದ್ದ ಎಲ್ಲವನ್ನೂ ಅವನಿಗೆ ನೀಡಲು ಹಿಂಜರಿಯಲಿಲ್ಲ. ತನ್ನ ರಾಜ್ಯ,

ತನ್ನ ಬೊಕ್ಕಸ, ಅರಮನೆ ಎಲ್ಲವನ್ನೂ ಅವನಿಗೆ ನೀಡಿದ.


“ಇದೆಲ್ಲ ಸರಿ. ಆದರೆ ನಾನು ನಿನಗೆ ಕಾಡಿನಲ್ಲಿ ಉಪದೇಶ ನೀಡಿದೆ. ನಾನು ಹೇಳಿದ್ದನ್ನೆಲ್ಲ ನೀನೂ ತಿಳಿದುಕೊಂಡೆ. ಅದಕ್ಕೆ ಪ್ರತಿಯಾಗಿ ನೀಡಬೇಕಾದ ಗುರು ದಕ್ಷಿಣೆ ಎಲ್ಲಿ?" ಎಂದು ವೃದ್ಧ ಕೇಳಿದ. ಅವನಿಗೆ ಕೊಡಲು ಈಗ ತನ್ನ ಬಳಿ ಏನೂ ಇಲ್ಲದ ಕಾರಣ, ಹರಿಶ್ಚಂದ್ರ ಪರಿತಪಿಸಿ ಹೋದ. ‘ನೀನು ಕೇಳಿದ ಎಲ್ಲವನ್ನೂ ನಾನು ಕೊಡುತ್ತೇನೆ’ ಎಂದು ತಾನು ನೀಡಿದ ಭರವಸೆಯನ್ನು ಮೀರಲು ಅವನು ಬಯಸಲಿಲ್ಲ. ವೃದ್ಧನಿಗೆ ನೀಡಬೇಕಾದ ಗುರುದಕ್ಷಿಣೆಯನ್ನು ನೀಡಲು ಅವನ ಬಳಿ ಸಮಯಾವಕಾಶ ಕೇಳಿದ. ನಂತರ ಅವನು ತನ್ನ ಹೆಂಡತಿ ಮತ್ತು ಮಗನೊಂದಿಗೆ ತನ್ನ ರಾಜ್ಯವನ್ನು ಬಿಟ್ಟು, ಕಾಶಿಗೆ ಹೊರಟುಹೋದನು.

ರಾಜನಾಗಿದ್ದ ಅವನು ಕಾಶಿಯಲ್ಲಿ ಸ್ಮಶಾನದಲ್ಲಿ ಕಾವಲು ಕಾಯುವ ಕೆಲಸಕ್ಕೆ ಸೇರಿಕೊಂಡ. ಅವನ ಹೆಂಡತಿ ಮತ್ತು ಮಗ ಒಬ್ಬ ಶ್ರೀಮಂತನ ಮನೆಯಲ್ಲಿ ಕೆಲಸ ಮಾಡಲು ಸೇರಿ–ಕೊಂಡರು. ರಾಜಮನೆತನದಲ್ಲಿ ಹುಟ್ಟಿ ಬೆಳೆದವರಿಗೆ ಇದು ತುಂಬಾ ದುಃಖಕರವಾದ ಸಂಗತಿಯಾಗಿತ್ತು. ಕಾಡಿನಲ್ಲಿ ಸೌದೆ ತರಲು ಹೋದಾಗ, ಹರಿಶ್ಚಂದ್ರನ ಮಗ ಹಾವು ಕಚ್ಚಿ ಸತ್ತನು. ಹರಿಶ್ಚಂದ್ರ ಕಾವಲು ಕಾಯುತ್ತಿದ್ದ ಸ್ಮಶಾನದಲ್ಲಿ ಮಗನ ಅಂತ್ಯಕ್ರಿಯೆ ಮಾಡಲು ಬಂದ ತಾಯಿಗೆ, ಅವನ ಅಂತ್ಯಕ್ರಿಯೆಗೆ ನೀಡಬೇಕಾದ ಶುಲ್ಕದ ಹಣವನ್ನು ನೀಡಲು ಸಾಧ್ಯವಾಗಲಿಲ್ಲ. ಮಗನ ಅಂತ್ಯಕ್ರಿಯೆಯನ್ನು ಕೂಡ ಮಾಡಲು ಸಾಧ್ಯವಿಲ್ಲದ ತಮ್ಮ ಪರಿಸ್ಥಿತಿಗಾಗಿ ಹರಿಶ್ಚಂದ್ರ ಮತ್ತು ಅವನ ಹೆಂಡತಿ ತುಂಬಾ ದುಃಖಿಸಿದರು. ತಮ್ಮ ಮಗನಿಗಾಗಿ ಮರುಗಿದರು.

ಆ ಸಮಯದಲ್ಲಿ ಆ ವೃದ್ಧ ಹರಿಶ್ಚಂದ್ರನನ್ನು ಬಂದು ಭೇಟಿಯಾದ. "ನೀನು ಯಾಕೆ ಇಷ್ಟೊಂದು ಕಷ್ಟಪಡುತ್ತಿದ್ದೀಯ? ‘ನಾನು ಮಾಡಿದ ವಾಗ್ದಾನವನ್ನು ಪೂರೈಸಲು ನನ್ನಿಂದ ಸಾಧ್ಯವಿಲ್ಲ’ ಎಂದು ನೀನು ಹೇಳಬಹುದಲ್ಲವೇ?" ಎಂದು ಅವನು ಕೇಳಿದ. ಹರಿಶ್ಚಂದ್ರ, "ಹಾಗೆ ಹೇಳಿದರೆ, ನಾನು ನನ್ನ ಮಾತನ್ನು ಮುರಿದಿದ್ದೇನೆ ಎಂದರ್ಥ. ನಾನು ಹರಿಶ್ಚಂದ್ರ. ಎಂದಿಗೂ ಸುಳ್ಳು ವಾಗ್ದಾನ ಮಾಡುವವನಲ್ಲ. ಏನೇ ಆದರೂ ನಾನು ಆಡಿದ ಮಾತಿನಂತೆ ನಡೆದುಕೊಳ್ಳುತ್ತೇನೆ" ಎಂದು ಹೇಳಿದ.


ಅವನು ತನ್ನನ್ನು ತಾನು ಗುಲಾಮನಾಗಿ ಮಾರಿಕೊಂಡು, ಗುರುವಿಗೆ ನೀಡಬೇಕಾದ ಉಡುಗೊರೆಯ ಹಣವನ್ನು ನೀಡಿದನು ಮತ್ತು ಆ ಮೂಲಕ ‘ಹರಿಶ್ಚಂದ್ರನು ಸತ್ಯವನ್ನು ಮಾತ್ರ ಮಾತನಾಡುತ್ತಾನೆ’ ಎಂದು ಸಾಬೀತುಪಡಿಸಿದನು.

ಕೊನೆಯಲ್ಲಿ ಆ ವೃದ್ಧನು ವಿಶ್ವಾಮಿತ್ರನ ರೂಪದಲ್ಲಿ ಕಾಣಿಸಿಕೊಂಡು, "ಎಲ್ಲ ಕಷ್ಟಗಳ ನಡುವೆಯೂ ಸುಳ್ಳು ಹೇಳಬಾರದು ಎಂಬ ತತ್ವವನ್ನು ನೀನು ದೃಢವಾಗಿ ಪಾಲಿಸಿದ್ದೀಯಾ. ಜೀವನದಲ್ಲಿ ಅನೇಕ ಪರೀಕ್ಷೆಗಳನ್ನು ಎದುರಿಸಿದಾಗಲೂ ನೀನು ನಿನ್ನ ತತ್ವವನ್ನು ತ್ಯಜಿಸಲಿಲ್ಲ. ನಿನ್ನ ಖ್ಯಾತಿಯು ಈ ಜಗತ್ತಿನಲ್ಲಿ ಶಾಶ್ವತವಾಗಿ ಉಳಿಯುತ್ತದೆ" ಎಂದು ಹರಿಶ್ಚಂದ್ರನನ್ನು ಅಭಿನಂದಿಸುತ್ತಾ ಹೇಳಿದನು. ಅವನಿಂದ



ಪಡೆದ ದೇಶ–ಕೋಶವವನ್ನೆಲ್ಲ ಮತ್ತೆ ಅವನಿಗೇ ಹಸ್ತಾಂತರಿಸಿದರು. ಅವರ ಮಗನನ್ನು ಸಹ ಜೀವಂತಗೊಳಿಸಿದರು. ಬಾಲ್ಯದಲ್ಲಿ ಕೇಳಿದ ಹರಿಶ್ಚಂದ್ರನ ಈ ಕಥೆಯು ಮಹಾತ್ಮ ಗಾಂಧಿಯವರಿಗೆ ‘ಜೀವನದಲ್ಲಿ ಎಂದಿಗೂ ಸುಳ್ಳು ಹೇಳಬಾರದು’ ಎಂಬ ದೃಢಸಂಕಲ್ಪವನ್ನು ನೀಡಿತು. ಅವರು ತಮ್ಮ ಜೀವನದುದ್ದಕ್ಕೂ ಅದನ್ನು ದೃಢವಾಗಿ ಪಾಲಿಸಿದರು. ಸತ್ಯದ ಬೆಳಕನ್ನು ಹೊತ್ತುಕೊಂಡು ಅವರು ನಮ್ಮ ರಾಷ್ಟ್ರವನ್ನು ಮುನ್ನಡೆಸಿದರು. ಸಾಮಾನ್ಯ ಮಗುವನ್ನು ಮಹಾತ್ಮ ಗಾಂಧಿಯನ್ನಾಗಿ ಮಾಡುವಲ್ಲಿ ಹರಿಶ್ಚಂದ್ರನ ಕಥೆ ಪ್ರಮುಖ ಪಾತ್ರ ವಹಿಸಿತು.

ನೀತಿ ಕಥೆಗಳು ಶಕ್ತಿಶಾಲಿ ಬೀಜಗಳು ಎಂಬುದಕ್ಕೆ ಗಾಂಧೀಜಿಯವರ ಜೀವನವೇ ಸಾಕ್ಷಿ. ನಮ್ಮ ಮುಂದಿನ ಪೀಳಿಗೆಗೆ ಅರ್ಥಪೂರ್ಣ ಜೀವನಕ್ಕೆ ಮಾರ್ಗದರ್ಶನ ನೀಡುವ ಒಳ್ಳೆಯ ಕಥೆಗಳನ್ನು ಪರಿಚಯಿಸುವುದು ಅವಶ್ಯಕ. ನೀತಿ ಕಥೆಗಳು ಮಕ್ಕಳಿಗೆ ಮಾತ್ರವಲ್ಲದೆ ವಯಸ್ಕರಿಗೂ ದಣಿದಿದ್ದಾಗ ಆತ್ಮವಿಶ್ವಾಸ ಮತ್ತು ಧೈರ್ಯವನ್ನು ನೀಡುವ ಶಕ್ತಿಯನ್ನು ಹೊಂದಿವೆ. ಈ ತಿಂಗಳ ‘ಬಿಳುಪು’ ಸಂಚಿಕೆಯು ನೀತಿ ಕಥೆಗಳ ಅಗತ್ಯ ಮತ್ತು ಸರಿಯಾದ ಪರಿಚಯವನ್ನು ಒದಗಿಸುತ್ತದೆ.



The Culturepreneur

ಬಾಳ್ಗೆ ಭೂಮಂಡಲ –ಬಾಳ್ಗೆ
ಸಮೃದ್ಧಿಯೊಂದಿಗೆ

**ಕೆ.ಆರ್. ನಾಗರಾಜನ್**

ಸಂಸ್ಥಾಪಕರು – ರಾಮ್‌ರಾಜ್ ಕಾಟನ್

# ನೈತಿಕತೆಯನ್ನು ಆಹಾರದಂತೆ ಉಣ್ಣಿಸಿ!



ಓಟದ ಸ್ಪರ್ಧೆಯಲ್ಲಿ ಮೊಲವನ್ನು ಸೋಲಿಸಿದ ಆಮೆಯ ಕಥೆಯನ್ನು ತಿಳಿಯದವರು ಯಾರೂ ಇಲ್ಲ. ಮಕ್ಕಳಿಗೆ ಹೇಳಲಾಗುವ ಅತ್ಯಂತ ಪ್ರಮುಖವಾದ ನೀತಿಕಥೆಗಳಲ್ಲಿ ಇದೂ ಒಂದು. ಓಟವನ್ನು ವೇಗವಾಗಿ ಪ್ರಾರಂಭಿಸಿದ ಮೊಲ, "ಈ ಆಮೆ ವೇಗವಾಗಿ ಹೇಗೆ ತಾನೇ ಬರಲು ಸಾಧ್ಯ? ಅದು ಇಲ್ಲಿಗೆ ಬಂದು ತಲುಪುವವರೆಗೂ ಸ್ವಲ್ಪ ಇಲ್ಲೇ ವಿಶ್ರಾಂತಿ ಪಡೆಯೋಣ" ಎಂದು ಯೋಚಿಸಿ ಅರ್ಧದಾರಿಯಲ್ಲೇ ನಿದ್ರೆಗೆ ಜಾರಿತು. ಆಮೆ ಶಾಂತವಾಗಿ ಮುಂದೆ ಹೋಗಿ ಗೆದ್ದಿತು! ಸೋಮಾರಿತನ ಮತ್ತು ಉದಾಸೀನತೆಯನ್ನು ತೋರಿಸುವ ವ್ಯಕ್ತಿಯು ಅವನು ಶಾಂತವಾಗಿ ವರ್ತಿಸಿದರೂ ಸಹ ಸೋಲುತ್ತಾನೆ ಎಂಬುದಕ್ಕೆ ಮೊಲ ಉದಾಹರಣೆಯಾಗಿದೆ; ತನ್ನ ಪ್ರಯತ್ನಗಳನ್ನು ಬಿಡದೆ ಕೆಲಸ ಮಾಡುವುದನ್ನು ಮುಂದುವರಿಸುವ ವ್ಯಕ್ತಿಯು ಗೆಲ್ಲುತ್ತಾನೆ ಎಂಬುದಕ್ಕೆ ಆಮೆ ಉದಾಹರಣೆಯಾಗಿದೆ.

ಈ ಕಥೆ ಈಗ ವಿವಿಧ ರೂಪಗಳನ್ನು ಪಡೆದುಕೊಂಡಿದೆ ಮತ್ತು ಅವು ಆಸಕ್ತಿದಾಯಕವಾಗಿವೆ. ಅವು ಮಕ್ಕಳಿಗೂ ಇಷ್ಟವಾಗುತ್ತವೆ.

'ಅಷ್ಟು ವೇಗವಾಗಿ ಓಡುತ್ತಿದ್ದ ಮೊಲ ಏಕೆ ಅರ್ಧ ದಾರಿಯಲ್ಲೇ ನಿದ್ರೆಗೆ ಜಾರಿತು? ಇನ್ನೂ ಕೆಲವು ನಿಮಿಷ ಓಡಿದ್ದರೆ, ಅದು ಅಂತಿಮ ಗೆರೆಯನ್ನು ದಾಟಿ ಗೆದ್ದು ನಿದ್ರಿಸಬಹುದಿತ್ತು' ಎಂಬ ಪ್ರಶ್ನೆ ಎಲ್ಲರಲ್ಲೂ ಉದ್ಭವಿಸುತ್ತದೆ. ಆ ಪ್ರಶ್ನೆಯಿಂದ ಕಥೆಯ ಈ ರೂಪ ಹುಟ್ಟಿಕೊಂಡಿದೆ...

ಈ ಕಥೆಯ ಪ್ರಕಾರ, ಮೊಲವು ನಿದ್ರಿಸಲಿಲ್ಲ. ಅದು ವೇಗವಾಗಿ ತುಂಬಾ ದೂರ ಓಡಿ ಬಂದ ಮೇಲೆ, ಹಿಂತಿರುಗಿ ನೋಡಿ ಆಮೆಯನ್ನು ಎಲ್ಲೂ ಕಾಣದೆ ಸ್ವಲ್ಪ ಆತಂಕಗೊಂಡಿತು. ಆಮೆ ತನ್ನನ್ನು ಸಮೀಪಿಸಿದ ನಂತರ ಮತ್ತೆ ಉಳಿದ ದೂರವನ್ನು ಓಡಿ ಕ್ರಮಿಸೋಣ ಎಂದು ಯೋಚಿಸಿ, ಅಲ್ಲೇ ಇದ್ದ ಆಲದ ಮರದ ಕೆಳಗೆ ಕಾಯುತ್ತಾ ನಿಂತುಕೊಂಡಿತು. ಆಗ ಅದಕ್ಕೆ ಹತ್ತಿರದಲ್ಲೆಲ್ಲೋ ನೀರು ಹರಿಯುವ ಜುಳುಜುಳು ಶಬ್ದ ಕೇಳಿಸಿತು. ಸ್ವಲ್ಪ ಮುಂದೆ ಹೋಗಿ ನೋಡಿದಾಗ, ಅದಕ್ಕೆ ಅಲ್ಲಿ ಒಂದು ಜಲಪಾತ ಕಾಣಿಸಿತು. ಆ ಜಲಪಾತದ ಹರಿಯುವ ನೀರಿನಲ್ಲಿಳಿದು, ನೀರು ಕುಡಿದು, ಸ್ವಲ್ಪ ಹೊತ್ತು ಅದರಲ್ಲಿ ಈಜೋಣ ಎಂದು ಮೊಲ ನಿರ್ಧರಿಸಿತು.

ಹತ್ತಿರ ಹೋದಾಗ, ಜಲಪಾತದ ಪಕ್ಕದಲ್ಲಿ ಕುಳಿತಿದ್ದ ಒಬ್ಬ ಸನ್ಯಾಸಿಯನ್ನು ನೋಡಿ, ಅವರ ಹತ್ತಿರ ಹೋಗಿ ನಮಸ್ಕರಿಸಿತು. "ಮೊಲವೇ, ನೀನು ಇಲ್ಲಿ ಏನು ಮಾಡುತ್ತಿರುವೆ?" ಎಂದು ಸನ್ಯಾಸಿ ಕೇಳಿದನು.

"ನಾನು ಒಂದು ಓಟದ ಸ್ಪರ್ಧೆಯಲ್ಲಿ ಸ್ಪರ್ಧಿಸುತ್ತಿದ್ದೇನೆ" ಎಂದು ಮೊಲ ಹೇಳಿತು. ಹೀಗೇ ಅವರ ಸಂಭಾಷಣೆ ಮುಂದುವರೆಯಿತು.



"ನೀನು ಯಾವುದಕ್ಕಾಗಿ ಸ್ಪರ್ಧೆಯಲ್ಲಿ ಓಡುತ್ತಿರುವೆ?"

"ಕಾಡಿನಲ್ಲಿರುವ ಎಲ್ಲಾ ಪ್ರಾಣಿಗಳಿಗೂ ನನ್ನ ವೇಗವನ್ನು ನಾನು ಸಾಬೀತುಪಡಿಸಬೇಕಲ್ಲವೇ?"

"ಸರಿ, ಹಾಗಾದರೆ ಸ್ಪರ್ಧಿಸಿ ನಿನ್ನನ್ನು ನೀನು ಸಾಬೀತುಪಡಿಸುವುದರಿಂದ ಪ್ರಯೋಜನವೇನು?"

"ನನಗೆ ಪದಕ ಸಿಗುತ್ತದೆ, ಬಹುಮಾನ ಸಿಗುತ್ತದೆ, ಹಣ ಸಿಗುತ್ತದೆ. ನನಗೆ ಬೇಕಾದ ಆಹಾರವನ್ನು ಖರೀದಿಸಲು ನಾನು ಅದನ್ನು ಬಳಸಬಹುದು."

"ಇಲ್ಲಿ ಸಾಕಷ್ಟು ಆಹಾರವಿದೆಯಲ್ಲ! ಕಾಡಿನಾದ್ಯಂತ ಸಾಕಷ್ಟು ಹುಲ್ಲು ಮತ್ತು ಹಣ್ಣಿನ ಮರಗಳಿವೆ. ಎಷ್ಟೊಂದು ಬಗೆಯ ಕಾಯಿಗಳು, ಹಣ್ಣುಗಳು ತೂಗಾಡುತ್ತಿವೆ. ಇನ್ನೇನು ಬೇಕು?"

"ಆದರೂ ನನಗೆ ಗೌರವ ಸಿಗಬೇಕಲ್ಲವೇ? ಜಗತ್ತಿನಲ್ಲೇ ಅತಿ ವೇಗವಾಗಿ ಓಡುವುದು ನಾನೇ ಎಂದು ಎಲ್ಲರೂ ನನ್ನನ್ನು ನೆನಪಿಸಿಕೊಳ್ಳಬೇಕಲ್ಲವೇ?"

"ಸರಿ, ಸಾವಿರ ವರ್ಷಗಳ ಹಿಂದೆ ಇಲ್ಲಿ ವಾಸಿಸುತ್ತಿದ್ದ ಅತ್ಯಂತ ವೇಗದ ಜಿಂಕೆ, ಅತಿದೊಡ್ಡ ಆನೆ ಮತ್ತು ಬಲಿಷ್ಠ ಸಿಂಹದ ಹೆಸರುಗಳು ನಿನಗೆ ತಿಳಿದಿದೆಯೇ?"

"ಗೊತ್ತಿಲ್ಲ."

"ಹಾಗಾದರೆ ನಿನ್ನ ಹೆಸರನ್ನು ಮಾತ್ರ ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳುತ್ತಾರೆಂದು ನೀನು ಅದು ಹೇಗೆ ನಿರೀಕ್ಷಿಸುತ್ತಿರುವೆ?" ಎಂದು ಸನ್ಯಾಸಿ ಕೇಳಿದನು. ಈ ಪ್ರಶ್ನೆಗೆ ಏನು ಉತ್ತರ ನೀಡಬೇಕೆಂದು ತಿಳಿಯದೆ ಮೊಲವು ಕಣ್ಣುಕಣ್ಣು ಬಿಟ್ಟಿತು. "ಸರಿ, ನೀನು ಯಾರೊಂದಿಗೆ ಓಡುತ್ತಿರುವೆ?" ಎಂದು ಸನ್ಯಾಸಿ ಮತ್ತೆ ಕೇಳಿದನು.



"ನಾನು ಆಮೆಯ ವಿರುದ್ಧ ಸ್ಪರ್ಧಿಸುತ್ತಿದ್ದೇನೆ."

"ಸರಿ, ಇಂದು ನೀನು ಆಮೆಗೆ ನಿನ್ನ ವೇಗವನ್ನು ಸಾಬೀತುಪಡಿಸಬೇಕು. ನಾಳೆ ಒಂದು ಜಿಂಕೆ ಬರುತ್ತದೆ. ಅದರ ಮರುದಿನ ಚಿರತೆ ಬರುತ್ತದೆ. ನೀನು ನಿನ್ನ ಇಡೀ ಜೀವನವನ್ನು ಹೀಗೆ ಎಲ್ಲರೊಂದಿಗೆ ಸ್ಪರ್ಧಿಸುತ್ತಾ ಮತ್ತು ನಿನ್ನ ವೇಗವನ್ನು ಸಾಬೀತುಪಡಿಸುತ್ತಾ ಕಳೆಯುತ್ತೀಯಾ?" ಸನ್ಯಾಸಿ ಕೇಳಿದನು. ಮೊಲ ಯೋಚಿಸಿತು.

"ನೀವು ಹೇಳಿದ್ದು ಸರಿ. ನೀವು ನನ್ನ ಕಣ್ಣುಗಳನ್ನು ತೆರೆದಿದ್ದೀರಿ. ಯಾರೊಂದಿಗೂ ಸ್ಪರ್ಧಿಸುವುದು ನನ್ನ ಕೆಲಸವಲ್ಲ. ನಾನು ನನ್ನ ಜೀವನವನ್ನು ನನಗೆ ಬೇಕಾದ ರೀತಿಯಲ್ಲಿ ಬದುಕಲು ಬಯಸುತ್ತೇನೆ. ನಾನು ಓಟವನ್ನು ಇಲ್ಲಿಗೇ ಬಿಡುತ್ತಿದ್ದೇನೆ" ಎಂದು ಮೊಲ ಸನ್ಯಾಸಿಗೆ ಧನ್ಯವಾದ ಹೇಳಿ, ಜಲಪಾತದ ಹರಿಯುವ ನೀರಿನ ಬಳಿಗೆ ಹೋಗಿ ಅದರಲ್ಲಿ ಜಿಗಿದು ಸಂತೋಷದಿಂದ ಈಜಲು ತೊಡಗಿತು.

"ಮೊಲ ಓಟದಲ್ಲಿ ಸೋತಿರಬಹುದು, ಆದರೆ ಅದು ತನ್ನ ಜೀವನದ ಆನಂದವನ್ನು ಮರಳಿ ಪಡೆಯಿತು" ಎಂಬ ಮಾತುಗಳೊಂದಿಗೆ ಈ ಕಥೆ ಮುಕ್ತಾಯಗೊಳ್ಳುತ್ತದೆ. ಈ ಕಥೆಯ ನೀತಿ ಏನೆಂದರೆ, ಅರ್ಥಹೀನ ಸ್ಪರ್ಧೆಗಳಲ್ಲಿ ಭಾಗಿಯಾಗದೆ, ಇತರರಿಗಾಗಿ ಏನನ್ನೋ ಮಾಡುವುದಕ್ಕೆ ಬದಲಾಗಿ, ಜೀವನದಲ್ಲಿ ನಿಮಗೆ ಬೇಕಾದುದನ್ನು ಮಾಡಿದರೆ ಬದುಕಿನಲ್ಲಿ ನೀವು ಗೆಲ್ಲಬಹುದು. ಇದೇ ಈ ಕಥೆ ತಿಳಿಸುವ ನೀತಿ.

ದೇಹಕ್ಕೆ ಒಳ್ಳೆಯದಾಗಿರುವ ಅನೇಕ ಆಹಾರಗಳಲ್ಲಿ ರುಚಿ ಸ್ವಲ್ಪ ಕಡಿಮೆ ಇರುತ್ತದೆ. ಅದಕ್ಕಾಗಿಯೇ ಮಕ್ಕಳು ಅವುಗಳನ್ನು ತಿನ್ನಲು ನಿರಾಕರಿಸುತ್ತಾರೆ. ನಾವು ಕಷ್ಟಪಟ್ಟು ಅದನ್ನು ಮಕ್ಕಳಿಗೆ ತಿನ್ನಿಸುವಂತೆಯೇ, ಅವರಲ್ಲಿ ಸದ್ಗುಣಗಳನ್ನು ಸಹ ಬೆಳೆಸಬೇಕು. ನಾವು ಸಿಹಿಯಲ್ಲಿ ಕಹಿ ಔಷಧಿಯನ್ನು ಮರೆಯಾಗಿ ಬೆರೆಸಿ ನೀಡುವಂತೆಯೇ, ನಮ್ಮ ಪೂರ್ವಜರು ಕಥೆಗಳಲ್ಲಿ ನೀತಿಯನ್ನು ಬೆರೆಸಿದ್ದಾರೆ. ಸದ್ಗುಣಗಳನ್ನು ಅಳವಡಿಸಿಕೊಳ್ಳುವುದು ಜೀವನದಲ್ಲಿ ನಮಗೆ ಸಹಾಯ ಮಾಡುತ್ತದೆ. ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ಪ್ರತ್ಯೇಕಿಸಲು ಸದ್ಗುಣಗಳು ನಮಗೆ ಸಹಾಯ ಮಾಡುತ್ತವೆ. ಒಳ್ಳೆಯದು ಮತ್ತು ಕೆಟ್ಟದ್ದು ಯಾವುದು ಎಂಬುದನ್ನು ತಿಳಿಯಲು ಮತ್ತು ಒಳ್ಳೆಯದರ ಬದಿಯಲ್ಲಿ ನಿಲ್ಲಲು ಅವು ನಮಗೆ ಮಾಡುತ್ತವೆ. ನಾವು ಯಾವ ರೀತಿಯ ಜನರೊಂದಿಗೆ ಸಂಬಂಧ ಹೊಂದಿರಬೇಕು ಎಂಬುದನ್ನು ಅವು ನಮಗೆ ತೋರಿಸಿ ಕೊಡುತ್ತವೆ.

ಕುಟುಂಬ, ಸ್ನೇಹಿತರು, ಶಾಲೆ, ಸಮಾಜ ಮತ್ತು ಸರ್ಕಾರ ಹೀಗೆ ಎಲ್ಲಿಂದಲಾದರೂ ನೈತಿಕತೆಯನ್ನು ಕಲಿಯಬಹುದು. ಅವು ಪ್ರತಿಯೊಬ್ಬರಿಗೂ ದೈನಂದಿನ ಅಭ್ಯಾಸಗಳು ಮತ್ತು ಜೀವನದ ಗುರಿಗಳಾಗುತ್ತವೆ. ಅವು ವ್ಯಕ್ತಿಯ ನಡವಳಿಕೆ, ಮಾತು, ಕಾರ್ಯಗಳು ಮತ್ತು ಪಾತ್ರವನ್ನು ನಿರ್ಧರಿಸುತ್ತವೆ. ಮಕ್ಕಳು ಬೆಳೆದಂತೆ, ಆ ನೈತಿಕತೆಗಳು ಅವರಿಗೆ ಮೌಲ್ಯವನ್ನು ನೀಡುತ್ತವೆ. ಒಬ್ಬ ವ್ಯಕ್ತಿಯು ಯಾವ ರೀತಿಯ ವ್ಯಕ್ತಿಯಾಗುತ್ತಾನೆ ಎಂಬುದನ್ನು ಅವರು ಅನುಸರಿಸುವ ಮೌಲ್ಯಗಳಿಂದ ನಿರ್ಧರಿಸಲಾಗುತ್ತದೆ. ಈ ನೈತಿಕತೆ ಜೀವನದುದ್ದಕ್ಕೂ ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸಲು ಅವರಿಗೆ ಸಹಾಯ ಮಾಡುತ್ತವೆ.

## ಮಕ್ಕಳಲ್ಲಿ ನೈತಿಕತೆಯನ್ನು ಹೇಗೆ ಬೆಳೆಸುವುದು?

- ಯಾವುದೇ ಅಭ್ಯಾಸವನ್ನಾಗಲೀ, ನೀವು ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಕಲಿಸಿದರೆ ಅವು ಅವರಲ್ಲಿ ಜೀವನಪರ್ಯಂತ ಉಳಿಯುವ ಅಭ್ಯಾಸಗಳಾಗುತ್ತದೆ. ಆದುದರಿಂದ ಚಿಕ್ಕ ವಯಸ್ಸಿನಿಂದಲೇ ಮೂಲಭೂತ ಉತ್ತಮ ಅಭ್ಯಾಸಗಳನ್ನು ಕಲಿಸಿ. ಯಾರಲ್ಲಿ ಏನೇ ಸಹಾಯ ಕೇಳುವುದಾದರೂ ಮೊದಲಿಗೆ ವಿನಮ್ರವಾಗಿ "ದಯವಿಟ್ಟು" ಎಂದು ಹೇಳುವುದು ಮತ್ತು ಯಾರಾದರೂ ಯಾವುದೇ ಸಹಾಯ ಮಾಡಿದಾಗಲೂ "ಧನ್ಯವಾದಗಳು" ಎಂದು ಹೇಳುವುದು ಅವರ ಸಹಜ ಅಭ್ಯಾಸಗಳಾಗಲಿ.

- ಮಕ್ಕಳು ಪೋಷಕರು ಹೇಳುವುದರಿಂದ ಮಾತ್ರವಲ್ಲ, ಪೋಷಕರು ಮಾಡುವ ಕೆಲಸಗಳನ್ನು ನೋಡಿಯೂ ಕಲಿಯುತ್ತಾರೆ. ವಯಸ್ಕರು ಮಕ್ಕಳು ಅನುಸರಿಸಬೇಕಾದ ಉತ್ತಮ ಅಭ್ಯಾಸಗಳನ್ನು ಮೊದಲು ತಾವು ಹೊಂದಿರಬೇಕು. ಎಲ್ಲರೊಂದಿಗೂ ದಯೆಯಿಂದ ಮಾತನಾಡುವುದು, ಕೋಪವನ್ನು ನಿಯಂತ್ರಿಸಿಕೊಳ್ಳುವುದು ಮತ್ತು ಇತರರಿಗೆ ಸಹಾಯ ಮಾಡುವ ಮೂಲಕ ಮಕ್ಕಳಿಗೆ ಉತ್ತಮ ಮಾದರಿಯಾಗಿರಿ.

- ಉತ್ತಮ ನೀತಿಗಳನ್ನು ಪಾಲಿಸುವುದರಿಂದ ನಿಮ್ಮ ಜೀವನದಲ್ಲಿ ಎಂತಹ ಪ್ರಯೋಜನಗಳಾಗಿವೆ ಎಂಬುದರ ಕುರಿತು ಅವರಿಗೆ ಕಥೆಗಳನ್ನು ಹೇಳಿ. ಅವರೂ ಹಾಗೆಯೇ ಮಾಡುತ್ತಾರೆ.

- ಮಕ್ಕಳು ಉತ್ತಮ ನೀತಿಗಳನ್ನು ಬದುಕಿನಲ್ಲಿ ಅನುಸರಿಸಲು ಅವರಿಗೆ ಸಹಾಯ ಮಾಡಿ. ಅವರ ಒಳ್ಳೆಯ ಗುಣಗಳು ಮತ್ತು ಒಳ್ಳೆಯ ಕಾರ್ಯಗಳನ್ನು ಶ್ಲಾಘಿಸಿ. ಇದು ಮಕ್ಕಳನ್ನು ಪ್ರೇರೇಪಿಸುತ್ತದೆ ಮತ್ತು ಅವರನ್ನು ಉತ್ತಮ ವ್ಯಕ್ತಿಗಳನ್ನಾಗಿ ಮಾಡುತ್ತದೆ. ●



## ತಾಳ್ಮೆಯಿಂದ ಹೇಳಿ ಕೊಡಿ!

ತಾಯಿ ತಲೆದಿಂಬುಗಳ ಚೀಲ ಬದಲಾಯಿಸುತ್ತಲೇ, ತನ್ನ ಪುಟ್ಟ ಮಗನಿಗೆ ಲೆಕ್ಕ ಮಾಡಲು ಕಲಿಸುತ್ತಿದ್ದಳು. ಪದೇ ಪದೇ ಸೂಚನೆಗಳನ್ನು ನೀಡುತ್ತಿದ್ದರೂ, ಅವನಿಗೆ ಸರಿಯಾಗಿ ಲೆಕ್ಕ ಮಾಡಲು ಸಾಧ್ಯವಾಗಲಿಲ್ಲ. ತಾಯಿ ಕೋಪಗೊಂಡು ಮಗನನ್ನು ಗದರಿಸಲಾರಂಭಿಸಿದಳು. ಅವನು ಭಯಭೀತನಾಗಿದ್ದನು ಮತ್ತು ಇನ್ನೂ ಅಳತೊಡಗಿದನು. ಆದ-ರೆ ಸರಿಯಾಗಿ ಲೆಕ್ಕ ಮಾಡಲು ಮಾತ್ರ ಅವನಿಂದ ಸಾಧ್ಯವಾಗಲಿಲ್ಲ. ಒಂದು ಹಂತದಲ್ಲಿ ತಾಯಿ ಬೇಸರದ ಸ್ವರದಲ್ಲಿ, "ಸರಿ ನೀನಿನ್ನು ಓದುವ ಅಗತ್ಯವಿಲ್ಲ... ಹೋಗು, ಆಟವಾಡಿಕೋ" ಎಂದಳು.

ತಾಯಿ ಮಗನ ಮೇಲಿನ ತನ್ನ ಕೋಪವನ್ನೆಲ್ಲ ದಿಂಬಿಗೆ ಹೊದಿಕೆಯನ್ನು ಹಾಕುವುದರಲ್ಲಿ ತೋರಿಸಿದಳು. ಅವಳು ದಿಂಬನ್ನು ಚೀಲದೊಳಕ್ಕೆ ತುರುಕಿ ನಂತರ ಅದನ್ನು ಮೇಲಕ್ಕೆತ್ತಿ ಅಲ್ಲಾಡಿಸಿದಳು. ಅವಳು ಸತತವಾಗಿ ಎರಡು ದಿಂಬುಗಳಿಗೆ ಹೀಗೆ ಚೀಲ ಹಾಕಿದ ಮೇಲಷ್ಟೇ ಒಂದು ವಿಷಯವನ್ನು ಗಮನಿಸಿದಳು. ಮೊದಲು ನಿಧಾನವಾಗಿ ಚೀಲದೊಳಗೆ ದಿಂಬನ್ನು ತುರುಕಿ, ನಂತರ ಅದನ್ನು ಮೇಲೆತ್ತಿ ಅಲ್ಲಾಡಿಸಿ, ಆ ನಂತರ ಅದನ್ನು ವೇಗವಾಗಿ ಒತ್ತುತ್ತಿದ್ದೇನೆ ಎಂಬುದನ್ನು ಅವಳು ಗಮನಿಸಿದಳು.

"ಮೃದುವಾದ ಮೆತ್ತನೆಯ ದಿಂಬನ್ನು, ರೇಷ್ಮೆಯಂತೆ ನುಣುಪಾದ ಚೀಲದೊಳಗೆ ಸೇರಿಸುವುದಕ್ಕೇ ಇಷ್ಟೊಂದು ಕೌಶಲ್ಯ ಬೇಕಾದಾಗ, ಏಳು ವರ್ಷದ ಮಗನ ಮೆದುಳಿನಲ್ಲಿ ಲೆಕ್ಕ ಹಾಕುವುದು ಹೇಗೆ ಎಂಬ ವಿಧಾನವನ್ನು ಸೇರಿಸಲು ಎಷ್ಟು ತಾಳ್ಮೆ ಇರಬೇಕು? ಆದರೆ ನಾನು ತಾಳ್ಮೆ ಕಳೆದುಕೊಂಡು ಮಗನ ಮೇಲೆ ಕೋಪ ಮಾಡಿಕೊಂಡು ಅವನನ್ನು ಜೋರಾಗಿ ಗದರಿಸಿ ಬಿಟ್ಟೆನಲ್ಲಾ" ಎಂದು ಆಕೆ ಯೋಚಿಸಿದಳು!

ಮಗನನ್ನು ಪ್ರೀತಿಯಿಂದ ಹತ್ತಿರ ಕರೆದಳು. ಸ್ವಲ್ಪ ಹೊತ್ತು ಅವನೊಂದಿಗೆ ಆಟವಾಡಿದ ನಂತರ, ಶಾಂತವಾಗಿ ಅವನಿಗೆ ಕೂಡುವುದು ಮತ್ತು ಕಳೆಯುವುದು ಹೇಗೆ ಎಂಬುದನ್ನು ಕಲಿಸಿದಳು. ಈಗ ಅವನಿಗೆ ಸ್ವಲ್ಪ ಮಟ್ಟಿಗೆ ಅರ್ಥವಾಯಿತು. ಮುಂದಿನ ಅರ್ಧ ಗಂಟೆಯಲ್ಲಿ ಸಂಕಲನ ಮತ್ತು ವ್ಯವಕಲನದಲ್ಲಿ ಅವನಿಗೆ ಏನು ಕೊಟ್ಟರೂ ಅದನ್ನು ಮಾಡುವಷ್ಟು ಕೌಶಲ್ಯವನ್ನು ಅವನು ಪಡೆದುಕೊಂಡಿದ್ದನು.

ಶಿಕ್ಷಕರಿಗೆ ಮತ್ತು ಪೋಷಕರಿಗೆ ಈ ತಾಳ್ಮೆ ಬೇಕು. ಮಕ್ಕಳು ಎಷ್ಟೇ ಗೊಂದಲಕ್ಕೊಳಗಾಗಿದ್ದರೂ, ತಾಳ್ಮೆಯಿಂದ ಅವರಿಗೆ ಕಲಿಸಬೇಕು.

## ಹಸಿವಾದರೆ ಬರುತ್ತಾರೆ !

ಯುವ ಪೀಳಿಗೆಯನ್ನು ಬೆಕ್ಕಿನ ಮರಿಗಳಿಗೆ ಹೋಲಿಸಿ ಅನೇಕ ವಿಷಯಗಳನ್ನು ಹೇಳುತ್ತಾರೆ. ಬೆಕ್ಕಿಗೆ ನೀವು ಎಂತಹ ಮುದ್ದಾದ ಹೆಸರನ್ನಿಟ್ಟು, ಆ ಹೆಸರಿನಿಂದ ಕರೆದರೂ ಆ ಬೆಕ್ಕು ನಿಮ್ಮತ್ತ ತಿರುಗಿ ಕೂಡ ನೋಡುವುದಿಲ್ಲ. ಅಸಡ್ಡೆಯಾಗಿಯೇ ಕುಳಿತಿರುತ್ತದೆ. ಇಂದಿನ ತಲೆಮಾರಿನ ಯುವಕರೂ ಹಾಗೆಯೇ! ನೀವು ಎಷ್ಟೇ ಜಾಗರೂಕತೆಯಿಂದ ಅವರಿಗೆ ಬೇಕಾದುದೆಲ್ಲವನ್ನೂ ನೋಡಿ ನೋಡಿ ಮಾಡಿದರೂ ಅವರಿಗೆ ಅದು ಲೆಕ್ಕಕ್ಕೇ ಇರುವುದಿಲ್ಲ. ಬೆಕ್ಕುಗಳಿಗೆ ಕೂಡ ಹೀಗೆಯೇ, ಏನೇ ಮಾಡಿದರೂ ಅದಕ್ಕೆ ಅದು ಮುಖ್ಯವೆಂದು ತೋರುವುದಿಲ್ಲ. 'ನಮಗಾಗಿ ಇದನ್ನೆಲ್ಲ ಮಾಡಲು ಅವರು ಬದ್ಧರಾಗಿದ್ದಾರೆ ಮತ್ತು ಇದು ಅವರ ಕರ್ತವ್ಯ' ಎಂಬ ಮನೋಭಾವವನ್ನು ಇಂದಿನ ತಲೆಮಾರಿನವರು ಹೊಂದಿರುತ್ತಾರೆ. ಬೆಕ್ಕುಗಳು ಕೂಡ ಹಾಗೆಯೇ!

ಒಂದು ಬೆಕ್ಕಿನ ಮರಿ ಮನೆಯಿಂದ ಹೊರಗೆ ಹೋಗುವಾಗ, ಅದರ ತಾಯಿ ಬೆಕ್ಕು ಅಥವಾ ಇತರ ದೊಡ್ಡ ಬೆಕ್ಕುಗಳು ಅದರ ಜೊತೆಯಲ್ಲಿ ಇರುವುದಿಲ್ಲ. ಅದು ಒಂಟಿಯಾಗಿ ಹೋಗುತ್ತದೆ. ಸುರಕ್ಷತಾ ಕಾರಣಗಳಿಗಾಗಿ ವಯಸ್ಕರು ತಾವೂ ಜೊತೆಯಲ್ಲಿ ಬರುವುದಾಗಿ ಹೇಳಿದರೂ, ಯುವ ಪೀಳಿಗೆಗೆ ಅದು ಹಿಡಿಸುವುದಿಲ್ಲ. ಯಾರೂ ತಮ್ಮೊಂದಿಗೆ ಬರುವುದು ಬೇಡ ಎಂದು ಹೇಳಿ, ಹೊರಗೆ ಎಲ್ಲೆಲ್ಲೋ ಅಲೆದಾಡಿ, ತಡರಾತ್ರಿಯಲ್ಲಿ ಹಿಂತಿರುಗುವ ಬೆಕ್ಕಿನಂತೆ, ಯುವಕರು ಮೌನವಾಗಿ ಹಿಂತಿರುಗುತ್ತಾರೆ.

ಒಂದು ದಿನ ಒಂದು ಬೆಕ್ಕು ಹೀಗೇ ಹೊರಗೆ ಹೋಯಿತು. ಅದು ರಾತ್ರಿಯಾದರೂ ಮನೆಗೆ ಹಿಂತಿರುಗಲಿಲ್ಲ. ಅದರ ಮಾಲೀಕರು ಗಾಬರಿಗೊಂಡು ರಾತ್ರಿಯೆಲ್ಲ ಕಾದರು. ಮರುದಿನ ಬೆಳಿಗ್ಗೆ ಅವರು ಬೆಕ್ಕನ್ನು ಹುಡುಕಲು ಹೋದರು. ಅದು ತೋಟದ ಎತ್ತರವಾದ ಒಂದು ಮರದ ಕೊಂಬೆಯ ಮೇಲೆ ಎತ್ತರದಲ್ಲಿ ಕುಳಿತು 'ಮಿಯಾಂವ್' ಎಂದು ಕಿರುಚುತ್ತಿತ್ತು. ಅವರು ಕರೆದರೂ ಅದು ಕೆಳಗೆ ಬರಲಿಲ್ಲ

## ನೀವೇ ಸ್ವಂತವಾಗಿ ಯೋಚಿಸಿ!

ತರಗತಿಯಲ್ಲಿ ಎಂಟು ವರ್ಷದ ಬಾಲಕನೊಬ್ಬ ಕುಳಿತಿದ್ದ. ಆ ವಯಸ್ಸಿನಲ್ಲಿ ಅವನಿಗೆ ಶಾಲೆ ಮತ್ತು ಶಿಕ್ಷಕರ ಮೇಲೆ ಅಪಾರ ಬೇಸರವಿತ್ತು. ಆ ದಿನ ಡೈಚಿಕೋವಾ ಎಂಬ ಕಲಾ ಶಿಕ್ಷಕರು ಮೊದಲ ಬಾರಿಗೆ ತರಗತಿಯೊಳಗೆ ಬಂದರು.

"ನಿಮಗೆ ಏನನ್ನಿಸುತ್ತದೆಯೋ ಅದನ್ನೇ ನೀವು ಚಿತ್ರದಲ್ಲಿ ಬಿಡಿಸಿ" ಎಂದು ಅವರು ವಿದ್ಯಾರ್ಥಿಗಳಿಗೆ ಹೇಳಿದರು. ಇದನ್ನು ಕೇಳಿ ಹುಡುಗನಿಗೆ ಆಶ್ಚರ್ಯವಾಯಿತು. ಸಾಮಾನ್ಯವಾಗಿ ಕಲಾ ಶಿಕ್ಷಕರು ಕಪ್ಪು ಹಲಗೆಯ ಮೇಲೆ ಯಾವುದೋ ಒಂದು ಚಿತ್ರ ಬಿಡಿಸಿ, ವಿದ್ಯಾರ್ಥಿಗಳಿಗೆ ಅದನ್ನು ನಕಲಿಸುವಂತೆ ಹೇಳುತ್ತಿದ್ದರು. ಆದರೆ ಕಲಾ ಶಿಕ್ಷಕ ಡೈಚಿಕೋವಾ, "ನಿಮಗನ್ನಿಸಿದಂತೆ ಸ್ವತಂತ್ರವಾಗಿ ಚಿತ್ರ ರಚಿಸಿ" ಎಂದು ಹೇಳಿದರು. ಈ ಸ್ವಾತಂತ್ರ್ಯವು ಅವನನ್ನು ಪರಮಾನಂದಗೊಳಿಸಿತು. ಅವನು ತಕ್ಷಣ ಬಣ್ಣದ ಪೆನ್ಸಿಲ್‌ಗಳನ್ನು ತೆಗೆದು ಚಿತ್ರ ಬಿಡಿಸಲು ತೊಡಗಿದ. ಚಿತ್ರವು ಸ್ವಲ್ಪ ಮಟ್ಟಿಗೆ ಜೀವಂತವಾಯಿತು. ಆದಾಗ್ಯೂ, ಅದರಲ್ಲಿ ಏನೋ ತಪ್ಪಿದೆ ಎಂದು ತೋರುತ್ತಿತ್ತು. ಅವನು ಬೆರಳುಗಳನ್ನು ನೀರಿನಲ್ಲಿ ಅದ್ದಿ ಕೆಲವು ಬಣ್ಣಗಳ ಮೇಲೆ ನಿಧಾನವಾಗಿ ಉಜ್ಜಿದ. ಅದು ವಿಭಿನ್ನವಾದ ವರ್ಣ ಚಿತ್ರದಂತೆ ಕಾಣಿಸಿತು.

ಎಲ್ಲರೂ ಚಿತ್ರ ಬಿಡಿಸಿ ಮುಗಿಸಿದ ನಂತರ, ಶಿಕ್ಷಕ ಡೈಚಿಕೋವಾ ಎಲ್ಲಾ ಚಿತ್ರಗಳನ್ನು ತೆಗೆದುಕೊಂಡು ಗೋಡೆ-ಯ ಮೇಲೆ ಅಂಟಿಸಿದರು. ಈ ಹುಡುಗನ ಚಿತ್ರ ವಿಭಿನ್ನವಾಗಿ ಕಾಣುತ್ತಿದ್ದುದರಿಂದ ಇತರ ವಿದ್ಯಾರ್ಥಿಗಳು ನಕ್ಕರು. ಶಿಕ್ಷಕರು ಅವರನ್ನು ಗದರಿಸಿ ಸುಮ್ಮನಿರಿಸಿದರು.

"ತೇವಾಂಶದಿಂದ ಗಾಢ ಬಣ್ಣವನ್ನು ಅಳಿಸಿ ಹಾಕಿರುವುದು ಎಷ್ಟು ಸುಂದರವಾಗಿದೆ. ನೀವು ನಿಮ್ಮ ಸ್ವಂತ ಸೃಷ್ಟಿಯನ್ನು ರಚಿಸಬೇಕಾದದ್ದು ಮತ್ತು ಆನಂದಿಸಬೇಕಾದುದು ಹೀಗೆಯೇ. ಬೇರೆಯವರು ಏನು ಮಾಡುತ್ತಾರೆ ಎಂಬುದನ್ನು ನೋಡಬೇಡಿ. ನಕಲು ಮಾಡುವುದು ಸೃಜನಶೀಲ ಕೌಶಲ್ಯವಲ್ಲ" ಎಂದು ಅವರು ಆ ಹುಡುಗನನ್ನು ಹೊಗಳಿದರು. ಆ ದಿನ ತರಗತಿಯಲ್ಲಿ ಬಿಡಿಸಿದ ಚಿತ್ರಗಳಲ್ಲಿ ಅದನ್ನು ಅತ್ಯುತ್ತಮ ಚಿತ್ರವೆಂದು ಆರಿಸಿಕೊಂಡರು. ಆ ದಿನದಿಂದ ಆ ಹುಡುಗ ಏನನ್ನಾದರೂ ಚಿತ್ರಿಸುವಾಗ ಬೇರೆಯವರತ್ತ ಗಮನ ಕೊಡುತ್ತಿರಲಿಲ್ಲ. ಅವನು ತನ್ನದೇ ಆದ ಆಲೋಚನೆಗಳು ಮತ್ತು ಭಾವನೆಗಳೊಂದಿಗೆ ಚಿತ್ರ ರಚಿಸುತ್ತಿದ್ದನು.



ಈ ಘಟನೆ 100 ವರ್ಷಗಳ ಹಿಂದೆ ಜಪಾನ್‌ನಲ್ಲಿ ನಡೆದದ್ದು. ಆ ಹುಡುಗ ನಂತರ ಬೆಳೆದು ವಿಶ್ವದ ಶ್ರೇಷ್ಠ ನಿರ್ದೇಶಕನಾದ. ಇಂದಿಗೂ, ಚಲನಚಿತ್ರ ನಿರ್ಮಾಣವನ್ನು ಕಲಿಯಲು ಬರುವ ವಿದ್ಯಾರ್ಥಿಗಳು ಅವರ ಚಲನಚಿತ್ರಗಳನ್ನು ನೋಡುವ ಮೂಲಕ 'ವಿಶಿಷ್ಟ ಚಲನಚಿತ್ರಗಳನ್ನು ಹೇಗೆ ತಯಾರಿಸಬೇಕೆಂದು' ಕಲಿಯುತ್ತಾರೆ. ಅವರೇ ವಿಶ್ವದ ಶ್ರೇಷ್ಠ ನಿರ್ದೇಶಕ ಅಕಿರಾ ಕುರೋಸಾವಾ.

ಮಕ್ಕಳು ಸ್ವಂತವಾಗಿ ಯೋಚಿಸುವಂತೆ ಪ್ರೋತ್ಸಾಹಿಸುವುದಕ್ಕಿಂತ ಅವರಿಗೆ ದೊಡ್ಡ ಒಳಿತು ಇನ್ನೊಂದಿಲ್ಲ.

---

"ಕತ್ತಲೆಯಲ್ಲಿ ತಿಳಿಯದೆ ಅದು ಮರ ಹತ್ತಿರಬೇಕು. ಈಗ ಕೆಳಗೆ ಇಳಿಯುವುದು ಹೇಗೆಂದು ತಿಳಿಯದೆ ಭಯದಿಂದ ಕಿರುಚುತ್ತಿದೆ" ಎಂದು ಅವರು ತಪ್ಪಾಗಿ ಭಾವಿಸಿದರು. ಅವರು ತಕ್ಷಣ ಅಗ್ನಿಶಾಮಕ ದಳಕ್ಕೆ ಕರೆ ಮಾಡಿದರು. ಫೋನ್ ತೆಗೆದುಕೊಂಡ ಅಗ್ನಿಶಾಮಕ ದಳದ ನೌಕರ ತುಂಬಾ ಅನುಭವಿ. ಅವನು ಶಾಂತವಾಗಿ ಹೇಳಿದ: "ಚಿಂತಿಸಬೇಡಿ. ಬೆಕ್ಕುಗಳಿಗೆ ನಮಗಿಂತ ಚೆನ್ನಾಗಿ ಮರಗಳನ್ನು ಹತ್ತುವುದು ಮತ್ತು ಇಳಿಯುವುದು ಹೇಗೆಂದು ತಿಳಿದಿರುತ್ತದೆ. ಅದು ಭಯದಿಂದ ಕಿರುಚುತ್ತಿಲ್ಲ. ಅದು ಸುಮ್ಮನೆ ತಮಾಷೆಗಾಗಿ ಕಿರುಚಾಡುತ್ತಿದೆ. ಅದು ಶೀಘ್ರದಲ್ಲೇ ತಾನಾಗಿಯೇ ಕೆಳಗೆ ಇಳಿದು ಬರುತ್ತದೆ. ನೀವು ಸುಮ್ಮನೆ ಇದ್ದು ಬಿಡಿ ಅಷ್ಟೇ!" ಎಂದ.



ಮನೆಯ ಮಾಲೀಕರಿಗೆ ಇದು ಸರಿಯಾಗಿ ಅರ್ಥವಾಗಲಿಲ್ಲ. "ಅದು ಯಾವಾಗ ಇಳಿದು ಬರುತ್ತದೆ?" ಎಂದು ಮತ್ತೆ ಕೇಳಿದರು. "ಹಸಿವಾದಾಗ ಬರುತ್ತದೆ" ಎಂದು ಅಗ್ನಿಶಾಮಕ ದಳದ ನೌಕರ ಹೇಳಿದ. ಅವನು ಹೇಳಿದಂತೆಯೇ ಒಂದು ಗಂಟೆಯೊಳಗೆ ಬೆಕ್ಕು ಮನೆಯೊಳಕ್ಕೆ ಬಂದು, ಬಂದ ಕೂಡಲೇ ಹಾಲು ಕುಡಿಯಿತು.

ನಿಮ್ಮ ಮಕ್ಕಳ ಬಗ್ಗೆ ಕೂಡ ಚಿಂತಿಸಬೇಡಿ. ಅವರಿಗೆ ತಿಳಿವಳಿಕೆಯ ಹಸಿವು ಮತ್ತು ಪ್ರೀತಿಯ ಹಸಿವಾದಾಗ ಅವರು ಖಂಡಿತವಾಗಿಯೂ ಹಿರಿಯರ ಕಡೆಗೆ ತಿರುಗಿ ಬರುತ್ತಾರೆ.



# ಮೂರು ಸಲಹೆಗಳು!

ಯಾವುದೇ ಸಂಪನ್ಮೂಲಗಳಿಲ್ಲದ ಮತ್ತು ಆದಾಯ ಗಳಿಸುವ ಮಾರ್ಗವಿಲ್ಲದ ಹಳ್ಳಿಯಲ್ಲಿ, ಒಬ್ಬ ಯುವ ವಿವಾಹಿತ ದಂಪತಿಗಳು ವಾಸಿಸುತ್ತಿದ್ದರು. ಆ ಯುವಕ ಜೀವನೋಪಾಯವನ್ನು ಹುಡುಕುತ್ತಾ ದೂರದ ನಗರಕ್ಕೆ ಹೋಗಲು ನಿರ್ಧರಿಸಿದನು. "ನಾನು ದೂರದ ಊರಿಗೆ ಹೋಗಿ ಏನಾದರೂ ಕೆಲಸಕ್ಕೆ ಸೇರುತ್ತೇನೆ, ಅಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತೇನೆ ಮತ್ತು ಬಹಳಷ್ಟು ಹಣದೊಂದಿಗೆ ಹಿಂತಿರುಗುತ್ತೇನೆ. ಹಿಂದಿರುಗಲು ಎಷ್ಟು ವರ್ಷಗಳು ತೆಗೆದುಕೊಳ್ಳುತ್ತದೆಯೋ ನನಗೆ ತಿಳಿಯದು. ನನಗಾಗಿ ಕಾಯುತ್ತಿರು" ಎಂದು ಹೇಳಿ ಅವನು ಮನೆಯಿಂದ ಹೊರಟು ಹೋದನು.

ವಾಹನಗಳು ಅಥವಾ ಯಾವುದೇ ಬಗೆಯ ಸಾರಿಗೆ ವ್ಯವಸ್ಥೆ ಇಲ್ಲದ ಆ ದಿನಗಳಲ್ಲಿ, ಅವನು ಒಂದೇ ಸಮನೆ 20 ದಿನಗಳ ಕಾಲ ನಡೆದು ನಗರವನ್ನು ತಲುಪಿದ. ಅಲ್ಲಿ, ವಿವಿಧ ವ್ಯಾಪಾರಗಳಲ್ಲಿ ತೊಡಗಿದ್ದ ಒಬ್ಬ ಶ್ರೀಮಂತ ಜಮೀನ್ದಾರನ ಬಳಿ ಕೆಲಸ ಕೇಳಿ, ಅವನ ಬಳಿ ಕೆಲಸಕ್ಕೆ ಸೇರಿಕೊಂಡ. "ನನಗೆ ಮನೆಗೆ ಹೋಗಬೇಕು ಎಂದು ಅನ್ನಿಸಿದಾಗ ನನ್ನನ್ನು ಮನೆಗೆ ಕಳುಹಿಸಿದರೆ ಸಾಕು. ಅಲ್ಲಿಯವರೆಗೆ, ನನ್ನ ಸಂಬಳದ ಹಣವನ್ನು ನೀವೇ ಇಟ್ಟುಕೊಳ್ಳಿ. ನಾನು ಊರಿಗೆ ಹೋಗುವಾಗ ಎಲ್ಲವನ್ನೂ ಒಟ್ಟಿಗೇ ತೆಗೆದುಕೊಳ್ಳುತ್ತೇನೆ" ಎಂದು ಅವನು ಅವರ ಬಳಿ ಹೇಳಿದ. ಜಮೀನ್ದಾರನೂ ಒಪ್ಪಿಕೊಂಡ.

ಅಲ್ಲಿ ಅವನಿಗೆ ಉಳಿದುಕೊಳ್ಳಲು ಸ್ಥಳ ಮತ್ತು ದಿನಕ್ಕೆ ಮೂರು ಹೊತ್ತಿನ ಊಟ ನೀಡುತ್ತಿದ್ದರು. ಅವನ ಕಠಿಣ ಪರಿಶ್ರಮವನ್ನು ವ್ಯಾಪಾರಿ ತುಂಬಾ ಮೆಚ್ಚಿಕೊಂಡ. ತುಂಬಾ ಶೀಘ್ರದಲ್ಲೇ ಅವನು ಅವರಿಗೆ ಹತ್ತಿರವಾದ. ಅವನು ಬಹುತೇಕ ಆ ಜಮೀನಿನ ಮ್ಯಾನೇಜರ್‌ನಂತೆಯೇ ಆಗಿಬಿಟ್ಟ.

18 ವರ್ಷಗಳ ನಂತರ, ಅವನು ಮನೆಗೆ ಹೋಗಲು ಬಯಸಿ, ಅದನ್ನು ಜಮೀನ್ದಾರನಿಗೆ ತಿಳಿಸಿದ. “ಸರಿ, ನಿನ್ನ ಇಷ್ಟೂ ವರ್ಷಗಳ ಕಠಿಣ ಪರಿಶ್ರಮದ ಸಂಬಳ ನನ್ನ ಬಳಿ ಸುರಕ್ಷಿತವಾಗಿ ಇದೆ. ನಿನಗೆ ಆ ಎಲ್ಲಾ ಹಣವೂ ಬೇಕಾ? ಅಥವಾ ನಾನು ನಿನಗೆ ನೀಡಲಿರುವ ಮೂರು ಸಲಹೆಗಳು ಬೇಕಾ? ಇವೆರಡರಲ್ಲಿ ಒಂದನ್ನು ಮಾತ್ರ ನಾನು ನಿನಗೆ ನೀಡುತ್ತೇನೆ. ಏಕೆಂದರೆ ನೀನು ಹಣವನ್ನು ತೆಗೆದುಕೊಂಡು ಹೋದರೆ ದಾರಿಯಲ್ಲಿ ದರೋಡೆಕೋರರು ಅದನ್ನು ದೋಚಿಕೊಳ್ಳಬಹುದು. ಆದರೆ ನಾನು ನೀಡುವ ಸಲಹೆಯು ನಿನ್ನ ಜೀವನದಲ್ಲಿ ದೀರ್ಘಕಾಲದವರೆಗೆ ನಿನಗೆ ಮಾರ್ಗದರ್ಶಿಯಾಗಿರುತ್ತದೆ. ನಿನಗೆ ಏನು ಬೇಕು ಎಂದು ಚೆನ್ನಾಗಿ ಯೋಚಿಸು ಮತ್ತು ನಾಳೆ ಬೆಳಿಗ್ಗೆ ಅದನ್ನು ನನಗೆ ಹೇಳು” ಎಂದು ಜಮೀನ್ದಾರನು ಹೇಳಿದನು.

ರಾತ್ರಿಯಿಡೀ ಅವನು ಇದನ್ನು ಕುರಿತೇ ಯೋಚಿಸುತ್ತಿದ್ದನು. ಹಣವನ್ನು ತೆಗೆದುಕೊಂಡು ಹೋಗಿ ದಾರಿಯಲ್ಲಿ ಅದನ್ನು ಕಳ್ಳಕಾಕರರಿಗೆ ಒಪ್ಪಿಸುವುದಕ್ಕಿಂತ ಸಲಹೆಯನ್ನು ತೆಗೆದುಕೊಳ್ಳುವುದೇ ಉತ್ತಮ ಎಂದು ಅವನು ನಿರ್ಧರಿಸಿದನು. ಆದರೆ, ಇನ್ನೊಂದೆಡೆ ಇಷ್ಟು ವರ್ಷಗಳ ಕಾಲ ಕಷ್ಟಪಟ್ಟು ಕೆಲಸ ಮಾಡಿದ ನಂತರ ಬರಿಗೈಯಲ್ಲಿ ಮನೆಗೆ ಮರಳುತ್ತಿದ್ದೇನಲ್ಲಾ ಎಂಬ ಚಿಂತೆ ಅವನಿಗಿತ್ತು. ಆದರೆ, ಇಷ್ಟು ದಿನ ತನ್ನ ಮೇಲೆ ದಯೆ ತೋರಿದ ಈ ಜಮೀನ್ದಾರ ತನ್ನ ಒಳಿತಿಗಾಗಿಯೇ ಏನೋ ಹೇಳಲಿದ್ದಾನೆ ಎಂದು ಅವನು ಯೋಚಿಸಿದನು.

ಮರುದಿನ ಅವನು ಜಮೀನ್ದಾರನ ಬಳಿಗೆ ಹೋಗಿ, "ನನಗೆ ಹಣ ಬೇಡ. ನನಗೆ ನಿಮ್ಮ ಸಲಹೆ ಬೇಕು" ಎಂದನು. ರೈತ ಮುಗುಳ್ನಗುತ್ತಾ ಅವನಿಗೆ ಮೂರು ಸಲಹೆಗಳನ್ನು ನೀಡಿದನು.

1. ಜೀವನದಲ್ಲಿ ಎಂದಿಗೂ ಅಡ್ಡದಾರಿಯಲ್ಲಿ ಹೋಗಬೇಡ. ಗೊತ್ತಿಲ್ಲದ ಹಾದಿಯಲ್ಲಿ ಹಠಾತ್ತನೆ ಪ್ರವೇಶಿಸಿ ಹೆಜ್ಜೆ ಇಡುವುದು ಜೀವಕ್ಕೆ ಅಪಾಯ ತರಬಹುದು.

2. ಅವಸರ ಪಟ್ಟು ಜೀವನದಲ್ಲಿ ಯಾವ ವಿಷಯದಲ್ಲೂ ಮುನ್ನುಗ್ಗಬೇಡ. ಅದು ಕೆಟ್ಟ ಸಂಗತಿಯಾಗಿದ್ದರಂತೂ ಅದು ನಿನ್ನನ್ನೇ ಬಲಿ ತೆಗೆದುಕೊಂಡು ಬಿಡಬಹುದು.

3. ಕೋಪದಲ್ಲಿರುವಾಗಲೂ ಮತ್ತು ನೋವಿನಲ್ಲಿರುವಾಗಲೂ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು. ನಂತರ ಅದಕ್ಕಾಗಿ ಪಶ್ಚಾತ್ತಾಪಪಟ್ಟರೂ ಸಹ, ಅದರಿಂದಾದ ನಷ್ಟವನ್ನು ಮರಳಿ ಪಡೆಯಲು ಸಾಧ್ಯವಿಲ್ಲ.

ಈ ಮೂರು ಸಲಹೆಗಳನ್ನು ನೀಡಿದ ನಂತರ ರೈತ, "ನೀನು ನಡೆದುಕೊಂಡು ಹೋದರೆ, ನಿಮ್ಮ ಹಳ್ಳಿಯನ್ನು ತಲುಪಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ನಾನು ನಿನಗೆ ಒಂದು ಎತ್ತಿನ ಬಂಡಿ ಕೊಡುತ್ತೇನೆ. ನೀನು 10 ದಿನಗಳಲ್ಲಿ ನಿಮ್ಮೂರಿಗೆ ಹೋಗಬಹುದು" ಎಂದು ಹೇಳಿ, ಅವನಿಗೆ ಒಂದು ಜೋಡಿ ಎತ್ತುಗಳನ್ನು ಹೊಂದಿರುವ ಬಂಡಿಯನ್ನು ಕೊಟ್ಟನು. ದಾರಿಯಲ್ಲಿ ಆಹಾರ ತಿನ್ನಲು ಮತ್ತು ಛತ್ರಗಳಲ್ಲಿ ಉಳಿದುಕೊಳ್ಳಲು ಅಗತ್ಯವಾಗಿ ಬೇಕಾದ ಹಣವನ್ನು ಕೂಡ ಕೊಟ್ಟನು. ಇಷ್ಟೇ ಅಲ್ಲದೆ ಮನೆಯಲ್ಲಿ ತಯಾರಿಸಿದ ಒಂದು ದೊಡ್ಡ ಕೇಕ್‌ನಂತಹ ಖಾದ್ಯವನ್ನು ಒಂದು ದೊಡ್ಡ ಡಬ್ಬಿಯಲ್ಲಿ ಹಾಕಿ ಮನೆಗೆ ತೆಗೆದುಕೊಂಡು ಹೋಗಿ ಎಲ್ಲರೊಂದಿಗೆ ಹಂಚಿಕೊಂಡು ತಿನ್ನುವಂತೆ ಅವನಿಗೆ ಕೊಟ್ಟನು. "ನಿನಗೆ ಎಷ್ಟೇ ಹಸಿವಾದರೂ ಸರಿ, ದಾರಿಯಲ್ಲಿ ಇದನ್ನು ತಿನ್ನಬಾರದು. ನೀನು ಮನೆಗೆ ಹೋದ ಮೇಲೆ, ನಿನ್ನ ಹೆಂಡತಿಯೊಂದಿಗೆ ಕುಳಿತು ಇದನ್ನು ತಿನ್ನಬೇಕು ಹಾಗೆ ಮಾಡುವುದರಿಂದ ನಿನಗೆ ಸಂತೋಷವಾಗುತ್ತದೆ" ಎಂದು ಜಮೀನ್ದಾರ ತಿಳಿಸಿದನು.

ಜಮೀನ್ದಾರ ಹೇಳಿದ ಯಾವುದನ್ನೂ ಅವನು ವಿರೋಧಿಸಲಿಲ್ಲ. ಅವರು ತಿಳಿಸಿದಂತೆಯೇ ನಡೆದುಕೊಳ್ಳುತ್ತೇನೆಂದು ಹೇಳಿ ಮನೆಯ ಕಡೆಗೆ ಹೊರಟನು. ಮೊದಲ ದಿನದ ಪ್ರಯಾಣದ ಕೊನೆಯಲ್ಲಿ, ಒಬ್ಬ ದಾರಿ ಹೋಕ, "ನಾನೂ ನಿಮ್ಮ ಗಾಡಿಯಲ್ಲಿ ಬರಬಹುದೇ?" ಎಂದು ಕೇಳಿ ಇವನ ಬಂಡಿಗೆ ಹತ್ತಿಕೊಂಡನು. ಅವನು ಮಾತನಾಡುತ್ತಾ, ಇವನು ಹೋಗುವ ಸ್ಥಳದ ಬಗ್ಗೆ ಕೇಳಿ ತಿಳಿದುಕೊಂಡನು ಮತ್ತು "ನೀವು ಹೆದ್ದಾರಿಯ ಮೂಲಕ ಏಕೆ ಹೋಗುತ್ತಿದ್ದೀರಿ? ಈ ದಾರಿಯಲ್ಲಿ ಹೋದರೆ ಆ ಊರಿಗೆ ತಲುಪಸಲು 10 ದಿನಗಳಾಗುತ್ತದೆ. ಹತ್ತಿರದ ಪರ್ವತಗಳ ಮೂಲಕ ಹಾದು ಹೋಗುವ ಒಂದು ಅರಣ್ಯ ಮಾರ್ಗವಿದೆ. ಆ ದಾರಿಯಲ್ಲಿ ಹೋದರೆ, ಕೇವಲ ನಾಲ್ಕು ದಿನಗಳಲ್ಲಿ ಹಳ್ಳಿಯನ್ನು ತಲುಪಬಹುದು" ಎಂದು ಅವನು ಸಲಹೆ ನೀಡಿದನು.

ಅವನು ಹೇಳಿದ ದಾರಿಯಲ್ಲಿ ಹೋಗಲು ಬಂಡಿಯನ್ನು ತಿರುಗಿಸುತ್ತಿದ್ದಂತೆ, ಜಮೀನ್ದಾರನ ಮೊದಲ ಸಲಹೆ ಅವನಿಗೆ ನೆನಪಾಯಿತು.



"ಅಡ್ಡದಾರಿಗಳಲ್ಲಿ ಪ್ರಯಾಣಿಸುವುದು ಅಪಾಯಕಾರಿಯಾದುದು. ಎಷ್ಟು ದಿನಗಳು ಬೇಕಾದರೂ ಆಗಲಿ, ಪರವಾಗಿಲ್ಲ. ನಾನು ನೇರವಾದ ದಾರಿಯಲ್ಲೇ ಹೋಗುತ್ತೇನೆ" ಎಂದು ಹೇಳಿ ಅವನು ಮತ್ತೆ ಬಂಡಿಯನ್ನು ಹೆದ್ದಾರಿಯ ಕಡೆಗೇ ತಿರುಗಿಸಿಕೊಂಡನು.

ಎರಡು ದಿನಗಳ ನಂತರ ಒಂದು ಛತ್ರದಲ್ಲಿ ರಾತ್ರಿ ತಂಗಿದ್ದಾಗ, ಪರ್ವತದ ಕಣಿವೆಯಲ್ಲಿ ಭೂಕುಸಿತ ಸಂಭವಿಸಿ ಆ ಹಾದಿಯಲ್ಲಿ ಸಾಗುತ್ತಿದ್ದ ಅನೇಕ ಜನರು ಸಾವನ್ನಪ್ಪಿದ್ದಾರೆಂಬ ಸುದ್ದಿ ಅವನಿಗೆ ತಿಳಿಯಿತು. "ರೈತನ ಸಲಹೆ ತನ್ನನ್ನು ಉಳಿಸಿತು" ಎಂದು ಭಾವಿಸಿ ಅವನು ನೆಮ್ಮದಿಯ ನಿಟ್ಟುಸಿರು ಬಿಟ್ಟನು.

ಛತ್ರದಲ್ಲಿ ಊಟ ಮುಗಿಸಿ ಮಲಗಲು ಸಿದ್ಧವಾಗುತ್ತಿದ್ದಾಗ, ಅವನ ಕೋಣೆಯ ಹಿಂಭಾಗದಲ್ಲಿ ದೊಡ್ಡ, ವಿಚಿತ್ರವಾದ ಕೂಗು ಕೇಳಿಸಿತು. ಬಾಗಿಲು ತೆರೆಯಲು ಹೋದವನಿಗೆ ರೈತನ ಎರಡನೇ ಸಲಹೆ ನೆನಪಾಯಿತು: "ಯಾವುದಕ್ಕೂ ಆತುರಪಡಬೇಡ". ಆದ್ದರಿಂದ ಅವನು, "ಶಬ್ದ ಕೇಳಿಸಿದರೆ ಕೇಳಿಸಲಿ, ಅದರಿಂದ ನನಗೇನಾಯಿತು! ಕೇಳಿಸಿದರೆ ಕೇಳಿಸಿಕೊಳ್ಳಲಿ ಬಿಡು" ಎಂದು ಅಂದುಕೊಂಡು ಅವನು ಸುಮ್ಮನೆ ಮಲಗಿಕೊಂಡನು.

ಮರುದಿನ ಬೆಳಿಗ್ಗೆ ಅವನು ಛತ್ರದವನ ಬಳಿ ಆ ಶಬ್ದದ ಬಗ್ಗೆ ವಿಚಾರಿಸಿದನು, "ನೀವು ಬಾಗಿಲು ತೆರೆಯದಿದ್ದುದೇ ಒಳ್ಳೆಯದು. ದರೋಡೆಕೋರರು ಹಾಗೆ ಶಬ್ದ ಮಾಡುತ್ತಾರೆ. ನೀವು ಬಾಗಿಲು ತೆರೆದಿದ್ದರೆ, ಅವರು ನಿಮ್ಮ ಮೇಲೆ ದಾಳಿ ಮಾಡಿ, ನಿಮ್ಮನ್ನು ಗಾಯಗೊಳಿಸಿ, ನಿಮ್ಮಲ್ಲಿದ್ದ ಎಲ್ಲವನ್ನೂ ತೆಗೆದುಕೊಂಡು ಹೋಗುತ್ತಿದ್ದರು" ಎಂದು ಅವನು ತಿಳಿಸಿದನು. ಇವನು ರೈತನ ಎರಡನೇ ಸಲಹೆಗಾಗಿ ಮತ್ತೊಮ್ಮೆ ಮನಸ್ಸಿನಲ್ಲೇ ಧನ್ಯವಾದ ಹೇಳಿದನು.

ಇನ್ನೂ ನಾಲ್ಕಾರು ದಿನಗಳ ಪ್ರಯಾಣದ ನಂತರ, ರಾತ್ರಿ ಅವನು ತನ್ನ ಊರನ್ನು ತಲುಪಿದನು. ಅವನು ತನ್ನ ಮನೆಯನ್ನು ಸಮೀಪಿಸುತ್ತಿದ್ದಂತೆ, ಅವನು ಕಂಡ ದೃಶ್ಯವು ಅವನನ್ನು ಬೆಚ್ಚಿ ಬೀಳಿಸಿತು. ಮನೆಯಲ್ಲಿ ದೀಪದ ಬೆಳಕಿನಲ್ಲಿ, ಬಾಗಿಲಿನ ಪರದೆಯ ಮೂಲಕ ಅವನ ಹೆಂಡತಿ ಯಾರನ್ನೋ ಅಪ್ಪಿಕೊಳ್ಳುತ್ತಿರುವುದನ್ನು ಅವನು ನೋಡುತ್ತಿದ್ದನು. ಅವನು ತಕ್ಷಣ ಒಳಗೆ ಹೋಗಿ ಅವರಿಬ್ಬರನ್ನೂ ಕೊಲ್ಲಲು ಯೋಚಿಸಿದನು. ಆದರೆ ಆ ಕ್ಷಣ ಅವನಿಗೆ, 'ಕೋಪದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಡ' ಎಂಬ ರೈತನ ಸಲಹೆ ನೆನಪಾಯಿತು.

ಅವನು ಸದ್ದಿಲ್ಲದೆ ಒಳಗೆ ಹೋದನು. ಅವನನ್ನು ನೋಡಿದ ಕೂಡಲೇ ಅವನ ಹೆಂಡತಿ ಸಂತೋಷದಿಂದ ಕೂಗುತ್ತಾ ತಾನು ಅಪ್ಪಿಕೊಂಡಿದ್ದ ಯುವಕನಿಗೆ, "ಹೇ, ನಿನ್ನ ತಂದೆ ಬಂದಿದ್ದಾರೆ ನೋಡು" ಎಂದು ಹೇಳಿದಳು. ಅವನು ಪಟ್ಟಣಕ್ಕೆ ಹೋದ ನಂತರ ಅವನ ಹೆಂಡತಿಗೆ ತಾನು ಗರ್ಭಿಣಿಯಾಗಿರುವುದು ತಿಳಿಯಿತು. ಆಗ ಅವಳಿಗೆ ಜನಿಸಿದ ಮಗ ಈಗಷ್ಟೇ ತನ್ನ ತಂದೆಯನ್ನು ನೋಡುತ್ತಿದ್ದಾನೆ. ರೈತನ ಮೂರನೇ ಸಲಹೆಯೇ ಅವನನ್ನು ಉಳಿಸಿದೆ ಎಂದು ಇವನು ಅರಿತುಕೊಂಡನು ಮತ್ತು ಅವನ ಮನಸ್ಸಿನಲ್ಲೇ ಅವನಿಗೆ ಧನ್ಯವಾದ ಹೇಳಿದನು.

ರೈತ ಕೊಟ್ಟ ಆಹಾರವನ್ನು ತಿನ್ನಲು ಮೂವರೂ ಕುಳಿತುಕೊಂಡರು. ಪಾತ್ರೆಯಿಂದ ಖಾದ್ಯವನ್ನು ತೆಗೆದು ಕತ್ತರಿಸಿದಾಗ ಅದರ ಒಳಗಿನಿಂದ ಚಿನ್ನದ ಗಟ್ಟಿಗಳು ಹೊರಗೆ ಬಿದ್ದವು. ಜಮೀನ್ದಾರ ತಾನು ಕೊಡಬೇಕಾದ ಸಂಬಳಕ್ಕಿಂತ ಹೆಚ್ಚು ಚಿನ್ನವನ್ನು ಅದರೊಳಗೆ ಇಟ್ಟಿದ್ದ!

ಸಲಹೆ ಯಾವಾಗಲೂ ನಮ್ಮನ್ನು ರಕ್ಷಿಸುತ್ತದೆ!

## ಸಣ್ಣ ಪಾಪ... ದೊಡ್ಡ ಪಾಪ!



ಒಬ್ಬ ಜ್ಞಾನಿಯ ಬಳಿಗೆ ಇಬ್ಬರು ವ್ಯಕ್ತಿಗಳು ಬಂದರು. ಮೊದಲನೆಯವನು, "ನಾನು ಒಂದು ದೊಡ್ಡ ಪಾಪವನ್ನು ಮಾಡಿದ್ದೇನೆ. ನನ್ನ ಮನಸ್ಸು ಪ್ರತಿದಿನ ಅದರಿಂದ ಹಿಂಸೆ ಅನುಭವಿಸುತ್ತಿದೆ. ನನ್ನ ಪಾಪದಿಂದ ನಾನು ಪಾರಾಗಬಹುದೇ?" ಎಂದು ಕೇಳಿದ. ಎರಡನೆಯವನು, "ನಾನು ಇವನಷ್ಟು ದೊಡ್ಡ ಪಾಪವನ್ನೇನೂ ಮಾಡಿಲ್ಲ. ನಾನು ಅನೇಕ ಸಣ್ಣ ತಪ್ಪುಗಳನ್ನು ಮತ್ತು ಅನೇಕ ಸಣ್ಣ ವಂಚನೆಗಳನ್ನು ಮಾಡಿದ್ದೇನೆ. ಇವೆಲ್ಲವೂ ದೇವರು ಶಿಕ್ಷಿಸುವಷ್ಟು ದೊಡ್ಡ ಪಾಪಗಳೇನು?" ಎಂದು ಕೇಳಿದ.

ಆ ಜ್ಞಾನಿ ಅವರಿಬ್ಬರನ್ನೂ ನೋಡಿ, ಮೊದಲನೆಯವನಿಗೆ, "ಹೋಗಿ ಒಂದು ದೊಡ್ಡ ಕಲ್ಲನ್ನು ಎತ್ತಿಕೊಂಡು ಬಾ" ಎಂದು ಹೇಳಿದ. ಅವನು ಎರಡನೆಯವನಿಗೆ ಒಂದು ಬುಟ್ಟಿಯನ್ನು ಕೊಟ್ಟು, "ಹೋಗಿ ಈ ಬುಟ್ಟಿಯಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ತುಂಬಿಸಿ ತೆಗೆದುಕೊಂಡು ಬಾ" ಎಂದು ಹೇಳಿದ. ಇಬ್ಬರೂ ಹಾಗೆಯೇ ಮಾಡಿದರು.

ಈಗ ಆ ಬುದ್ಧಿವಂತ ವ್ಯಕ್ತಿ ಹೇಳಿದ, "ಸರಿ, ಈಗ ನೀವಿಬ್ಬರೂ ತಂದ ವಸ್ತುಗಳನ್ನು ನೀವು ತಂದ ಸ್ಥಳದಲ್ಲೇ ತೆಗೆದುಕೊಂಡು ಹೋಗಿ ಇರಿಸಿ" ಎಂದ. ಮೊದಲ ವ್ಯಕ್ತಿ ಬಂಡೆಯನ್ನು

## ಯಾರೂ ತಡೆಯಲು ಸಾಧ್ಯವಿಲ್ಲ!

ಒಬ್ಬ ಹುಡುಗ ತನ್ನ ಶಾಲಾ ಟೆನಿಸ್ ತಂಡವನ್ನು ಸೇರುವ ಕನಸು ಕಾಣುತ್ತಾನೆ. ಏಕೆಂದರೆ ಆ ಶಾಲೆಯ ಕೆಲವು ಆಟಗಾರರು ಮುಂದೆ ವಿಶ್ವಪ್ರಸಿದ್ಧ ಆಟಗಾರರಾಗಿ ತುಂಬಾ ಹಣ ಮತ್ತು ಖ್ಯಾತಿಯನ್ನು ಗಳಿಸಿರುತ್ತಾರೆ. ಅವನೂ ಅವರಂತೆಯೇ ಆಗಲು ಬಯಸುತ್ತಾನೆ.

ಆದರೆ ಟೆನಿಸ್ ತರಬೇತಿ ಕೇಂದ್ರಕ್ಕೆ ಹೋಗಲು ಅಥವಾ ದುಬಾರಿ ರಾಕೆಟ್‌ಗಳು ಮತ್ತು ಚೆಂಡುಗಳನ್ನು ಖರೀದಿಸಲು ಅವನ ಬಳಿ ಹಣವಿರಲಿಲ್ಲ. ಅವನು ಪ್ರತಿದಿನ ಒಂಟಿಯಾಗಿ ಮನೆಯಲ್ಲಿ ಗಂಟೆಗಟ್ಟಲೆ ಅಭ್ಯಾಸ ಮಾಡುತ್ತಿದ್ದ. ಅವನು ಸರಳವಾದ ಟೆನಿಸ್ ರಾಕೆಟ್ ಖರೀದಿಸಿ ಗೋಡೆಗೆ ಚೆಂಡನ್ನು ಹೊಡೆಯುವುದನ್ನು ಅಭ್ಯಾಸ ಮಾಡುತ್ತಿದ್ದ. ಕೆಲವು ವಾರಗಳಲ್ಲಿ, ಅವನು ಚೆಂಡು ಗೋಡೆಗೆ ಹೇಗೆ ಬಡಿದರೂ ಅದನ್ನು ಹಿಂತಿರುಗಿಸಿ ಹೊಡೆಯಲು ಕಲಿತುಕೊಂಡ. ಅದು ಎಷ್ಟೇ ಕೆಟ್ಟದಾಗಿ ಹಿಂದಿರುಗಿದರೂ ಅದನ್ನು ಪ್ರತಿಯಾಗಿ ಹೊಡೆಯಬಲ್ಲವನಾಗಿದ್ದ.

ಆ ವರ್ಷದ ಶಾಲಾ ತಂಡಕ್ಕೆ ಅವನನ್ನು ಮೊದಲನೆಯವನನ್ನಾಗಿ ಕೋಚ್ ಸೇರಿಸಿಕೊಂಡರು. ಅದಕ್ಕೆ ಅವರು ನೀಡಿದ ಕಾರಣ, "ನಿನಗೆ ಅಚ್ಚುಕಟ್ಟಾಗಿ ಆಟ ಆಡಲು ಬಾರದೇ ಇರಬಹುದು. ಆದರೆ ನೀನು ಪ್ರತಿ ಚೆಂಡನ್ನೂ, ಒಂದನ್ನು ಕೂಡ ಬಿಡದೆ ಹಿಂತಿರುಗಿಸಿ ಹೊಡೆಯುತ್ತೀಯ. ಗೆಲ್ಲಲು ಅದು ತುಂಬ ಮುಖ್ಯ."

ಒಬ್ಬರು ಏನನ್ನಾದರೂ ನಿರಂತರವಾಗಿ, ದೃಢವಾಗಿ ಮತ್ತು ಸ್ಥಿರವಾಗಿ ಮಾಡಿದರೆ ಅವರು ಖಂಡಿತವಾಗಿಯೂ ಗೆಲ್ಲುತ್ತಾರೆ!

## ಜಗಳ ಏಕೆ?



ಒಬ್ಬ ಝೆನ್ ಸನ್ಯಾಸಿ ಇದ್ದ. ಅವನು ಪ್ರಸಿದ್ಧ ಜ್ಞಾನಿಯಾಗಿದ್ದರೂ ಸಹ ಭಿಕ್ಷೆ ಬೇಡುವ ಮೂಲಕ ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದ. ಒಂದು ದಿನ, ಅವನು ಆ ಹಳ್ಳಿಯ ಒಬ್ಬ ಶ್ರೀಮಂತನ ಮನೆಗೆ ಭಿಕ್ಷೆ ಬೇಡಲು ಹೋದ. ಆ ಶ್ರೀಮಂತನಿಗೆ ಈ ಸನ್ಯಾಸಿಯ ಶಕ್ತಿ ಮತ್ತು ಜ್ಞಾನ ಏನೆಂಬುದು ತಿಳಿದಿತ್ತು. ಆತ ಸನ್ಯಾಸಿಗೆ ನಮಸ್ಕರಿಸಿ ಅತ್ಯುತ್ತಮವಾದ ಆಹಾರವನ್ನು ನೀಡಿದ.

ನಂತರ ಅವನು ಅವರನ್ನು ಕೇಳಿದ: "ಸ್ವಾಮಿ, ಜನರು ಏಕೆ ಜಗಳವಾಡುತ್ತಾರೆ? ಶಾಂತಿಯುತ ಜೀವನ ಸಾಧ್ಯವಿಲ್ಲವೇ?" ಸನ್ಯಾಸಿ ಜೋರಾಗಿ ಉತ್ತರಿಸಿದ: "ನಾನು ಇಲ್ಲಿಗೆ ಆಹಾರ ಪಡೆಯಲು ಬಂದಿದ್ದೇನೆ. ನಾನು ನಿಮ್ಮ ಪ್ರಶ್ನೆಗೆ ಉತ್ತರಿಸಲು ಬಂದಿಲ್ಲ." ಶ್ರೀಮಂತ ಕೋಪಗೊಂಡ! "ಇದು ಯಾವ ರೀತಿಯ ಅಭ್ಯಾಸ? ನಾನು ನಿಮಗೆ ಆಹಾರ ನೀಡುತ್ತಿರುವಾಗ ನೀವು ನನ್ನೊಂದಿಗೆ ಹೀಗೆ ಮಾತನಾಡುವುದೇ? ನಿಮ್ಮನ್ನು ಅದು ಹೇಗೆ ಒಬ್ಬ ಮಹಾನ್ ಜ್ಞಾನಿಯೆಂದು ಎಲ್ಲರೂ ಹೇಳುತ್ತಾರೋ?" ಎಂದು ಪ್ರಾರಂಭಿಸಿ ನಂತರ ಸನ್ಯಾಸಿಯನ್ನು ತುಂಬಾ ಕೆಟ್ಟ ಪದಗಳಿಂದ ನಿಂದಿಸಿದ.

ಹೊತ್ತುಕೊಂಡು ಹೊರಟ. ಎರಡನೆಯವನು ಹಿಂಜರಿಕೆಯಿಂದ ಕೇಳಿದ: "ನಾನು ಇಷ್ಟೊಂದು ಕಲ್ಲುಗಳನ್ನು ನಿಖರವಾಗಿ ಎತ್ತಿಕೊಂಡ ಸ್ಥಳದಲ್ಲಿಯೇ ಹೇಗೆ ಇಡಲು ಸಾಧ್ಯ?"

ಜ್ಞಾನಿ ನಕ್ಕು ಹೇಳಿದ: "ಅವನು ದೊಡ್ಡ ತಪ್ಪು ಮಾಡಿದ್ದಾನೆ. ಅವನು ಅದಕ್ಕಾಗಿ ಪಶ್ಚಾತ್ತಾಪ ಪಡಬಹುದು, ಕ್ಷಮೆ ಕೇಳಬಹುದು, ತಿದ್ದುಪಡಿ ಮಾಡಿಕೊಳ್ಳಬಹುದು, ಮತ್ತೆ ಅಂತಹ ತಪ್ಪುಗಳನ್ನು ಮಾಡದೇ ಇರಬಹುದು ಮತ್ತು ಅದರಿಂದ ಚೇತರಿಸಿಕೊಳ್ಳಬಹುದು. ಆದರೆ ನೀನು ಅನೇಕ ಸಣ್ಣ ತಪ್ಪುಗಳನ್ನು ಮಾಡಿಯೂ, ಅವುಗಳನ್ನು ಪಾಪಗಳೆಂದು ಕೂಡ ಯೋಚಿಸುತ್ತಿಲ್ಲ. ನೀನು ಮಾಡಿದ ಪಾಪಕಾರ್ಯಗಳಿಂದ ಯಾರ್‍ಯಾರೆಲ್ಲ ತೊಂದರೆಗೊಳಗಾಗಿದ್ದಾರೆಂಬುದು ಕೂಡ ನಿನಗೆ ನೆನಪಿಲ್ಲ. ಜೀವನದಲ್ಲಿ ಚೇತರಿಕೆ ಮತ್ತು ನೆಮ್ಮದಿ ನಿನಗೆ ಅತ್ಯಂತ ಕಷ್ಟಕರ!" ಎಂದ.

ತಪ್ಪುಗಳಲ್ಲಿ ಚಿಕ್ಕದು, ದೊಡ್ಡದು ಎಂಬುದೆಲ್ಲ ಏನೂ ಇಲ್ಲ. ತಪ್ಪು ತಪ್ಪೇ... ನಾವು ಅದನ್ನು ಅರಿತು ಸರಿಪಡಿಸಿಕೊಳ್ಳಬೇಕು.



ಅವನು ಹೇಳುವುದನ್ನೆಲ್ಲಾ ಕೆಲವು ನಿಮಿಷಗಳ ಕಾಲ ಮೌನವಾಗಿ ಆಲಿಸಿದ ಸನ್ಯಾಸಿ ಕೊನೆಗೆ, "ನಾನು ನಿಮಗೆ ಇಷ್ಟವಿಲ್ಲದ ಉತ್ತರವನ್ನು ನೀಡಿದಾಗ ನೀವು ಕೋಪಗೊಂಡಿರಿ. ನೀವು ಕೆಟ್ಟದಾಗಿ ಮಾತನಾಡಿದಿರಿ. ಆ ಸಂದರ್ಭದಲ್ಲಿ ನಾನು ಕೂಡ ಕೆಟ್ಟದಾಗಿ ಮಾತನಾಡಿದ್ದರೆ ಜಗಳವಾಗುತ್ತಿತ್ತು. ಎಲ್ಲಾ ಜಗಳಗಳಿಗೂ ಕೋಪವೇ ಮೂಲ ಕಾರಣ. ಕೋಪವನ್ನು ತಪ್ಪಿಸಿದರೆ ಶಾಂತಿಯುತ ಜೀವನ ಸಾಧ್ಯ. ಇದನ್ನು ನಿಮಗೆ ತಿಳಿಸುವುದಕ್ಕಾಗಿಯೇ ನಾನು ಹಾಗೆ ಮಾತನಾಡಿದ್ದೇನೆ" ಎಂದು ಹೇಳಿ ಹೊರಟುಹೋದ.

ನಾವು ಸಣ್ಣ ವಿಷಯಗಳಿಗೂ ಕೋಪಗೊಂಡು ದೊಡ್ಡ ಜಗಳಗಳನ್ನು ಪ್ರಾರಂಭಿಸುತ್ತೇವೆ. ಕೆಲವು ನಿಮಿಷಗಳ ಕೋಪವನ್ನು ತಪ್ಪಿಸುವುದರಿಂದ ನಮಗೆ ವರ್ಷಗಳ ಕಾಲ ಮನಸ್ಸಿಗೆ ಶಾಂತಿ ಸಿಗುತ್ತದೆ!



## ಬದುಕಿನ ಅನಿವಾರ್ಯ ನಿಯಮಗಳು!

- ನೀವು ಒಳ್ಳೆಯದನ್ನು ಮಾಡಲಿ ಅಥವಾ ಕೆಟ್ಟದ್ದನ್ನು ಮಾಡಲಿ, ಜನರು ನಿಮ್ಮ ಬೆನ್ನ ಹಿಂದೆ ಮಾತನಾಡುವುದನ್ನು ನಿಲ್ಲಿಸಲು ಸಾಧ್ಯವಿಲ್ಲ.
- ಒಳ್ಳೆಯದಾಗಿದ್ದರೂ ಸರಿ, ಕೆಟ್ಟದ್ದಾಗಿದ್ದರೂ ಸರಿ, ಎಲ್ಲಾ ಸ್ಥಿತಿಯೂ ಒಂದಲ್ಲ ಒಂದು ದಿನ ಬದಲಾಗುತ್ತದೆ ಎಂದು ನಂಬಿರಿ.
- ಒಳ್ಳೆಯ ಜನರು ಹೆಚ್ಚು ಕಷ್ಟ ಪಡುತ್ತಿದ್ದಾರೆ ಎಂಬಂತೆ ಕಾಣುತ್ತದೆ. ಕಾರಣವೆಂದರೆ ಒಳ್ಳೆಯ ಜನರು. ಆತ್ಮಸಾಕ್ಷಿಯ ಪ್ರಶ್ನೆಗಳಿಗೆ ಹೆದರುತ್ತಾರೆ. ಅದಕ್ಕಾಗಿಯೇ ಈ ಕಷ್ಟಗಳು ಎದುರಾಗುತ್ತವೆ.
- ಕುಟುಂಬ ಜೀವನ ಮತ್ತು ವೃತ್ತಿಜೀವನದ ನಡುವೆ ಸಮತೋಲನವನ್ನು ಹೇಗೆ ಕಾಯ್ದುಕೊಳ್ಳಬೇಕೆಂದು ತಿಳಿದಿರುವವರಿಗೆ ಈ ಜೀವನ ಸುಂದರವಾಗಿರುತ್ತದೆ.
- ಇವರಿಲ್ಲದಿದ್ದರೆ ನನಗೆ ಜೀವನವೇ ಇಲ್ಲ ಎಂದು ಯೋಚಿಸಬೇಡಿ. ಜೀವನವು ಎಲ್ಲವನ್ನೂ ಬದಲಾಯಿಸುತ್ತದೆ.
- ಜೀವನದಲ್ಲಿ ಪ್ರತಿಯೊಂದು ಸಮಸ್ಯೆಗೂ ಒಂದು ಪರಿಹಾರ ಇದ್ದೇ ಇರುತ್ತದೆ.
- ನಿಮ್ಮ ಭರವಸೆಗಳು ಮತ್ತು ನಂಬಿಕೆಗಳನ್ನು ಉಳಿಸಿಕೊಳ್ಳಿ. ನಿಮ್ಮ ರಹಸ್ಯಗಳನ್ನು ಕಾಪಾಡಿಕೊಳ್ಳಿ, ಶಾಂತಿಯುತ ಜೀವನ ಸಾಧ್ಯ.
- ಈ ತಾತ್ಕಾಲಿಕ ಜಗತ್ತಿನಲ್ಲಿ ಹೆಸರು, ಕೀರ್ತಿ ಮತ್ತು ಹಣ ಎಲ್ಲವೂ ತಾತ್ಕಾಲಿಕ. ಅನೇಕ ಜನರು ಎಲ್ಲವನ್ನೂ ಕಳೆದುಕೊಂಡ ನಂತರವೇ ಇದನ್ನು ಅರಿತುಕೊಳ್ಳುತ್ತಾರೆ.

ಕೆಲವು ತಾಯಂದಿರು ತಮ್ಮ ಮಕ್ಕಳಿಗೆ ಮೊಬೈಲ್ ಫೋನ್‌ಗಳಲ್ಲಿ ಕಾರ್ಟೂನ್ ವೀಡಿಯೊಗಳನ್ನು ತೋರಿಸುತ್ತಾ ಆಹಾರವನ್ನು ತಿನ್ನಿಸುತ್ತಾರೆ. ಮಗು ಅಳುವಾಗಲೆಲ್ಲಾ, ಅವರಿಗೆ ಮೊಬೈಲ್ ಫೋನ್ ನೀಡಿ ಏನನ್ನಾದರೂ ನೋಡಲು ಹೇಳುವ ಮೂಲಕ ಅವರನ್ನು ಶಾಂತಗೊಳಿಸಲು ಪ್ರಯತ್ನಿಸುತ್ತಾರೆ. ಮಕ್ಕಳು ಬೆಳೆದ ಮೇಲೂ ಫೋನ್ ಕೊಡುವಂತೆ ಕೇಳುವಾಗ ಸಮಸ್ಯೆ ಉದ್ಭವಿಸುತ್ತದೆ.

"ನನ್ನ ಮೊಬೈಲ್ ಫೋನ್ ಯಾಕೆ ತೆಗೆದುಕೊಂಡೆ? ಅಲ್ಲೇ ಇಡು" ಎಂದು ಮಕ್ಕಳನ್ನು ಗದರಿಸುವುದರಿಂದ ಮತ್ತು "ಯಾವಾಗ ನೋಡಿದರೂ ಮೊಬೈಲ್ ಫೋನ್‌ನಲ್ಲಿ ಆಡುತ್ತಿರುತ್ತೀಯಾ?" ಎಂದು ಬೆದರಿಸುವುದರಿಂದ ಅವರಿಗೆ ನೋವುಂಟಾಗುತ್ತದೆ. ಅನೇಕ ಪೋಷಕರು ತಮ್ಮ ಮಕ್ಕಳ ಜೊತೆ ಫೋನ್ ಅನ್ನು ಹೇಗೆ ನಿಭಾಯಿಸುವುದು ಎಂಬುದರ ಬಗ್ಗೆ ಗೊಂದಲಕ್ಕೊಳಗಾಗಿದ್ದಾರೆ.

ಪುಟ್ಟ ಮಕ್ಕಳ ಕೈಗೆ ಎಂದಿಗೂ ಸೆಲ್ ಫೋನ್ ನೀಡಬಾರದು. ಅವರ ಕಣ್ಣುಗಳು ಸೆಲ್ ಫೋನ್‌ನ ಪ್ರಕಾಶಮಾನವಾದ ಪರದೆಯನ್ನು ನೋಡುವಷ್ಟು ಸಂಪೂರ್ಣವಾಗಿ ಬೆಳೆದಿರುವುದಿಲ್ಲ. ಅವರು ಬಯಸಿದರೆ ಕೆಲವು ನಿಮಿಷಗಳ ಕಾಲ ದೂರದಿಂದ ಟಿವಿ ಬೇಕಾದರೆ ನೋಡಬಹುದು. ಆದರೆ ಎಂದಿಗೂ ಸೆಲ್ ಫೋನ್ ಅನ್ನು ಅವರ ಮುಖದ ಹತ್ತಿರ ಇಡಬಾರದು.

ಮಕ್ಕಳು ಬೆಳೆಯುತ್ತಿರುವ ವರ್ಷಗಳಲ್ಲಿ ಸೆಲ್‌ಫೋನ್‌ಗಳಲ್ಲಿ ಕಾರ್ಟೂನ್ ಪಾತ್ರಗಳನ್ನು ಅವರಿಗೆ ಪರಿಚಯಿಸುವುದಕ್ಕಿಂತ ನಿಜ ಜೀವನದ ಜನರನ್ನು ಅವರಿಗೆ ಪರಿಚಯಿಸುವುದು ಉತ್ತಮ. ಕಾರ್ಟೂನ್ ಪಾತ್ರಗಳು ಅವರೊಂದಿಗೆ ಸಂವಹನ ನಡೆಸುವುದಿಲ್ಲ. ಮಕ್ಕಳು ಆ ಪಾತ್ರಗಳ ಮಾತುಗಳನ್ನು ಮೌನವಾಗಿ ಕೇಳಬೇಕಾಗುತ್ತದೆ. ಪರಿಣಾಮವಾಗಿ, ಮಕ್ಕಳ ಮಾತಿನ ಕೌಶಲ್ಯ, ಸಾಮಾಜಿಕ ಕೌಶಲ್ಯ ಮತ್ತು ಆಲೋಚನಾ ಕೌಶಲ್ಯಗಳು ಬೆಳೆಯುವುದೇ ಇಲ್ಲ. ಸಹ ಮನುಷ್ಯರೊಂದಿಗೆ ಮಾತನಾಡುವುದು ಮತ್ತು ಹೊರಾಂಗಣಕ್ಕೆ ಹೋಗುವುದು ಅವರಿಗೆ ವಿವಿಧ ಅನುಭವಗಳನ್ನು ನೀಡುತ್ತದೆ. ಆ ಅನುಭವಗಳಿಂದ ಅವರಲ್ಲಿ ಉದ್ಭವಿಸುವ ಸಂದೇಹಗಳ ಬಗ್ಗೆ ಅವರು ಪ್ರಶ್ನೆಗಳನ್ನು ಕೇಳುತ್ತಾರೆ. ಪೋಷಕರು ಮತ್ತು ಇತರರು ನೀಡುವ ಉತ್ತರಗಳು ಅವರ ಬುದ್ಧಿವಂತಿಕೆಯನ್ನು ಬೆಳೆಸುತ್ತವೆ.

ಮಕ್ಕಳ ಕೈಗೆ ಮೊಬೈಲ್ ಫೋನ್ ಕೊಡದೆ, ಪೋಷಕರು ಮತ್ತು ಮನೆಯಲ್ಲಿರುವ ಇತರರು ಯಾವಾಗಲೂ ಅದರಲ್ಲೇ ಮುಳುಗಿರುವುದು ಕೂಡ ಒಳ್ಳೆಯ ಅಭ್ಯಾಸವಲ್ಲ. ಮಗು, ಅಪ್ಪ–ಅಮ್ಮಂದಿರು ತನ್ನೊಂದಿಗೆ ಮಾತನಾಡಬೇಕೆಂದು ನಿರೀಕ್ಷಿಸುತ್ತದೆ. ಆ ಸಮಯದಲ್ಲಿ ಅವರು ತಮ್ಮ ಫೋನ್‌ಗಳಲ್ಲಿ ವಾಟ್ಸಾಪ್ ಅಥವಾ ಇನ್‌ಸ್ಟಾಗ್ರಾಮ್‌ನಲ್ಲಿ ಮುಳುಗಿದ್ದರೆ, ಮಗು ಫೋನ್‌ನಲ್ಲಿ ಮಾತ್ರವೇ ಆಸಕ್ತಿದಾಯಕ ವಿಷಯಗಳಿರುತ್ತವೆಯೆಂದು ಭಾವಿಸುತ್ತದೆ. ಹಾಗಾಗಿ ತಾನು ಕೂಡ ಫೋನ್ ಹಿಡಿಯಲು ಬಯಸುತ್ತದೆ. ಆದುದರಿಂದ, ಮಗು ಎಚ್ಚರವಾಗಿರುವಾಗ ಮಗುವಿನೊಂದಿಗೆ ಸಂವಹನ ನಡೆಸಿ. ಮಕ್ಕಳು ಸಣ್ಣವರಿದ್ದಾಗ ಅವರು ದೀರ್ಘಕಾಲ ನಿದ್ರಿಸುತ್ತಾರೆ. ಆಗ ಪೋಷಕರು ಮೊಬೈಲ್ ಫೋನ್ ಬಳಸಬಹುದು.

ಮಕ್ಕಳು ಬೆಳೆದಂತೆ, ಅವರು ಸೆಲ್ ಫೋನ್ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುತ್ತಾರೆ. ವಾಸ್ತವವಾಗಿ, ಅವರು ವಯಸ್ಕರಿಗಿಂತ ವೇಗವಾಗಿ ಎಲ್ಲವನ್ನೂ ಕಲಿಯುತ್ತಾರೆ. ನಿಮ್ಮ ಸೆಲ್ ಫೋನ್ ಎಷ್ಟೇ ಆಧುನಿಕವಾಗಿದ್ದರೂ, ನೀವು ಅದರಲ್ಲಿ 10ಕ್ಕೂ ಹೆಚ್ಚು ಆಯ್ಕೆಗಳನ್ನು ಬಳಸುವ ಬಗ್ಗೆ ಯೋಚಿಸುವುದಿಲ್ಲ. ನಿಮ್ಮ ಮಕ್ಕಳು ನಿಮಗಿಂತ ಶೇಕಡಾ 80ರಷ್ಟು ಹೆಚ್ಚು, ವಿವಿಧ ಕೆಲಸಗಳಿಗಾಗಿ ನಿಮ್ಮ ಸೆಲ್ ಫೋನ್ ಅನ್ನು ಬಳಸಲು ತಿಳಿದಿರುತ್ತಾರೆ. ಅವರು ಫೋನ್ ಬಳಸುವ ವಿಧವನ್ನು ನೋಡಿ ನೀವೇ ಆಶ್ಚರ್ಯಕ್ಕೊಳಗಾಗುತ್ತೀರಿ! ಏಕೆಂದರೆ ಅವರು ಸ್ಮಾರ್ಟ್‌ಫೋನ್‌ಗಳು ಜನಿಸಿದ ಈ ಪೀಳಿಗೆಗೆ ಸೇರಿದವರು!

ಈ ಯುಗದಲ್ಲಿ, ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಿಗೆ ಆನ್‌ಲೈನ್ ತರಗತಿಗಳು ಸಾಮಾನ್ಯವಾಗಿದೆ. ಮನೆಕೆಲಸ, ಪ್ರಾಜೆಕ್ಟ್‌ಗಳು

# ಮಕ್ಕಳಿಗೆ ಫೋನ್ ಒರೆದು ವರವೇ, ಸಮಸ್ಯೆಯೇ?



ಇತ್ಯಾದಿಯಾಗಿ ಇನ್ನೂ ಏನೇನನ್ನೋ ವಾಟ್ಸಾಪ್ ಮೂಲಕ ಕಳುಹಿಸಲಾಗುತ್ತದೆ. ಮಕ್ಕಳ ಕೈಗೆ ಫೋನನ್ನೇ ಕೊಡದೆ ಬೆಳೆಸುವುದು ಈಗ ಅಸಾಧ್ಯ. ನಾವು ಹಾಗೆ ಮಾಡಿದರೆ, ಅವರು ತಾಂತ್ರಿಕ ಜ್ಞಾನದ ವಿಷಯದಲ್ಲಿ ತಮ್ಮ ಗೆಳೆಯರಿಗಿಂತ ಹಿಂದುಳಿಯುತ್ತಾರೆ. ಅದು ಅವರಲ್ಲಿ ಕೀಳರಿಮೆಯನ್ನು ಸೃಷ್ಟಿಸುತ್ತದೆ.

ಆದರೆ ಈ ಬಳಕೆಯಲ್ಲಿ ಕೆಲವು ಸಮಸ್ಯೆಗಳೂ ಇವೆ. ಇಂದು ಶಾಲಾ ಮಕ್ಕಳು ಅಧ್ಯಯನಕ್ಕಾಗಿ ಬಳಸುವ ಸೆಲ್ ಫೋನ್, ಲ್ಯಾಪ್‌ಟಾಪ್ ಮತ್ತು ಕಂಪ್ಯೂಟರ್‌ಗಳಲ್ಲಿರುವ ಸಾಮಾಜಿಕ ಜಾಲತಾಣಗಳು ಅವರ ಮೇಲೆ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಬಗೆಯ ಪರಿಣಾಮಗಳನ್ನೂ ಬೀರುತ್ತವೆ. ಹೆಚ್ಚಿನ ಮಕ್ಕಳು ಸಾಮಾಜಿಕ ಮಾಧ್ಯಮಗಳ ವ್ಯಸನಿಗಳಾಗಿಯೇ ಬದಲಾಗಿ, ಅದರಲ್ಲಿಯೇ ಮುಳುಗಿ ಕಳೆದು ಹೋಗುತ್ತಾರೆ.

ಕೆಲವೊಮ್ಮೆ ಅವರ ಆನ್‌ಲೈನ್ ಚಟುವಟಿಕೆಗಳು ಸೈಬರ್ ಅಪರಾಧದಲ್ಲಿ ಕೂಡ ಕೊನೆಗೊಳ್ಳಬಹುದು. ಉದಾಹರಣೆಗೆ ಅಪಾಯಕಾರಿ ಆಟಗಳನ್ನು ಆಡುವ ಮೂಲಕ ತಮ್ಮ ಪ್ರಾಣವನ್ನು ಪಣಕ್ಕಿಡುವುದು, ಆಟವಾಡುವುದಕ್ಕಾಗಿ ತಾಯಿಯ ಬ್ಯಾಂಕ್ ಖಾತೆಯನ್ನು ಖಾಲಿ ಮಾಡುವುದು, ಫೇಸ್‌ಬುಕ್ ಸ್ನೇಹದಲ್ಲಿ ಬಿದ್ದು ತಮ್ಮನ್ನೇ ತಾವು ಕಳೆದುಕೊಳ್ಳುವುದು ಮೊದಲಾದವು ಅವರನ್ನು ಅಪರಾಧಿಗಳನ್ನಾಗಿಯೂ ಮಾಡಿ ಬಿಡಬಹುದು. ವಿದ್ಯಾರ್ಥಿಗಳು ಸಾಮಾಜಿಕ ಮಾಧ್ಯಮವನ್ನು ಬಳಸುವುದರಲ್ಲಿರುವ ಸಾಧಕ-ಬಾಧಕಗಳನ್ನು ಅವರು ಅರ್ಥ ಮಾಡಿಕೊಳ್ಳುವಂತೆ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು.

ಸಾಮಾಜಿಕ ಮಾಧ್ಯಮವನ್ನು ಆರೋಗ್ಯಕರವಾಗಿ ಬಳಸುವವರೆಗೆ ಅದು ವರದಾನವೇ ಸರಿ. ಆನ್‌ಲೈನ್ ಆಟಗಳನ್ನು ಕಲಿಯುವ ಮಕ್ಕಳು ಕ್ರಮೇಣ ಅದಕ್ಕೆ ವ್ಯಸನಿಯಾಗುವ ಅಪಾಯವಿದೆ ಮತ್ತು ಆನ್‌ಲೈನ್ ಆಟಗಳು ಅವರನ್ನು ಹಾಗೆ ವ್ಯಸನಿಗಳಾಗುವಂತೆ ಮಾಡುತ್ತವೆ. ಇದು ಅವರ ಆಲೋಚನೆ ಮತ್ತು ಚಿಂತನೆಯ ಮೇಲೂ ಪರಿಣಾಮ ಬೀರುತ್ತದೆ. ಒಂದೇ ಸ್ಥಳದಲ್ಲಿ ತುಂಬಾ ಹೊತ್ತು ಕುಳಿತು ಆಟವಾಡುವುದರಿಂದ ಅವರು ಸಾಕಷ್ಟು ಸಮಯವನ್ನು ಕೂಡ ವ್ಯರ್ಥವಾಗಿ ಕಳೆಯುತ್ತಾರೆ ಮತ್ತು ಇದರಿಂದ ತೂಕ ಹೆಚ್ಚಾಗುತ್ತಾರೆ. ಹದಿಹರೆಯದವರು ಫೇಸ್‌ಬುಕ್ ಸಂಭಾಷಣೆಗಳಲ್ಲಿ ಅಪರಿಚಿತರತ್ತ ಆಕರ್ಷಿತರಾಗುತ್ತಾರೆ ಮತ್ತು ಕೆಲವೊಮ್ಮೆ ತಪ್ಪು ದಾರಿಯಲ್ಲಿ ಕೂಡ ಹೋಗುತ್ತಾರೆ.

ಅದೇ ಸಮಯದಲ್ಲಿ, ಸಾಮಾಜಿಕ ಮಾಧ್ಯಮದಲ್ಲಿ ಕೆಲವು ಒಳ್ಳೆಯ ವಿಷಯಗಳೂ ಇವೆ ಎಂಬುದನ್ನೂ ಅಲ್ಲಗಳೆಯುವಂತಿಲ್ಲ. ಆನ್‌ಲೈನ್ ತರಗತಿಗಳಲ್ಲಿ ತಮ್ಮ ಶಿಕ್ಷಕರು ಕಲಿಸಿದ ಪಾಠಗಳು ತಮಗೆ ಅರ್ಥವಾಗದಿದ್ದಲ್ಲಿ, ಇತರ ಬೇರೆ ಶಿಕ್ಷಕರು ಯೂಟ್ಯೂಬ್‌ನಲ್ಲಿ ಅದೇ ಪಾಠ ಮಾಡಿರುವುದನ್ನು ನೋಡುವ ಮೂಲಕ ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡು ಕಲಿಯುತ್ತಾರೆ. ನವೀನ ಕಲಿಕಾ ವಿಧಾನಗಳ ಮೂಲಕವೂ ಅನೇಕರು ಪಾಠ ಹೇಳಿಕೊಡುವುದು ಅದರಲ್ಲಿವೆ. ಸಾಮಾಜಿಕ ಮಾಧ್ಯಮದಲ್ಲಿ ಇಂತಹ ಸಕಾರಾತ್ಮಕ ವಿಷಯಗಳಿರುವುದು ವಾಸ್ತವವಾದರೂ, ತಮ್ಮ ಮಕ್ಕಳಿಗೆ ಫೋನನ್ನು ಬಳಸುವ ವಿಷಯದಲ್ಲಿ ಕೆಲವು ಚೌಕಟ್ಟು ಅಥವಾ ಗಡಿಗಳನ್ನು ಸೃಷ್ಟಿಸುವುದು ಪೋಷಕರ ಕರ್ತವ್ಯ. ಸೆಲ್ ಫೋನ್ ಬಳಸುವ ವಿಷಯದಲ್ಲಿ ಅವರು ತಮ್ಮ ಮಕ್ಕಳಿಗೆ ಮಾದರಿಯಾಗಬೇಕು.

- ಸೆಲ್ ಫೋನ್ ಬಳಕೆಗೆ ಸಂಬಂಧಿಸಿದಂತೆ ಸಮಯ ಮಿತಿಯನ್ನು ಜಾರಿಗೊಳಿಸುವುದು, ಮಕ್ಕಳೊಂದಿಗೆ ಸಮಯ ಕಳೆಯುವ ಸಂದರ್ಭದಲ್ಲಿ ಸೆಲ್‌ಫೋನ್‌ಗೆ 'ನೋ' ಹೇಳುವುದು, ಮುಖ್ಯವಾದ ಕೆಲವು ಕೆಲಸಗಳನ್ನು ಮಾಡುವಾಗ ಅದನ್ನು ಸೈಲೆಂಟ್ ಮೋಡ್‌ನಲ್ಲಿ ಇಡುವುದು ಇತ್ಯಾದಿ ಕೆಲವು ವಿಷಯಗಳನ್ನು ಇಡೀ ಕುಟುಂಬ ಅಭ್ಯಾಸ ಮಾಡಿಕೊಳ್ಳಬಹುದು.



- ಅವರು ಇಷ್ಟಪಡುವ ಕ್ರೀಡೆಗಳಲ್ಲಿ ಅವರನ್ನು ತೊಡಗಿಸುವುದು, ತೋಟಗಾರಿಕೆಯನ್ನು ಹೇಳಿಕೊಡುವುದು, ಯೋಗ ತರಬೇತಿ ನೀಡುವುದು, ಸಮಯ ನಿರ್ವಹಣೆ ಮಾಡುವುದು ಹೇಗೆಂಬುದನ್ನು ಕಲಿಸುವುದು ಇತ್ಯಾದಿ ಸಂಗತಿಗಳು ಅವರು ಸಾಮಾಜಿಕ ಮಾಧ್ಯಮದ ವಿಷಯದಲ್ಲಿ ತಮ್ಮ ಮನಸ್ಥಿತಿಯನ್ನು ಸಕಾರಾತ್ಮಕ ರೀತಿಯಲ್ಲಿ ಬದಲಾಯಿಸಲು ಸಹಾಯ ಮಾಡುತ್ತದೆ.

- ಮಕ್ಕಳ ಪರದೆಯ ಮೇಲಿನ ಸಮಯವನ್ನು ಕಡಿಮೆ ಮಾಡಲು, ಕ್ರೀಡೆ, ವ್ಯಾಯಾಮ ಮತ್ತು ನೃತ್ಯದಂತಹ ಅವರು ಆನಂದಿಸುವ ಕೆಲಸಗಳನ್ನು ಮಾಡಲು ನೀವು ಅವರನ್ನು ಪ್ರೋತ್ಸಾಹಿಸಬಹುದು.

- ಸೆಲ್ ಫೋನ್‌ಗಳಲ್ಲಿ ಬರುವ ಸುಳ್ಳು ಪಠ್ಯ ಸಂದೇಶಗಳನ್ನು ಹೇಗೆ ನಿಭಾಯಿಸಬೇಕೆಂಬುದನ್ನು ಅವರಿಗೆ ಕಲಿಸಿಕೊಡಿ. ಬ್ಯಾಂಕುಗಳು ಕಳುಹಿಸುವ ಎಚ್ಚರಿಕೆಯ ಪಠ್ಯ ಸಂದೇಶಗಳ ಬಗ್ಗೆಯೂ ನಾವು ಜಾಗೃತಿ ಮೂಡಿಸಬಹುದು.

- ಸಾಮಾಜಿಕ ಮಾಧ್ಯಮಗಳ ಜಾಹೀರಾತುಗಳಲ್ಲಿ ಪ್ರದರ್ಶಿತವಾಗುವ ಆರೋಗ್ಯಕರ ಆಹಾರಗಳನ್ನು ಸೇವಿಸಲು ಮಾತ್ರವೇ ಅನುಮತಿ ನೀಡಿ. ಅನಗತ್ಯವಾಗಿ ಹಣವನ್ನು ಖರ್ಚು ಮಾಡುವುದನ್ನು ತಪ್ಪಿಸುವುದು ಹೇಗೆ ಎಂಬುದನ್ನು ಉದಾಹರಣೆಗಳ ಮೂಲಕ ಮಕ್ಕಳಿಗೆ ಕಲಿಸಬಹುದು. ವಂಚನೆಗೊಳಗಾದ ನಿಮ್ಮ ಸ್ನೇಹಿತರ ಅನುಭವಗಳನ್ನು ಸಹ ನೀವು ಅವರೊಂದಿಗೆ ಹಂಚಿಕೊಳ್ಳಬಹುದು.

- ಅವರು ಮುಂದೇನು ಓದಬಹುದು ಮತ್ತು ಅವರಿಗೆ ಆಸಕ್ತಿ ಇರುವ ಕ್ಷೇತ್ರಗಳಲ್ಲಿ ಯಾವ ರೀತಿಯ ಉದ್ಯೋಗಗಳಿಗೆ ಹೋಗಬಹುದು ಎಂಬುದನ್ನು ಕಂಡು ಹಿಡಿಯಲು ಪೋಷಕರು ಅವರಿಗೆ ಸಹಾಯ ಮಾಡಬಹುದು.

- ಮಕ್ಕಳ ವಯಸ್ಸಿಗೆ ಅನುಗುಣವಾಗಿ ಸೈಬರ್ ಅಪರಾಧಗಳು ಹೇಗೆಲ್ಲ ಸಂಭವಿಸಬಹುದು ಎಂಬುದನ್ನು ಕುರಿತು ಅವರಿಗೆ ಅರಿವು ಮೂಡಿಸಬಹುದು. ಯಾರಾದರೂ ಅವರಿಗೆ ಇಷ್ಟವಿಲ್ಲದ ಕೆಲಸವನ್ನು ಮಾಡಲು ಒತ್ತಾಯಿಸಿದರೆ ಅಥವಾ ಅನುಚಿತವಾದ ಸಂದೇಶವನ್ನು ಕಳುಹಿಸಿದರೆ, ಅವರು ಅದನ್ನು ತಮ್ಮ ಪೋಷಕರಿಗೆ ವರದಿ ಮಾಡುವಂತೆ ಅವರನ್ನು ಸಿದ್ಧಗೊಳಿಸಿ. ಯಾವುದೇ ಪರಿಸ್ಥಿತಿಯಲ್ಲಾದರೂ ಸರಿ, ಪೋಷಕರು ತಮ್ಮನ್ನು ರಕ್ಷಿಸುತ್ತಾರೆ ಎಂಬ ವಿಶ್ವಾಸವನ್ನು ಅವರಿಗೆ ನೀಡುವುದು ಸಹ ಮುಖ್ಯವಾಗಿದೆ.

ನಿಮ್ಮ ಮಕ್ಕಳು ಬದುಕಿನಲ್ಲಿ ಯಶಸ್ವಿಯಾಗಲು ಸಾಮಾಜಿಕ ಮಾಧ್ಯಮವು ಒಂದು ಸಾಧನವಾಗಲಿ. •



# ಮತ್ತೆ ದೊರಕುತ್ತದೆ!

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ಸಾಗಿಸಲಾಯಿತು. ಅವನ ಕುಟುಂಬದ ಬಳಿ ಹೆಚ್ಚು ಹಣವಿಲ್ಲದಿದ್ದರೂ, ಹತ್ತಿರದ ಏಕೈಕ ಗುಣಮಟ್ಟದ ಆಸ್ಪತ್ರೆ ಅದಾಗಿದ್ದುದರಿಂದ ಅವರು ಆ ಖಾಸಗಿ ಆಸ್ಪತ್ರೆಗೇ ಗಾಯಗೊಂಡ ವ್ಯಕ್ತಿಯನ್ನು ಕೊಂಡೊಯ್ದರು. ಸಮಂಜಸವಾದ ಬೆಲೆಯಲ್ಲಿ ಗುಣಮಟ್ಟದ ಚಿಕಿತ್ಸೆಯನ್ನು ನೀಡುವ ಖ್ಯಾತಿಯನ್ನು ಆ ಆಸ್ಪತ್ರೆ ಹೊಂದಿತ್ತು.

ಅವರಿಗೆ ತಕ್ಷಣ ಶಸ್ತ್ರಚಿಕಿತ್ಸೆಯ ಅಗತ್ಯವಿತ್ತು. ಆಸ್ಪತ್ರೆಯ ಮಾಲೀಕರಾದ ಮುಖ್ಯ ವೈದ್ಯರು ಶಸ್ತ್ರಚಿಕಿತ್ಸೆ ಮಾಡುತ್ತಾರೆ ಎಂದು ಅವರಿಗೆ ತಿಳಿಸಲಾಯಿತು. ಆದ್ದರಿಂದ, ಎಷ್ಟು ವೆಚ್ಚವಾಗುತ್ತದೋ ಏನೋ ಎಂದು ಕುಟುಂಬವು ಹೆದರುತ್ತಿತ್ತು.

ರೋಗಿಯನ್ನು ಒಳಗೆ ಕರೆತರುವಾಗ, ಮುಖ್ಯ ವೈದ್ಯರು ಆಕಸ್ಮಿಕವಾಗಿ ರೋಗಿಯ ಮುಖವನ್ನು ನೋಡಿದರು. ಆಘಾತಕ್ಕೊಳಗಾದ ಅವರು ತಕ್ಷಣ ಅವನನ್ನು ಆಪರೇಷನ್ ಥಿಯೇಟರ್‌ಗೆ ಕರೆದೊಯ್ದು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಅಲ್ಲಿಂದ ಹೊರಡುವ ಮೊದಲು, "ಇವನನ್ನು ಚೆನ್ನಾಗಿ ನೋಡಿಕೊಳ್ಳಿ. ಈಗ ಅವನ ಕುಟುಂಬದಿಂದ ಯಾವುದೇ ಹಣವನ್ನು ತೆಗೆದುಕೊಳ್ಳಬೇಡಿ" ಎಂದು ಅವರು ಆಸ್ಪತ್ರೆಯ ಸಿಬ್ಬಂದಿಗಳಿಗೆ ಆದೇಶಿಸಿದರು.

ನಾಲ್ಕೈದು ದಿನಗಳಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸ್ವಲ್ಪ ಚೇತರಿಸಿಕೊಂಡ ಮತ್ತು ಅವನನ್ನು ವಿಶೇಷ ವಾರ್ಡ್‌ಗೆ ಸ್ಥಳಾಂತರಿಸಲಾಯಿತು. ಕುಟುಂಬವು, ಎಷ್ಟು ಹಣ ಸಂದಾಯ ಮಾಡಬೇಕು ಎಂದು ಇನ್ನೂ ತಿಳಿಸದಿದ್ದ ಕಾರಣದಿಂದ ಗೊಂದಲಕ್ಕೊಳಗಾಯಿತು. ಅವರ ಪತ್ನಿ, ನರ್ಸ್ ಬಳಿ ಕೇಳಿದರು. "ಬಹುಶಃ ಕೊನೆಯಲ್ಲಿ ಪೂರ್ಣವಾಗಿ ಪಾವತಿಸುವಂತೆ ವೈದ್ಯರು ತಿಳಿಸಬಹುದು" ಎಂದು ನರ್ಸ್ ಹೇಳಿದಳು. "ಈ ಚಿಕಿತ್ಸೆಗಾಗಿ ಸಾಮಾನ್ಯವಾಗಿ ಬಿಲ್ ಎಷ್ಟು ಆಗಬಹುದು?" ಎಂದು ಆಕೆ ಕೇಳಿದರು. 'ಸುಮಾರು ಐದು ಲಕ್ಷ ರೂಪಾಯಿಗಳಿಗಿಂದ ಹೆಚ್ಚಾಗಬಹುದು' ಎಂದು ನರ್ಸ್ ತಿಳಿಸಿದಳು. ಅಪಘಾತದಲ್ಲಿ ಪತಿಗೆ ಗಾಯವಾಗಿರುವುದರಿಂದ ಆಗಿರುವ ನೋವಿಗಿಂತ ಇದು ಅವರಿಗೆ ಅತಿ ದೊಡ್ಡ ಚಿಂತೆಯಾಯಿತು.

ಮುಖ್ಯ ವೈದ್ಯರು ಪ್ರತಿದಿನ ಬಂದು ರೋಗಿಯನ್ನು ಪರೀಕ್ಷಿಸುತ್ತಿದ್ದರು. ಅವರು ಅವನಿಗೆ ಔಷಧಿಗಳು ಮತ್ತು ಆಹಾರ ಸೇರಿದಂತೆ ಎಲ್ಲವನ್ನೂ ನೀಡುತ್ತಿದ್ದರು. ರೋಗಿ ಮತ್ತು ಅವನ ಹೆಂಡತಿ ಹಣಕ್ಕಾಗಿ ಏನು ಮಾಡುವುದು ಎಂದು ಚಿಂತಿತರಾಗಿದ್ದರು. ಅವರು ಯಾರಿಂದ ಮತ್ತು ಹೇಗೆಲ್ಲ ಸಾಲ ಪಡೆಯಬಹುದು ಎಂದು ಲೆಕ್ಕ ಹಾಕಿದರು. ತಮ್ಮ ಮನೆಯನ್ನು ಮಾರಾಟ ಮಾಡಬೇಕೆ ಅಥವಾ ಅಡಮಾನ ಇಡಬೇಕೆ ಎಂದು ಕೂಡ ಅವರು ಯೋಚಿಸಿದರು.

ಎರಡು ವಾರಗಳ ನಂತರ ಮುಖ್ಯ ವೈದ್ಯರು ರೋಗಿಯನ್ನು ಮತ್ತು ಅವರ ಪತ್ನಿಯನ್ನು ತಮ್ಮ ಕೋಣೆಗೆ ಕರೆದು ಚಿಕಿತ್ಸೆಯ ಬಿಲ್ ನೀಡಿದರು. ಅದರ ಮೇಲೆ 'ಐದೂವರೆ ಲಕ್ಷ ರೂಪಾಯಿ' ಎಂದು ಮುದ್ರಿತವಾಗಿತ್ತು. ಅದರ ಮೇಲೆ ಮುಖ್ಯ ವೈದ್ಯರು 'ದೇವರ ಖಾತೆಯಿಂದ ಹಣ ಜಮೆ ಆಗಿದೆ' ಎಂದು ಬರೆದು ಸಹಿ ಮಾಡಿದ್ದರು.

ರೋಗಿಯು ಗೊಂದಲದಿಂದ ಅವರನ್ನು ನೋಡಿದ. "ತಮ್ಮಾ... ನಿನಗೆ ನನ್ನ ಗುರುತು ಸಿಗಲ್ಲಲ್ಲವೇ?" ಎಂದು ವೈದ್ಯರು ಕೇಳಿದರು. "ನಾನು ನಿಮ್ಮನ್ನು ಎಲ್ಲೋ ನೋಡಿದ್ದೇನೆ ಎಂದು ತೋರುತ್ತದೆ. ಆದರೆ ನನಗೆ ಎಲ್ಲಿ ನೆನಪಿಲ್ಲ..." ಎಂದು ರೋಗಿ ಹೇಳಿದ.

ವೈದ್ಯರು ನೆನಪಿಸಿದರು. "ಹತ್ತು ವರ್ಷಗಳ ಹಿಂದೆ, ನಾನು ನನ್ನ ಕುಟುಂಬದೊಂದಿಗೆ ಪ್ರವಾಸಕ್ಕೆ ಹೊರಟಿದ್ದೆ. ಇದ್ದಕ್ಕಿದ್ದಂತೆ ಕಾಡಿನ

ಮಧ್ಯೆ ನಡು ರಸ್ತೆಯಲ್ಲಿ ನಮ್ಮ ಕಾರು ಚಲಿಸದೆ ನಿಂತು ಬಿಟ್ಟಿತು. ಅದು ಕೆಟ್ಟು ಹೋಯಿತು. ರಸ್ತೆ ನಿರ್ಜನವಾಗಿತ್ತು. ಸೆಲ್ ಫೋನ್ ಸಿಗ್ನಲ್ ಸಹ ಇರಲಿಲ್ಲ. ಸಹಾಯ ಮಾಡಲು ಸಮೀಪದಲ್ಲಿ ಯಾರೂ ಇರಲಿಲ್ಲ. ಕತ್ತಲಾಗುತ್ತಿತ್ತು. ಅಪಾಯಕಾರಿ ಪ್ರಾಣಿಗಳು ಓಡಾಡುವ ಸ್ಥಳ ಬೇರೆ. ಏನಾಗುತ್ತದೋ ಎಂದು ಹೆದರಿ ಮಕ್ಕಳು ಅಳಲು ಪ್ರಾರಂಭಿಸಿದರು.

ಸ್ವಲ್ಪ ಹೊತ್ತಿನಲ್ಲಿ ನೀನು ನಿನ್ನ ಬೈಕಿನಲ್ಲಿ ಆ ದಾರಿಯಲ್ಲಿ ಬಂದೆ. ನಾನು ಕರೆಯುವ ಮುನ್ನವೇ, ನೀನಾಗಿಯೇ ಹತ್ತಿರ ಬಂದು ನಿನ್ನ ಬೈಕನ್ನು ನಿಲ್ಲಿಸಿ, 'ಏನು ಸಮಸ್ಯೆ?' ಎಂದು ಕೇಳಿ, ಅಳುತ್ತಿದ್ದ ಮಕ್ಕಳಿಗೆ, 'ನಾನು ಕಾರ್ ಮೆಕ್ಯಾನಿಕ್. ಏನೂ ಹೆದರಬೇಡಿ. ಇದನ್ನು ನಾನು ಸರಿಪಡಿಸುತ್ತೇನೆ' ಎಂದು ಧೈರ್ಯ ಹೇಳಿ ಕಾರಿನ ಮುಂಭಾಗವನ್ನು ತೆ-ರೆದು, ನಿನ್ನ ಬೈಕಿನ ಹೆಡ್‌ಲೈಟ್‌ನ ಬೆಳಕನ್ನು ಬಳಸಿ ಕೆಲವೇ ನಿಮಿಷಗಳಲ್ಲಿ ಕಾರನ್ನು ಸರಿಪಡಿಸಿ ಬಿಟ್ಟೆ. ಕಾರು ಮತ್ತೆ ಓಡಲು ಪ್ರಾರಂಭಿಸಿತು.

ಆ ಸಮಯದಲ್ಲಿ ದೇವರು ನಿನ್ನನ್ನು ಆ ಕಾಡಿಗೆ ಕಳುಹಿಸಿದ್ದಾನೆಂದೇ ನಾನು ಭಾವಿಸಿದೆ. ಆ ಸಮಯದಲ್ಲಿ ನೀನು ಮಾಡಿದ ಕೆಲಸಕ್ಕೆ ನೀನು ಕೇಳಿದಷ್ಟು ಹಣವನ್ನು ನಾನು ನಿನಗೆ ನೀಡುತ್ತಿದ್ದೆ. ಆದರೆ ನೀನು ಯಾವುದೇ ಹಣವನ್ನು ತೆಗೆದುಕೊಳ್ಳಲಿಲ್ಲ. 'ಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುವಾಗ ನಾನು ಹಣವನ್ನು ತೆಗೆದುಕೊಳ್ಳುವುದಿಲ್ಲ. ದೇವರು ಈ ಕೆಲಸವನ್ನು ನನ್ನ ಖಾತೆಯಲ್ಲಿ ಇಟ್ಟುಕೊಳ್ಳುತ್ತಾನೆ' ಎಂದು ನೀನು ಕೈಮುಗಿದು ಹೇಳಿ ಹೊರಟು ಹೋದೆ.

ಆ ದಿನ ನಾವು ಸಂತೋಷದಿಂದ ಮತ್ತು ನಿರಾಳವಾಗಿ ಮನೆಗೆ ಮರಳಿದೆವು. ಆ ಸಮಯದಲ್ಲಿ ನೀವು ಹೇಳಿದ ಮಾತುಗಳು ನನ್ನನ್ನು ಯೋಚಿಸುವಂತೆ ಮಾಡಿತು. ನಾನು ಯೋಚಿಸಿದೆ, 'ಒಬ್ಬ ಸಾಮಾನ್ಯ ವ್ಯಕ್ತಿಗೆ ಇಂತಹ ನೀತಿಯನ್ನು ಜೀವನದಲ್ಲಿ ಹೊಂದಿರಲು ಸಾಧ್ಯವಾದರೆ, ನಾನು ಸಹ ಅದನ್ನು ಅನುಸರಿಸಿದರೆ ಏನು?' ಎಂದು ನನಗನ್ನಿಸಿತು.

ಮೊದಲು ನಾನು ಬೇರೊಂದು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ಆ ಘಟನೆಯ ನಂತರ ನಾನು ದೇವರ ಖಾತೆಯಲ್ಲಿ ನಂಬಿಕೆಯಿಟ್ಟು, ಈ ಆಸ್ಪತ್ರೆಯನ್ನು ಪ್ರಾರಂಭಿಸಿದೆ. ನಾನು ಸಮಂಜಸವಾದ ಶುಲ್ಕವನ್ನು ಮೀರಿ ಏನನ್ನೂ ವಿಧಿಸುವುದಿಲ್ಲ. ಆರ್ಥಿಕವಾಗಿ ಶಕ್ತರಾಗಿರುವ ಕೆಲವರು ನೀಡುತ್ತಾರೆ. ಆರ್ಥಿಕವಾಗಿ ಶಕ್ತರಲ್ಲದವರನ್ನು ನಾನು ಒತ್ತಾಯಿಸುವುದಿಲ್ಲ. ನನಗೆ ಏನೂ ಕೊರತೆಯಿಲ್ಲ. ಆದರೂ ವಾಸ್ತವವಾಗಿ, ನಾನು ಮೊದಲಿಗಿಂತ ಹೆಚ್ಚು ಸಂಪಾದಿಸುತ್ತೇನೆ.

ಆ ಘಟನೆಯ ನಂತರ ನಾನು ನಿನ್ನನ್ನು ಎಲ್ಲೆಲ್ಲೋ ಹುಡುಕಿದೆ. ನನಗೆ ನೀನು ಸಿಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿನ್ನನ್ನು ಭೇಟಿಯಾಗುತ್ತೇನೆ ಎಂದು ನಾನು ಭಾವಿಸಿರಲಿಲ್ಲ. ನಿನ್ನದೇ ನಿಯಮಗಳ ಪ್ರಕಾರ, ನಾನು ನಿನ್ನಿಂದ ಹಣ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಾನು ಇದನ್ನು ದೇವರ ಖಾತೆಯಿಂದ ಸರಿಪಡಿಸಿದ್ದೇನೆ. ನೀವು ಇಲ್ಲಿದ್ದೀರಿ ಎಂದು ನಾನು ನಮ್ಮ ಮನೆಯಲ್ಲಿಯೂ ಹೇಳಿದ್ದೇನೆ" ಎಂದು ವೈದ್ಯರು ಹೇಳಿದರು. ಆ ಸಮಯಕ್ಕೆ ಸರಿಯಾಗಿ ವೈದ್ಯರ ಹೆಂಡತಿ ಮತ್ತು ಮಕ್ಕಳು ಒಳಗಿನ ಕೋಣೆಯಿಂದ ಹೊರ ಬಂದು ರೋಗಿಗೆ ಶುಭ ಹಾರೈಸಿದರು.

ರೋಗಿಯ ಕೈಗಳು ಸ್ವಯಂಚಾಲಿತವಾಗಿ ಮೇಲಕ್ಕೆತ್ತಿದವು ಮತ್ತು ಅವನು ವೈದ್ಯರ ಕೋಣೆಯಲ್ಲಿದ್ದ ದೇವರ ಪ್ರತಿಮೆಗೆ ನಮಸ್ಕರಿಸಿದನು. ಅವನ ಕಣ್ಣುಗಳು ಅರಳಿದ್ದವು.

ನಾವು ಮಾಡುವ ಕ್ರಿಯೆಗಳು ನಮ್ಮ ಬಳಿಗೇ ಹಿಂತಿರುಗುತ್ತವೆ. ಇದಕ್ಕೆ ಇನ್ನೊಂದು ಘಟನೆ ಕೂಡ ಉದಾಹರಣೆಯಾಗಿದೆ.

ರೈಲಿನಲ್ಲಿ ಒಬ್ಬ ವೃದ್ಧೆ ಮಾವಿನ ಹಣ್ಣು ಮಾರುತ್ತಿದ್ದಳು. ರುಚಿಕರವಾದ ಮಾವಿನ ಹಣ್ಣುಗಳ ವಾಸನೆ ಇಡೀ ಭೋಗಿಯನ್ನು ವ್ಯಾಪಿಸಿತ್ತು. ಚೆನ್ನಾಗಿ ಹಣ್ಣಾದ ಹಣ್ಣುಗಳು. ಎಲ್ಲವೂ ಒಂದೇ ಗಾತ್ರದ್ದಾಗಿದ್ದವು. ಅಜ್ಜಿ "ಒಂದು ಹಣ್ಣು 50 ರೂಪಾಯಿ" ಎಂದು ಹೇಳಿದಾಗ, ಯಾರೋ ಒಬ್ಬರು ಏನೂ ಚೌಕಾಸಿ ಮಾಡದೆ 200 ರೂಪಾಯಿಗೆ ನಾಲ್ಕು ಹಣ್ಣುಗಳನ್ನು ಖರೀದಿಸಿದರು. ಅಜ್ಜಿ ಮುಂದಿನ ಪೆಟ್ಟಿಗೆಗೆ ಹಣ್ಣು ಮಾರಲು ಹೋದಳು.

ಅರ್ಧ ಗಂಟೆಯ ನಂತರ, ವೃದ್ಧೆ ಅದೇ ಭೋಗಿಗೆ ಹಿಂತಿರುಗಿದಳು. ಅವಳ ಬುಟ್ಟಿಯಲ್ಲಿದ್ದ ಎಲ್ಲಾ ಹಣ್ಣುಗಳೂ ಮಾರಾಟವಾಗಿದ್ದವು. ಒಂದೇ



ಒಂದು ಹಣ್ಣು ಮಾತ್ರ ಉಳಿದಿತ್ತು. ಅವಳು 200 ರೂಪಾಯಿಗೆ ನಾಲ್ಕು ಹಣ್ಣುಗಳನ್ನು ಖರೀದಿಸಿದ ವ್ಯಕ್ತಿಯ ಬಳಿಗೆ ಬಂದು, "ಸರ್, ಇದು ನಿಮ್ಮ ಹಣ್ಣು. ತೆಗೆದುಕೊಳ್ಳಿ" ಎಂದಳು.

'ನಾನು ಈಗಾಗಲೇ ಹಣ್ಣುಗಳನ್ನು ತೆಗೆದುಕೊಂಡೆನಲ್ಲಾ ಅಜ್ಜಿ' ಎಂದರು ಅವರು. 'ಇಲ್ಲಾ ಸರ್, ಇದಕ್ಕೂ ಸೇರಿಸಿಯೇ ನೀವು ಮೊದಲು ಹಣ ಕೊಟ್ಟಿದ್ದು' ಎಂದಳು ಅಜ್ಜಿ. ಅವಳೇನು ಹೇಳುತ್ತಿದ್ದಾಳೆಂದು ಅವರಿಗೆ ಅರ್ಥವಾಗಲಿಲ್ಲ. ಅಜ್ಜಿ ಹೇಳಿದಳು : 'ನೀವೂ ಏನೂ ಚೌಕಾಸಿ ಮಾಡದೆ ಖರೀದಿಸಿದಿರಿ. ನಿಮ್ಮಿಂದ ಹೆಚ್ಚು ಹಣ ತೆಗೆದುಕೊಳ್ಳುವುದು ತಪ್ಪು. ನನ್ನ ಮನಸ್ಸು ಅದಕ್ಕೆ ಒಪ್ಪಲಿಲ್ಲ. ಆದುದರಿಂದಲೇ ಲೆಕ್ಕವನ್ನು ಸರಿ ಪಡಿಸುವುದಕ್ಕಾಗಿ ಇದನ್ನು ನಿಮಗೆ ನೀಡುತ್ತಿದ್ದೇನೆ' ಎಂದಳು.

ನಮಗೆ ಸೇರಿದ್ದು ಎಂದಾದರೂ ಸರಿ ನಮಗೇ ಹಿಂದಿರುಗುತ್ತದೆ!

●

# ಶಾಲೆಯಲ್ಲಿ ಕಲಿಯಬೇಕಾದ ಸದ್ಗುಣಗಳು!

ಶಾಲೆಯಲ್ಲಿ ಓದುವ ದಿನಗಳಲ್ಲಿ ಮಕ್ಕಳಿಗೆ ಅತ್ಯಂತ ಪ್ರಿಯವಾದ ತರಗತಿಗಳೆಂದರೆ, ಆಟದ ಪೀರಿಯಡ್ ಮತ್ತು ಕಥೆ ಹೇಳುವ ಪೀರಿಯಡ್‌ಗಳೇ ಆಗಿರುತ್ತವೆ. ತರಗತಿಗಳ ಒಳಗೇ ಕುಳಿತಿರಬೇಕಾದ ಒತ್ತಡದಿಂದ ಹೊರಬಂದು, ಆಟದ ಮೈದಾನದಲ್ಲಿ ಓಡಿಯಾಡುವ ಸ್ವಾತಂತ್ರ್ಯವನ್ನು ಆಟದ ಸಮಯದಲ್ಲಿ ಅವರು ಆನಂದಿಸುತ್ತಾರೆ, ತರಗತಿಯ ಮಿತಿಗಳಿಂದ ಮುಕ್ತರಾಗುತ್ತಾರೆ. ಕಥೆ ಹೇಳುವ ಪಿರಿಯಡ್‌ನಲ್ಲಿ ಹೇಳಲಾಗುವ ಕಥೆಗಳನ್ನು ಮತ್ತು ಅವು ತಿಳಿಸುವ ನೀತಿಯನ್ನು ಮಕ್ಕಳು ಆನಂದಿಸುತ್ತಾರೆ. ಆ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷೆಗಳಿಲ್ಲ ಎಂಬ ಅಂಶವೂ ಕೂಡ ಮಕ್ಕಳಿಗೆ ಇದು ಇಷ್ಟವಾಗಲು ಒಂದು ಪ್ರಮುಖ ಕಾರಣವಾಗಿರುತ್ತದೆ.

ವಾಸ್ತವವಾಗಿ, ಕಥೆಗಳ ಮೂಲಕ ನೀತಿಯನ್ನು ಅರಿತುಕೊಳ್ಳುವ ತರಗತಿಗೆ ಶಾಲೆಯಲ್ಲಿ ಪರೀಕ್ಷೆಗಳ ಅಗತ್ಯವಿಲ್ಲ. ಏಕೆಂದರೆ, ಜೀವನವು ನಮ್ಮ ಬದುಕಿನುದ್ದಕ್ಕೂ ಅನೇಕ ಪರೀಕ್ಷೆಗಳನ್ನು ಒಡ್ಡುತ್ತಲೇ ಇರುತ್ತದೆ. ಆ ಎಲ್ಲಾ ಪರೀಕ್ಷೆಗಳಿಗೂ ಅಗತ್ಯವಾದ ಉತ್ತರಗಳು ನಾವು ಶಾಲೆಯಲ್ಲಿ ಕಲಿಯುವ ನೀತಿ ಕಥೆಗಳಲ್ಲಿರುತ್ತವೆ.

ಅಂತಹ ನೀತಿ ಬೋಧನೆಯ ಕಥಾ ಪೀರಿಯಡ್‌ಗಳನ್ನು ಕಡಿಮೆ ಮಾಡದೆ, ಮಕ್ಕಳ ಮನಸ್ಸಿನಲ್ಲಿ ಈ ಕೆಳಗಿನ ಗುಣಗಳನ್ನು ತುಂಬಬಹುದು...

◆ ಅಪರಿಮಿತ ಪ್ರೀತಿ ಮತ್ತು ಕರುಣೆ : ಪ್ರತಿಫಲವನ್ನು ಅಪೇಕ್ಷಿಸಿ ನೀಡುವ ಪ್ರೀತಿ ಸ್ವಾರ್ಥ ಪೂರಿತವಾದುದು. ಯಾವುದೇ ಷರತ್ತುಗಳಿಲ್ಲದೆ, ನಿರೀಕ್ಷೆಗಳೂ ಇಲ್ಲದೆ ನೀಡುವ ನಿಸ್ವಾರ್ಥ ಪ್ರೀತಿ ನಿಜವಾದುದು. ಎಲ್ಲರೂ ಎಲ್ಲರನ್ನೂ ಪ್ರೀತಿಸಿದಾಗ ಇಡೀ ಜಗತ್ತು ಕರುಣಾಮಯಿಯಾಗಿರುತ್ತದೆ. ಕ್ರೌರ್ಯ ಮಾಯವಾಗುತ್ತದೆ. ದ್ವೇಷವನ್ನು ತಪ್ಪಿಸಿ, ಪ್ರೀತಿಯನ್ನು ಹಂಚಿ ಸಂತೋಷ ಮತ್ತು ಯಶಸ್ಸನ್ನು ಸಾಧಿಸುವುದು ಹೇಗೆಂಬುದನ್ನು ಮಕ್ಕಳಿಗೆ ಕಲಿಸಬೇಕು.

◆ ನಾವು ಅವರಿಗೆ ಪ್ರಾಮಾಣಿಕವಾಗಿ ಬದುಕಲು, ಯಾರನ್ನೂ ಮೋಸಗೊಳಿಸದೆ, ಯಾವುದೇ ತಪ್ಪುಗಳನ್ನು ಮಾಡದೆ ಬದುಕಲು ಕಲಿಸಬೇಕು. ಸಣ್ಣ ವಿಷಯಗಳಲ್ಲಿಯೂ ಸುಳ್ಳು ಹೇಳದಿರುವುದು ಮತ್ತು ಸತ್ಯದಿಂದ ವರ್ತಿಸುವುದರ ಪ್ರಯೋಜನಗಳನ್ನು ಅವರು ಅರಿತುಕೊಳ್ಳುವಂತೆ ಮಾಡಬೇಕು.

◆ ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿರುವುದಿಲ್ಲ. ಕಠಿಣ ಪರಿಶ್ರಮವೇ ಯಶಸ್ಸಿಗೆ ದಾರಿ. ಅವರಿಗೆ ಅದನ್ನು ಮನವರಿಕೆ ಮಾಡಿಕೊಡಬೇಕು. ಬೇಕಾದ್ದನ್ನು ಪಡೆಯಲು ಕಷ್ಟಪಟ್ಟು ಕೆಲಸ ಮಾಡುವುದನ್ನು ನಾವು ಅವರಿಗೆ ಕಲಿಸಬೇಕು.

◆ ಈ ವೇಗದ ಜಗತ್ತಿನಲ್ಲಿ, ಅನೇಕ ಜನರು ಇತರರನ್ನು ಕೆಳಕ್ಕೆ ತಳ್ಳುವ ಮೂಲಕ ಮುಂದೆ ಬರಲು ಪ್ರಯತ್ನಿಸುತ್ತಾರೆ. ಯಾರನ್ನೂ ಕೆಳಕ್ಕೆ ಇಳಿಸುವುದರಿಂದ ಯಶಸ್ಸು ಸಿಗುವುದಿಲ್ಲ ಎಂದು ನಾವು ಅವರಿಗೆ ಅರ್ಥ ಮಾಡಿಸಬೇಕು. ಹಣ, ಸ್ಥಾನಮಾನ, ಜೀವನಶೈಲಿ ಅಥವಾ ಸ್ವರೂಪವನ್ನು ಆಧರಿಸಿ ನಾವು ಯಾರನ್ನೂ ತಾರತಮ್ಯ ಮಾಡಬಾರದು. ಎಲ್ಲರನ್ನೂ ಗೌರವಿಸಲು ನಮ್ಮ ಮಕ್ಕಳಿಗೆ ಕಲಿಸಬೇಕು.

◆ ಒಬ್ಬಂಟಿಯಾಗಿ ಪ್ರಯತ್ನಿಸುವುದಕ್ಕಿಂತ ತಂಡವಾಗಿ ಒಟ್ಟಾಗಿ ಕೆಲಸ ಮಾಡುವುದರಿಂದಾಗುವ ಪ್ರಯೋಜನಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕು. ಒಬ್ಬರಿಗೊಬ್ಬರು ಬಿಟ್ಟು ಕೊಡುವ ಮೂಲಕ ಮತ್ತು ಪರಸ್ಪರ ಪ್ರೋತ್ಸಾಹಿಸುವ ಮೂಲಕ ಸಾಧಿಸುವ ಯಶಸ್ಸಿಗೆ ಬೆಲೆ ಹೆಚ್ಚು ಎಂಬುದನ್ನು ಅವರು ತಿಳಿದಿರಬೇಕು. ಸಮಾಜದೊಂದಿಗೆ ಉತ್ತಮವಾಗಿ ಸಂವಹನ ನಡೆಸಲು ಸಹಾಯ ಮಾಡುವ ಗುಣಗಳನ್ನು ಅದು ಮಕ್ಕಳಲ್ಲಿ ಬೆಳೆಸುತ್ತದೆ.

◆ ಭಿನ್ನಾಭಿಪ್ರಾಯಗಳನ್ನು ಮತ್ತು ಜಗಳಗಳನ್ನು ಮಕ್ಕಳು ವಯಸ್ಕರಿಗಿಂತ ಬೇಗ ಮರೆತು ಬಿಡುತ್ತಾರೆ. ಕೋಪದಲ್ಲಿ ಮಾತನಾಡುವ ಮಾತುಗಳನ್ನು ಅವರು ಸುಲಭವಾಗಿ ಕ್ಷಮಿಸುತ್ತಾರೆ. ಈ ನಿಟ್ಟಿನಲ್ಲಿ, ಮಗುವಿನ ಮುಗ್ಧತೆಯನ್ನು ಕಳೆದುಕೊಳ್ಳದಂತೆ ಬದುಕುವುದನ್ನು ಅವರಿಗೆ ಕಲಿಸಬೇಕು.

◆ ಇತರರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುತ್ತಾ ಮಕ್ಕಳು ಬೆಳೆಯಬೇಕು. ಈ ದೇಶದ ಜನರು ಹಸಿವು, ಸಾಲ ಮತ್ತು ಕಾಯಿಲೆಯಂತಹ ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಜನರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮತ್ತು ಯಾರನ್ನೇ ಆಗಲಿ ದಯೆ-ಕರುಣೆಯಿಂದ ನೋಡುವ ಗುಣವನ್ನು ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳಲ್ಲಿ ಬೆಳೆಸಬೇಕು. ಶಾಲೆಗಳಲ್ಲೇ ಮಕ್ಕಳಿಗೆ ಅದನ್ನು ಕಲಿಸಿದರೆ, ಸಮಾಜಕ್ಕೆ ಕಾಳಜಿಯಿಂದ ಸಹಾಯ ಮಾಡುವ ಅನೇಕ ಜನರು ಇರುತ್ತಾರೆ! ●




RAMRAJ


mrithu®
TOWELS

SOFT LIKE
*Foam*



MRITHU PREMIUM
BATH TOWELS


BAMBOO TOWELS


SIGNATURE TOWELS



TERRY TOWELS


STRIPED & CHECKERED TOWELS

SUPER SOFT & SUPER ABSORBENT

**Available at Ramraj Showrooms and All Leading Textile Shops**


RAMRAJ
CULTURE CLUB®
MATCHING DHOTIS • SHIRTS
TIMELESS
DRAPES
TRENDSETTING
SHADES


RAMRAJ
ACHARYA
PANCHAKACHAM DHOTIS
True Spiritual
Strength Reflected
In Simplicity


Kokhila®
WOMEN'S INNERWEARS
BY
RAMRAJ

ನಿಮ್ಮ ಮನೆಗೇ ಬರಬೇಕೇ?

# ಬಿಳುಪು

## ಚಂದಾದಾರರಾಗಿ!



'ಉನ್ನತವಾದ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No:1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

**ವಿಳಾಸ** : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

**ಫೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಪೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank,Tirupur SR Nagar Branch**
**IFSC Code: KVBL0001809.**



## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ |
|---|---|
| ರೂ.~~200~~ ರೂ.125 ಮಾತ್ರ | ರೂ.~~380~~ ರೂ.250 ಮಾತ್ರ |



## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ |
|---|---|
| ರೂ.~~200~~ ರೂ.125 ಮಾತ್ರ | ರೂ.~~380~~ ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**

# ಸಹಾಯ ಹಸ್ತ ಚಾಚುವುದೇ ಉನ್ನತ ನಾಗರಿಕತೆ!



ಮನುಷ್ಯನು ಬೆಂಕಿಯನ್ನು ಕಂಡು ಹಿಡಿದಾಗ ನಾಗರಿಕತೆ ಮೊದಲು ಕಾಣಿಸಿಕೊಂಡಿತು. ಕಬ್ಬಿಣವನ್ನು ಬಳಸಲು ಕಲಿತಾಗ ಸಾಮಾಜಿಕತೆ ಬೆಳೆಯಿತು. ಚಕ್ರವನ್ನು ಕಂಡು ಹಿಡಿದಾಗ ಮಾನವರು ವೇಗವಾಗಿ ಪ್ರಯಾಣಿಸಲು ಸಾಧ್ಯವಾಯಿತು. ಆಗಲೇ ನಾಗರಿಕತೆ ಅಭಿವೃದ್ಧಿಯಾಗತೊಡಗಿದ್ದು ಎಂದು ಇತಿಹಾಸವು ನಮಗೆ ಹೇಳುತ್ತದೆ. ಮಾನವ ನಾಗರಿಕತೆಯೊಳಗೆ ಕಾಲಿಟ್ಟದ್ದು ಲಕ್ಷಾಂತರ ವರ್ಷಗಳ ಹಿಂದೆ ಎಂದು ಕೆಲವು ಇತಿಹಾಸಕಾರರು ಹೇಳುತ್ತಾರೆ.

ಆದಾಗ್ಯೂ, ಪ್ರಸಿದ್ಧ ಮಾನವಶಾಸ್ತ್ರಜ್ಞೆ ಮಾರ್ಗರೇಟ್ ಮೀಡ್ ಇದನ್ನು ಒಪ್ಪುವುದಿಲ್ಲ. "ಮಾನವ ನಾಗರಿಕತೆ ಕೇವಲ 15,000 ವರ್ಷಗಳ ಹಿಂದಷ್ಟೇ ಹೊರಹೊಮ್ಮಿದ್ದು!" ಎಂದು ಅವರು ಹೇಳುತ್ತಾರೆ.

"ಮಾನವಶಾಸ್ತ್ರ, ಪ್ರಾಚೀನ ಮಾನವ ಜೀವನ ವಿಧಾನ ಮತ್ತು ನಾಗರಿಕತೆಯ ಬಗ್ಗೆ ತಿಳಿದುಕೊಳ್ಳಲು, ನಮಗೆ ಖಂಡಿತವಾಗಿಯೂ ದತ್ತಾಂಶ ಮತ್ತು ಪುರಾತತ್ತ್ವ ವಸ್ತುಗಳು ಬೇಕಾಗುತ್ತವೆ. ಅದು ವೈಜ್ಞಾನಿಕ ಜ್ಞಾನ. ಅದಕ್ಕೂ ಮೊದಲು, ಮಾನವ ನಾಗರಿಕತೆ ಏನೆಂದು ನಾವು ಭಾವನಾತ್ಮಕವಾಗಿ ಅರ್ಥ ಮಾಡಿಕೊಳ್ಳಬೇಕು" ಎಂದು ಅವರು ಹೇಳುತ್ತಾರೆ.

ಅವರು ಒಂದು ಘಟನೆಯನ್ನು ಉದಾಹರಣೆಯಾಗಿ ತಿಳಿಸಿ ಮಾನವ ನಾಗರಿಕತೆಯನ್ನು ಭಾವನಾತ್ಮಕವಾಗಿ ಅರ್ಥ ಮಾಡಿಕೊಳ್ಳಲು ಹೇಳುತ್ತಾರೆ. "15,000 ವರ್ಷಗಳ ಹಿಂದೆ ಬದುಕಿದ್ದ ಮನುಷ್ಯನ ಅಸ್ಥಿಪಂಜರ ನಮಗೆ ದೊರಕಿದೆ. ಅದಕ್ಕೂ ಇತರ ಅಸ್ಥಿಪಂಜರಗಳಿಗೂ ಏನು ವ್ಯತ್ಯಾಸ ಗೊತ್ತಾ? ಈ ಅಸ್ಥಿಪಂಜರಕ್ಕೆ ಸೇರಿದ ಮನುಷ್ಯನ ತೊಡೆಗಳ ಎಲುಬು ಮುರಿದಿತ್ತು ಮತ್ತು ಸ್ವಲ್ಪ ಸಮಯದ ನಂತರ ಅದು ಮತ್ತೆ ವಾಸಿಯಾಗಿದೆ. ಅವನು ಮತ್ತೆ ಬೇಟೆಯ ಜೀವನಕ್ಕೆ ಹಿಂತಿರುಗಿದ್ದಾನೆ ಮತ್ತು ಸಾಮಾನ್ಯ ಜೀವನವನ್ನು ನಡೆಸಿದ್ದಾನೆ. ನಂತರ ಅವನು ಸಹಜ ಮರಣವನ್ನಪ್ಪಿದ್ದಾನೆ. ಅದೇ ನಮಗೆ ಕಾಣಿಸುವ ಅತಿ ದೊಡ್ಡ ವ್ಯತ್ಯಾಸ" ಎಂದು ಅವರು ಹೇಳುತ್ತಾರೆ.

ಇದನ್ನು ಓದುವ ಯಾರಿಗಾದರೂ ಗೊಂದಲ ಉಂಟಾಗಬಹುದು. 'ಒಬ್ಬ ವ್ಯಕ್ತಿಯ ತೊಡೆಯ ಮೂಳೆಗಳು ಮುರಿದು ಮತ್ತೆ ಜೋಡಿಸಲ್ಪಟ್ಟರೆ ಮತ್ತು ಆತ ಸಾಮಾನ್ಯ ಜೀವನವನ್ನು ನಡೆಸಬಹುದಾದರೆ ಅದಕ್ಕೂ ನಾಗರಿಕತೆಗೂ ಏನು ಸಂಬಂಧ?' ಎಂಬ ಪ್ರಶ್ನೆ ನಿಮ್ಮಲ್ಲಿ ಉದ್ಭವಿಸಬಹುದು.

ಮಾರ್ಗರೇಟ್ ಮೀಡ್ ವಿವರಿಸುತ್ತಾರೆ. "ಮನುಷ್ಯ ಕೂಡ ಒಂದು ಪ್ರಾಣಿ. ಹಸಿವು ಹೇಗೆ ಇತರ ಪ್ರಾಣಿಗಳನ್ನು ಜೀವಂತವಾಗಿಡುತ್ತದೆಯೋ, ಅದೇ ರೀತಿ ಅದು ಮನುಷ್ಯನನ್ನೂ ಜೀವಂತವಾಗಿಟ್ಟಿದೆ. ಒಂದು ಸಿಂಹವು ಜಿಂಕೆಯ ಹಿಂಡಿನಲ್ಲಿರುವ ಒಂದೇ ಒಂದೇ ಜಿಂಕೆಯನ್ನು ಹಿಡಿದರೆ, ಉಳಿದ ಜಿಂಕೆಗಳು ಚದುರಿ ಹೋಗುತ್ತದೆ. ಅವು ಆ ಜಿಂಕೆಯನ್ನು ಉಳಿಸಲು ಬರುವುದಿಲ್ಲ. ಅದೇ ರೀತಿ ಮಾನವರ ಗುಂಪು ಬೇಟೆಯಾಡಲು ಹೋದಾಗ, ತೋಳಗಳ ಸಮೂಹವು ಅವರನ್ನು ಬೆನ್ನಟ್ಟಿ ಬಂದರೆ, ಅವರೆಲ್ಲರೂ ಪ್ರತ್ಯೇಕವಾಗಿ ಓಡುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೇ ಹೊರತು ತಮ್ಮ ಜೊತೆಯಲ್ಲಿರುವ ಸಹ ಮನುಷ್ಯನನ್ನು ಉಳಿಸುವ ಬಗ್ಗೆ ಅ ಸಮಯದಲ್ಲಿ ಯಾರೂ ಯೋಚಿಸುತ್ತಿರಲಿಲ್ಲ. ಕಾರಣ, ಆ ಸಮಯದಲ್ಲಿ ಮನುಷ್ಯನು ಕೂಡ ಪ್ರಾಣಿಗಳ ಗುಣಲಕ್ಷಣಗಳನ್ನೇ

ಪಡೆದುಕೊಂಡಿದ್ದನು. ಇತರ ಮನುಷ್ಯರನ್ನು ಉಳಿಸಬೇಕೆಂಬ ಭಾವನೆ ಆಗ ಅವನಲ್ಲಿ ಇರಲಿಲ್ಲ. ಲಕ್ಷಾಂತರ ವರ್ಷಗಳಿಂದ ಮನುಷ್ಯ ಹೀಗೆಯೇ ಇದ್ದನು.


ಇಂತಹ ಜೀವನ ವಿಧಾನದಲ್ಲಿ, ಮನುಷ್ಯನ ತೊಡೆಯ ಮೂಳೆ ಮುರಿದರೆ, ಅವನು ಇನ್ನು ಸಾಯುತ್ತಾನೆಂದೇ ಪರಿಗಣಿಸಬೇಕು. ಪ್ರಾಚೀನ ಜನರು ಗಾಯಗೊಂಡ ಮನುಷ್ಯನನ್ನು ಒಂಟಿಯಾಗಿ ಬಿಟ್ಟು ಹೋಗುತ್ತಿದ್ದರು. ಆ ಕಾಲದಲ್ಲಿ ಅದು ತಪ್ಪು ಕೃತ್ಯವಲ್ಲ. ಇಂತಹ ಕಾಲಘಟ್ಟದಲ್ಲಿ, ಒಬ್ಬ ಮನುಷ್ಯನ ತೊಡೆಯ ಮೂಳೆಗಳು ಮುರಿದು ಹೋದಾಗ ಒಬ್ಬನೋ ಅಥವಾ ಹಲವರೋ ಸೇರಿ ಅವನನ್ನು ಒಂದು ಗುಹೆಯಲ್ಲೋ ಅಥವಾ ಬೇರೆ ಯಾವುದೋ ಸ್ಥಳದಲ್ಲಿ ತೆಗೆದುಕೊಂಡು ಹೋಗಿ ಅವನನ್ನು ಸುರಕ್ಷಿತವಾಗಿ ಮರೆಮಾಡಿರಬೇಕು. ಅವರು ಬೇಟೆಯಾಡಿ ಅವನಿಗೆ ಪ್ರತಿದಿನ ಬೇಕಾದ ಆಹಾರವನ್ನು ತಂದು ಕೊಡುತ್ತಿರಬೇಕು. ಅವನ ಎಲ್ಲಾ ದೈನಂದಿನ ಕರ್ತವ್ಯಗಳಲ್ಲಿ ಅವನಿಗೆ ಸಹಾಯ ಮಾಡಿರಬೇಕು. ಅವರು ಅವನನ್ನು ಸಮಾಧಾನ ಮಾಡಿ ಪ್ರೀತಿಯಿಂದ ಅಪ್ಪಿಕೊಂಡು ಮಲಗಿಸಿರಬೇಕು. ಅವನು ನೋವಿನಲ್ಲಿದ್ದಾಗ ಅವನಿಗೆ ಸಾಂತ್ವನ ಹೇಳಿರಬೇಕು. ಇದೆಲ್ಲವೂ ನಡೆದರೆ ಮಾತ್ರವೇ ಗಾಯಗೊಂಡ ಮನುಷ್ಯನು ಮತ್ತೆ ಆರೋಗ್ಯವಾಗುತ್ತಾನೆ ಮತ್ತು ಅವನು ಮತ್ತೆ ಬೇಟೆಗೆ ಹೋಗಲು ಸಾಧ್ಯವಾಗುತ್ತದೆ.

"ಒಬ್ಬ ಮನುಷ್ಯನು ತನ್ನ ಸ್ವಂತ ಹಿತಾಸಕ್ತಿಗಳನ್ನು ನೋಡದೆ ಇನ್ನೊಬ್ಬ ಮನುಷ್ಯನ ಯೋಗಕ್ಷೇಮದ ಬಗ್ಗೆ ಕಾಳಜಿ ವಹಿಸಿದಾಗಲೇ ನಾಗರಿಕತೆ ಕಾಣಿಸಿಕೊಳ್ಳುತ್ತದೆ ಎಂದು ಭಾವಿಸಬೇಕು. ಚಕ್ರ ಅಥವಾ ಬೆಂಕಿಯನ್ನು ಕಂಡು ಹಿಡಿದದ್ದೇ ನಾಗರಿಕತೆಯಲ್ಲ. ಮನುಷ್ಯನ ಎಲುಬು ಮುರಿದು ಅವನು ಬಳಲುತ್ತಿರುವಾಗ, ಇತರರು ಅವನನ್ನು ನೋಡಿಕೊಳ್ಳುತ್ತಾರಲ್ಲ... ಅಲ್ಲಿಯೇ ಮೊದಲ ಮಾನವ ನಾಗರಿಕತೆ ಕಾಣಿಸಿಕೊಳ್ಳುವುದು" ಎಂದು ಮಾರ್ಗರೇಟ್ ಮೀಡ್ ಹೇಳುತ್ತಾರೆ.

ಇತರರಿಗೆ ಸಹಾಯ ಮಾಡುವುದು ಮಾನವ ನಾಗರಿಕತೆಯ ಆರಂಭ. ಮನುಷ್ಯರಾಗಿ, ನಾವೆಲ್ಲರೂ ನಮ್ಮಿಂದ ಸಾಧ್ಯವಾದಷ್ಟು ಇತರರಿಗೆ ಸಹಾಯ ಮಾಡಬೇಕು. ಈ ಭಾವವನ್ನು ನಾವು ಚಿಕ್ಕ ವಯಸ್ಸಿನಿಂದಲೇ ನಮ್ಮ ಮಕ್ಕಳಲ್ಲಿ ತುಂಬಬೇಕು. ನಮಗೆ ತಿಳಿದಿರುವವರಿಗೆ ಸಹಾಯ ಮಾಡುವುದು ಮಾತ್ರವಲ್ಲ, ನಮಗೆ ತಿಳಿದಿಲ್ಲದ ಅಪರಿಚಿತರಿಗೂ ಸಹಾಯ ಮಾಡುವುದರ ಬಗ್ಗೆಯೂ ಅವರಲ್ಲಿ ಅರಿವು ಮೂಡಿಸಬೇಕು. ಇದೇ ಸುಸಂಸ್ಕೃತ ವ್ಯಕ್ತಿಯ ಲಕ್ಷಣ.

●

# ಗೌರವ ಮನಸ್ಸಿನಿಂದ ಮೂಡುತ್ತದೆ!



ಒಬ್ಬ ವೃದ್ಧ ವ್ಯಕ್ತಿಯನ್ನು ಶ್ರೀಮಂತರ ಮನೆಯಲ್ಲಿ ಪಾರ್ಟಿಗೆ ಆಹ್ವಾನಿಸಲಾಯಿತು. ಆ ವೃದ್ಧ ಬೆತ್ತದ ಊರುಗೋಲನ್ನು ಊರಿಕೊಂಡು ನಿಧಾನವಾಗಿ ನಡೆದುಕೊಂಡು ಔತಣ ಕೂಟದೊಳಕ್ಕೆ ಪ್ರವೇಶಿಸಿದ. ಒಳಗೆ ಪ್ರವೇಶಿಸುತ್ತಿದ್ದಂತೆಯೇ ಆತ ತನ್ನ ಕೈಯಲ್ಲಿದ್ದ ಊರುಗೋಲನ್ನು ತಲೆಕೆಳಗಾಗಿ ಹಿಡಿದುಕೊಂಡು ನಡೆದುಕೊಂಡು ಬಂದ. ಇದರಿಂದಾಗಿ ಆತನಿಂದ ಸಹಜವಾಗಿ ನಡೆಯಲು ಸಾಧ್ಯವಾಗಲಿಲ್ಲ.

ಪಾರ್ಟಿಯಲ್ಲಿದ್ದ ಅನೇಕ ಜನರು ಇದನ್ನು ನೋಡಿ ವೃದ್ಧನನ್ನು ಕೀಟಲೆ ಮಾಡಿದರು. ಆ ಮುದುಕ ನಗುತ್ತಾ ಹೇಳಿದ: "ಮನೆಯೊಳಗೆ ಹಾಸಿರುವ ಕಾರ್ಪೆಟ್ ಅತ್ಯಂತ ಸುಂದರವಾಗಿದೆ. ನಾನು ನನ್ನ ಊರುಗೋಲನ್ನು ಊರಿಕೊಂಡು ರಸ್ತೆಯಲ್ಲಿ ನಡೆದು ಬಂದುದರಿಂದ ಇದರ ಕೆಳಭಾಗದಲ್ಲಿ ಮೆತ್ತಿಕೊಂಡಿರುವ ಮಣ್ಣು ಕಾರ್ಪೆಟ್ ಅನ್ನು ಕೊಳಕು ಮಾಡದಂತೆ ನಾನು ಊರುಗೋಲನ್ನು ತಿರುಗಿಸಿದೆ." ಇದನ್ನು ಕೇಳಿ ಎಲ್ಲರೂ ನಾಚಿಕೆಯಿಂದ ತಲೆ ಬಾಗಿದರು.

ಈ ವೃದ್ಧನಂತೆ ಜೀವನದಲ್ಲಿ ಗೌರವ ಗಳಿಸಲು ಯಾವಾಗಲೂ ಅನುಸರಿಸಬೇಕಾದ ಕೆಲವು ವಿಷಯಗಳು:

- ಎಲ್ಲರೂ ಅನುಸರಿಸುತ್ತಿರುವುದನ್ನು ಕುರುಡಾಗಿ ಅನುಸರಿಸಬೇಡಿ. ದೊಡ್ಡ ದೊಡ್ಡ ಗುಂಪುಗಳಲ್ಲಿರುವವರು ಯಾವಾಗಲೂ ಯಾರನ್ನೂ ಪ್ರಶ್ನಿಸದೆ ಯಾರ್ಯಾರನ್ನೋ ಅನುಸರಿಸುತ್ತಾರೆ.
- ಹೆಚ್ಚು ಜನರು ಪ್ರಯಾಣಿಸದ ಹಾದಿಯಲ್ಲಿ ಪ್ರಯಾಣಿಸುವುದು ವಿಶೇಷವಾಗಿರುತ್ತದೆ. ಆದರೆ 'ಇತರರು ಈ ಮಾರ್ಗವನ್ನು ಏಕೆ ತಪ್ಪಿಸುತ್ತಾರೆ' ಎಂಬುದನ್ನು ತಿಳಿದುಕೊಂಡು ನೀವು ಆ ಹಾದಿಯಲ್ಲಿ ಪ್ರಯಾಣವನ್ನು ಪ್ರಾರಂಭಿಸಬೇಕು.
- ಜೀವನವೆಂಬುದು ಬಹಳಷ್ಟು ಹೊಲಿಗೆಗಳು ಮತ್ತು ಹರಿದು ಹೋಗಿರುವ ಕಂಬಳಿಯಂತಹುದು. ಅದನ್ನು ಎಚ್ಚರಿಕೆಯಿಂದ ಬಳಸಬೇಕು.
- ನೀವು ಯಾರನ್ನಾದರೂ ಟೀಕಿಸುವ ಮೊದಲು ಯೋಚಿಸಿ. ಯಾರ ಬಗ್ಗೆಯಾದರೂ ನಿಮ್ಮ ಅಭಿಪ್ರಾಯ ಹೇಳುವ ಮೊದಲು ಕೂಡ ಚೆನ್ನಾಗಿ ಆಲೋಚಿಸಿ. ನೀವು ಏನೇ ಮಾಡಿದರೂ ಅದು ನಿಮಗೆ ಹಲವು ಪಟ್ಟಾಗಿ ಹಿಂತಿರುಗುತ್ತದೆ.
- ನಿಮ್ಮ ಜೀವನದಲ್ಲಿ ಹಾದುಹೋಗುವ ಪ್ರತಿಯೊಬ್ಬರಿಗೂ ನಿಮ್ಮ ಜೀವನದಲ್ಲಿ ಸ್ಥಾನವಿದೆ ಎಂಬುದನ್ನು ಅರ್ಥಮಾಡಿಕೊಳ್ಳಿ.
- ಇಂದಿನ ನಿಮ್ಮ ನಿರ್ಧಾರಗಳಿಗೆ ಭವಿಷ್ಯದಲ್ಲಿ ನೀವು ಸಲ್ಲಿಸಬೇಕಾದ ಬೆಲೆ ಏನಾಗಿರುತ್ತದೆ ಎಂಬುದೇ ಇಂದು ನೀವು ಮಾಡಬೇಕಾದ ಪ್ರಮುಖ ಲೆಕ್ಕಾಚಾರ.

ಒಂದು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬ ಹೊಸ ಐಫೋನ್ ಖರೀದಿಸಿದ್ದ. ಅದು 70 ಸಾವಿರ ರೂಪಾಯಿ ಬೆಲೆಬಾಳುವ ಫೋನ್. ಅವನು ತನ್ನ ಫೋನ್ ಅನ್ನು ಯಾವಾಗಲೂ ತನ್ನ ಮೇಜಿನ ಮೇಲೆ ಇಟ್ಟು ಕಚೇರಿಯಲ್ಲಿ ಇತರರೊಂದಿಗೆ ಮಾತನಾಡಲು ಎದ್ದು ಹೋಗುತ್ತಿದ್ದ. ಕೆಲವೊಮ್ಮೆ ಯಾರೊಂದಿಗೋ ಮಾತನಾಡುತ್ತಾ ಮರೆತು ಅವರ ಮೇಜಿನ ಮೇಲೇ ಇಟ್ಟು ಬಂದು ಬಿಡುತ್ತಿದ್ದ. ಅವನು ಅದನ್ನು ಎಚ್ಚರಿಕೆಯಿಂದ ತನ್ನ ಬಳಿಯೇ ಇಟ್ಟುಕೊಳ್ಳುತ್ತಿರಲಿಲ್ಲ.

"ನಿಮ್ಮ ಫೋನನ್ನು ಜಾಗ್ರತೆಯಾಗಿಟ್ಟುಕೊಳ್ಳಿ" ಎಂದು ಯಾರಾದರೂ ಹೇಳಿದರೆ, "ಫೋನ್ ಎಲ್ಲಿಗೆ ಹೋಗಿ ಬಿಡುತ್ತದೆ ಬಿಡಿ ಸಾರ್? ನಮ್ಮ ಆಫೀಸಿನಲ್ಲಿ ಯಾರು ಅದನ್ನು ತೆಗೆದುಕೊಂಡು ಹೋಗುತ್ತಾರೆ?" ಎಂದು ನಗುತ್ತಾ ಹೇಳುತ್ತಿದ್ದ. ಒಮ್ಮೆ ಮ್ಯಾನೇಜರ್ ಅವನಿಗೆ, "ಅದು ಕಾಣೆಯಾದರೆ ನಿಮಗೆ ಮಾತ್ರ ಸಮಸ್ಯೆಯಲ್ಲ. ಫೋನ್ ಹುಡುಕುವ ಆತುರದಲ್ಲಿ ಆಮೇಲೆ ನೀವು ಕಛೇರಿಯಲ್ಲಿರುವ ಎಲ್ಲರನ್ನೂ ಅನುಮಾನಿಸುತ್ತೀರಿ. ಫೋನ್ ಕಳೆದುಕೊಳ್ಳುವುದು ನಿಮ್ಮ ಸಮಸ್ಯೆಯಲ್ಲ, ಆಗ ಅದು ಎಲ್ಲರ ಸಮಸ್ಯೆಯಾಗುತ್ತದೆ" ಎಂದು ಅವರು ಎಚ್ಚರಿಸಿದರು. ಆ ಯುವಕ ಮ್ಯಾನೇಜರ್ ಕಡೆ ನೋಡಿ, "ನೀವು ವಿಪರೀತವಾಗಿ ಕಲ್ಪನೆ ಮಾಡುತ್ತಿದ್ದೀರಿ" ಎಂದು ಹೇಳಿ ನಗುತ್ತಾ ಅಲ್ಲಿಂದ ಹೊರಟು ಹೋದ.

ಕೆಲವು ವಾರಗಳ ನಂತರ ಆ ಯುವಕನ ಫೋನ್ ನಿಜವಾಗಿಯೂ ಕಾಣೆಯಾಯಿತು. ಅವನು ಆತಂಕದಿಂದ ಎಲ್ಲರ ಬಳಿ "ಕ್ಷಮಿಸಿ... ನನ್ನ ಫೋನನ್ನು ಎಲ್ಲಿಯಾದರೂ ನೋಡಿದಿರಾ..." ಎಂದು ಅವನು ಎಲ್ಲರನ್ನೂ ಕೇಳಿದ. ಆತ ಎಲ್ಲರನ್ನೂ ಅನುಮಾನದಿಂದ ನೋಡಿದ. ಇದರಿಂದ ಕಛೇರಿಯಲ್ಲಿದ್ದ ಎಲ್ಲರೂ ಮುಜುಗರ ಅನುಭವಿಸುವಂತಾಯಿತು. ಕಡೆಯಲ್ಲಿ ನೋಡಿದರೆ ಆತ ಅಂದು ಮನೆಯಲ್ಲೇ ಫೋನ್ ಮರೆತು ಬಂದಿದ್ದ!




"ಕೆಲವು ವಸ್ತುಗಳನ್ನು ಸುರಕ್ಷಿತವಾಗಿಟ್ಟುಕೊಳ್ಳುವುದು ಅದರ ಮಾಲೀಕರಿಗೆ ಮಾತ್ರವಲ್ಲ, ಇತರರಿಗೂ ಒಳ್ಳೆಯದು" ಎಂದು ಮ್ಯಾನೇಜರ್ ಅವನಿಗೆ ಮತ್ತೆ ಸಲಹೆ ನೀಡಿದರು.

ಲೀಲಾ ಕೃಷ್ಣನ್ ಎಂಬ ಕಥೆಗಾರ್ತಿ ಬರೆದ 'ಮೆಲ್ಲನೆ ಮಹಡಿ ಮೆಟ್ಟಿಲುಗಳನ್ನು ಹತ್ತಿ' ಎಂಬ ಸಣ್ಣ ಕಥೆಯಲ್ಲಿ ಇದೇ ರೀತಿಯ ಘಟನೆ ಬರುತ್ತದೆ. ಸುಶೀಲಾ ಎಂಬ 30 ವರ್ಷದ ಮಹಿಳೆ ತನ್ನ ಐದು ವರ್ಷದ ಮಗುವಿನೊಂದಿಗೆ ಬಾಂಬೆಯಿಂದ ಚೆನ್ನೈಗೆ ಬರುತ್ತಾಳೆ. ಚೆನ್ನೈನಲ್ಲಿ ಆಕೆಯ ಚಿಕ್ಕಪ್ಪನ ಮಗಳ ಮದುವೆ ನಡೆಯುತ್ತಿರುತ್ತದೆ. ಸುಶೀಲಾಳ ಮಗಳು ಪುಟ್ಟಿ ಮುದ್ದಾಗಿರುತ್ತಾಳೆ. ಅನೇಕ ಜನರು ಮಗುವನ್ನು ಪ್ರೀತಿಯಿಂದ ಕರೆದು ಮಾತನಾಡಿಸುತ್ತಾರೆ.

ಮದುವೆ ಮನೆಯಲ್ಲೇ ನಡೆಯುತ್ತಿರುತ್ತದೆ. ಮನೆಯಲ್ಲಿ ಅನೇಕ ಜನ ಅತಿಥಿಗಳು ಇರುವುದರಿಂದ, ಆ ರಾತ್ರಿ ಮಕ್ಕಳನ್ನು ಚಾಪೆ ಮತ್ತು ಬೆಡ್‌ಶೀಟ್ ಕೊಟ್ಟು ಮಹಡಿಯ ಮೇಲೆ ಸಾಲಾಗಿ ಮಲಗಿಸಲಾಗುತ್ತದೆ. ಮಹಿಳೆಯರು ಮನೆಯೊಳಗೆ ಮಲಗಿದರೆ, ಪುರುಷರು ಆರಾಮವಾಗಿ ಮನೆಯ ಅಂಗಳದಲ್ಲಿ ಮಲಗುತ್ತಾರೆ.

ಮಧ್ಯರಾತ್ರಿಯಲ್ಲಿ ಸುಶೀಲಾ ಇದ್ದಕ್ಕಿದ್ದಂತೆ ಭಯಭೀತಳಾಗುತ್ತಾಳೆ. "ನನ್ನ ಮಗಳು ಪುಟ್ಟಿ ಮಹಡಿಯ ಮೇಲೆ ಮಲಗಿದ್ದಾಳೆ. ಅವಳ ಕುತ್ತಿಗೆಯಲ್ಲಿ ಮೂರು ಸವರನ್ ಬಂಗಾರದ ಸರವಿದೆ. ಮಕ್ಕಳೊಂದಿಗೆ ಟೆರೇಸ್‌ನಲ್ಲಿ ಮಲಗಿರುವ ವೃದ್ಧ ಸೇವಕ ಮರಿಸ್ವಾಮಿ ಅದನ್ನು ಕದ್ದು ಬಿಟ್ಟರೆ?" ಎಂಬ ಯೋಚನೆ ಅವಳಿಗೆ ಬರುತ್ತದೆ.

ಅವಳು ತಕ್ಷಣ ಎದ್ದು, ತನ್ನ ಮಗಳನ್ನು ನೋಡಲು ಮೇಲಕ್ಕೆ ಹೋಗಬೇಕೆಂದು ಯೋಚಿಸುತ್ತಾಳೆ. ಅವಳ ವಯಸ್ಸಾದ ಅತ್ತೆ, "ಏನು ಸಮಸ್ಯೆ?" ಎಂದು ಕೇಳುತ್ತಾಳೆ ಸುಶೀಲಾ ತನ್ನ ಮನಸ್ಸಿನಲ್ಲಿರುವ ಭಯವನ್ನು ಅವರ ಮುಂದೆ ವ್ಯಕ್ತಪಡಿಸುತ್ತಾಳೆ. "ಹಾಗೇನೂ ಆಗುವುದಿಲ್ಲ, ಮರಿಸ್ವಾಮಿ ತುಂಬಾ ಒಳ್ಳೆಯ ಮನುಷ್ಯ" ಎಂದು ಅವರು ಅವಳನ್ನು ಸಮಾಧಾನಪಡಿಸುತ್ತಾಳೆ. ಆದರೂ ಸುಶೀಲಳಿಗೆ ನೆಮ್ಮದಿಯಿರಲಿಲ್ಲ.

ಆದುದರಿಂದ ಅತ್ತೆ, "ನಾನೇ ಹೋಗಿ ನೋಡಿ ಬರುತ್ತೇನೆ" ಎಂದು ಹೇಳಿ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋಗಿ ಅದು ಹೇಗೋ ಪುಟ್ಟಿಯನ್ನು ಕಂಡು ಹಿಡಿದು, ಅವಳ ಕುತ್ತಿಗೆಯನ್ನು ತಡವಿ ನೋಡುತ್ತಾಳೆ. ಅವಳ ಕುತ್ತಿಗೆಯಲ್ಲಿ ಸರ ಇರಲಿಲ್ಲ. "ಓ! ಸರ ಕಾಣಿಸುತ್ತಿಲ್ಲ" ಅತ್ತೆ ಜೋರಾಗಿ ಕಿರುಚಿಕೊಂಡಳು. ಧ್ವನಿ ಕೇಳಿದ ಮರಿಸ್ವಾಮಿ ಎದ್ದು, "ಯಾರದು?" ಎಂದು ಕೇಳುತ್ತಾ ಲೈಟ್ ಸ್ವಿಚ್ ಹಾಕಿದ. ಮರಿಸಾಮಿ ಮತ್ತು ಅತ್ತೆ ಪರಸ್ಪರ ಒಬ್ಬರನ್ನೊಬ್ಬರು ನೋಡಿ ಕೊಂಡರು.

ಅತ್ತೆ ಮರಿಸ್ವಾಮಿಯ ಬಳಿ, 'ಮಗುವಿನ ಕೊರಳಲ್ಲಿದ್ದ ಸರ ಎಲ್ಲಿ?' ಎಂದು ಕೇಳಿದರು. ಅದಕ್ಕೆ ಪ್ರತಿಯಾಗಿ ಮರಿಸ್ವಾಮಿ, "ನೀವು ತಾನೇ ಮಗುವಿನ ಕುತ್ತಿಗೆಯನ್ನು ಮುಟ್ಟಿರುವುದು. ನೀವು ಹೇಳಿ, ಸರ ಎಲ್ಲಿ?" ಎಂದು ಅವನೂ ಕೇಳಿದ. ಪರಸ್ಪರ ಇಬ್ಬರೂ ಜಗಳವಾಡತೊಡಗಿದರು.

ಧ್ವನಿ ಕೇಳಿ ಕೆಲವರು ಹಿರಿಯರು ಎದ್ದು ಅಲ್ಲಿಗೆ ಬಂದು ಸೇರಿದರು. ಅವರು ಮರಿಸ್ವಾಮಿಯನ್ನು ಪರಿಶೀಲಿಸಿದರು. ಅವನ ಬಳಿ ಯಾವುದೇ ಆಭರಣಗಳಿರಲಿಲ್ಲ. ಸುಶೀಲಾಳನ್ನು ಒಬ್ಬಂಟಿಯಾಗಿ ಪ್ರತ್ಯೇಕವಾಗಿ

ಕರೆದುಕೊಂಡ ಹೋದ ಅವಳ ತಾಯಿ, "ಸುಶೀ, ನಿನ್ನ ಅತ್ತೆ ತುಂಬಾ ಕಷ್ಟದಲ್ಲಿದ್ದಾರೆ. ಅವರ ಮಗಳು ಗಂಡನ ಮನೆಯಿಂದ ಹಿಂದಿರುಗಿ ಬಂದು ಬಿಟ್ಟಿದ್ದಾಳೆ. ಅವರ ಅಳಿಯ ನಿಮ್ಮ ಮಗಳಿಗೆ ಮೂರು ಸವರನ್ ಹಾಕಿದರೆ ಮಾತ್ರವೇ ಮತ್ತೆ ಮನೆಗೆ ಕರೆದೊಯ್ಯುತ್ತೇನೆಂದು ಹೇಳಿ ಕಳಿಸಿದ್ದಾನೆ. ಆದುದರಿಂದ ನಿನ್ನ ಅತ್ತೆಯೇ ಅದನ್ನು ತೆಗೆದುಕೊಂಡಿದ್ದರೂ ಇರಬಹುದು. ನೀನು ಅವರ ಬಳಿ ಹೋಗಿ ಕೇಳಿದರೆ ಅದು ಕುಟುಂಬಕ್ಕೇ ಅವಮಾನವಾಗುತ್ತದೆ. ಇದನ್ನು ಇಲ್ಲಿಗೇ ಸುಮ್ಮನೆ ಬಿಟ್ಟು ಬಿಡು" ಎಂದು ಹೇಳಿದಳು.

ಸುಶೀಲಾ ತಕ್ಷಣ ಗುಂಪಿನ ಬಳಿಗೆ ಬಂದು, "ಈ ಸಮಸ್ಯೆಯನ್ನು ಇಲ್ಲಿಗೇ ಬಿಟ್ಟು ಬಿಡೋಣ. ಆಭರಣ ಹೋದರೆ ಹೋಗಲಿ ಸುಮ್ಮನಿದ್ದು ಬಿಡೋಣ" ಎಂದಳು. ಅತ್ತೆ ದಯನೀಯವಾಗಿ, "ನಾನೇನೂ ಅದನ್ನು ತೆಗೆದುಕೊಂಡಿಲ್ಲ ಕಣೇ! ನೀನೇನು ನನ್ನನ್ನು ಅನುಮಾನಿಸುತ್ತಿದ್ದೀಯಾ" ಎಂದರು.



ಬೆಳಿಗ್ಗೆ ಎದ್ದ ನಂತರ, ಸುಶೀಲ ತನ್ನ ಮಗಳು ಪುಟ್ಟಿಯನ್ನು ಪ್ರತ್ಯೇಕವಾಗಿ ಕ-ರೆದು, ಸರದ ಬಗ್ಗೆ ನಿಧಾನವಾಗಿ ಅವಳ ಬಳಿ ಕೇಳಿದಳು. ಮಗಳು, "ಅಮ್ಮಾ, ನಾನು ರಾತ್ರಿ ಮಲಗಲು ಹೋಗುವ ಮುನ್ನ ಅದನ್ನು ತೆಗೆದು ನಿಮ್ಮ ಆಭರಣದ ಡಬ್ಬಿಯಲ್ಲಿಟ್ಟು ಅದನ್ನು ಸೂಟ್‌ಕೇಸ್‌ನಲ್ಲಿ ಇಟ್ಟಿದ್ದೇನೆ. ರಾತ್ರಿ ಅದನ್ನು ಧರಿಸಿಕೊಂಡು ಮಲಗಬಹುದೇ?" ಎಂದು ಅವಳು ಬಹಳ ಸರಳವಾಗಿ ಕೇಳಿದಳು. ಮರಿಸ್ವಾಮಿ ಮತ್ತು ತನ್ನ ಅತ್ತೆ ಇಬ್ಬರನ್ನೂ ತಪ್ಪಾಗಿ ಭಾವಿಸಿದೆನಲ್ಲಾ ಎಂದು ಸುಶೀಲ ಮನಸ್ಸಿನಲ್ಲೇ ವಿಷಾದಿಸಿದಳು.

"ನಾನು ಸುಮಾರು ಹತ್ತು ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಇವರು ನನ್ನ ಮೇಲೇ ಅನುಮಾನ ಪಡುತ್ತಿದ್ದಾರಲ್ಲಾ!" ಎಂದು ಮರಿಸ್ವಾಮಿಗೆ ನೋವು. "ಇವಳ ಅಪ್ಪನ ಜೊತೆಗೆ ಜನಿಸಿದವಳು ನಾನು. ನನ್ನನ್ನೇ ಇವಳು ಅನುಮಾನಿಸುತ್ತಿದ್ದಾಳಲ್ಲಾ!' ಎಂದು ಅತ್ತೆಗೆ ಇನ್ನೊಂದೆಡೆ ಕೊರಗು. "ಅಪ್ಪನ ಜೊತೆಯಲ್ಲಿ ಹುಟ್ಟಿದವರು ಇವರು. ಇವರು ಹೋಗಿ ತಮ್ಮದೇ ಮೊಮ್ಮಗಳ ಆಭರಣವನ್ನು ತೆಗೆದಿರಬಹುದೇ" ಎಂದು ಸುಶೀಲ ಕೂಡ ಮನಸ್ಸಿನಲ್ಲೇ ನೊಂದುಕೊಂಡಳು.

ಬೆಲೆಬಾಳುವ ವಸ್ತುವನ್ನು ಎಚ್ಚರಿಕೆಯಿಂದ ನೋಡಿಕೊಳ್ಳದ ಕಾರಣ ಎಷ್ಟು ಜನರಿಗೆ ಮಾನಸಿಕ ವೇದನೆ. ದುಬಾರಿ ವಸ್ತುಗಳನ್ನು ಜಾಗರೂಕತೆಯಿಂದ ಎಲ್ಲೋ ಇಟ್ಟು ಬಿಟ್ಟು ನಿಮ್ಮ ಹತ್ತಿರದ ಜನರಿಗೆ ಕಷ್ಟ ತರಬೇಡಿ.

# ವಿನಯದಿಂದಿರಿ!



- ಮರಗಳು ಕೂಡ ಹಣ್ಣುಗಳಿಂದ ತುಂಬಿದ್ದಾಗ ತಲೆ ಬಾಗುತ್ತವೆ. ನೀವು ಎಷ್ಟೇ ಸಂಪಾದಿಸಿದರೂ ವಿನಮ್ರರಾಗಿರಿ.
- ಸೌಂದರ್ಯವು ಹೊರನೋಟದಲ್ಲಿಲ್ಲ. ಅದು ನಮ್ಮ ನಡವಳಿಕೆ, ಕಾರ್ಯಗಳು ಮತ್ತು ನಮ್ಮ ಹೃದಯದಿಂದ ಹೊರಹೊಮ್ಮುವ ಕರುಣೆಯಲ್ಲಿದೆ.
- ಕಳೆದು ಹೋದ ಕಾಲದಂತೆಯೇ ಭವಿಷ್ಯದ ದಿನಗಳೂ ಇರುವುದಿಲ್ಲ. ನಮ್ಮ ಕ್ರಿಯೆಗಳೇ ನಮ್ಮ ಭವಿಷ್ಯವನ್ನು ಒಳ್ಳೆಯದಾಗಿಸುತ್ತವೆ ಅಥವಾ ಕೆಟ್ಟದಾಗಿಸುತ್ತವೆ.
- ಕೆಲವು ವಿಷಯಗಳ ಬಗ್ಗೆ, 'ಇದನ್ನು ಮಾಡಲು ನಮ್ಮಿಂದ ಖಂಡಿತಾ ಸಾಧ್ಯವಿಲ್ಲ' ಎಂದು ಭಾವಿಸುತ್ತೇವೆ. ನಾವು ಆ ಕೆಲಸವನ್ನು ಮಾಡಲು ಬಯಸದಿದ್ದಾಗ ಮಾತ್ರ ಇಂತಹ ಆಲೋಚನೆ ಉದ್ಭವಿಸುತ್ತದೆ. ನಾವು ಬಯಸಿದರೆ, ಅದನ್ನು ಮಾಡಬಹುದು.
- ಕೆಲವು ವಿಷಯಗಳಿಗೆ ಹೆದರುತ್ತೇವೆ ಎಂದ ಮಾತ್ರಕ್ಕೆ ನಾವು ಹೇಡಿಗಳಲ್ಲ. ಎಲ್ಲರೂ ಯಾವುದೋ ಒಂದು ವಿಷಯಕ್ಕೆ ಹೆದರುವುದು ಸಹಜ. ಭಯ ನಾಚಿಕೆಗೇಡಿನ ಸಂಗತಿಯಲ್ಲ.
- ನಿಮ್ಮ ಜೀವನದಲ್ಲಿ ನೀವು ಕೆಲವು ಜನರನ್ನು ಕಳೆದುಕೊಂಡಿದ್ದಕ್ಕೆ ವಿಷಾದಿಸಬೇಡಿ. ನೀವು ಪ್ರಯತ್ನಿಸಿದರೆ ನಿಮಗೆ ಅವರಿಗಿಂತ ಉತ್ತಮ ಜನರು ಸಿಗುತ್ತಾರೆ.
- ಅವಕಾಶ ಬಂದಾಗ ಕೈಬಿಡಬೇಡಿ. ಕೆಲವೊಮ್ಮೆ ನಿಮಗೆ ಎರಡನೇ ಅವಕಾಶ ಸಿಗದೇ ಹೋಗಬಹುದು.
- ದಯೆ ಮತ್ತು ಕೃತಜ್ಞತೆ ನಿಮ್ಮನ್ನು ಅನೇಕ ಕಷ್ಟಗಳಿಂದ ರಕ್ಷಿಸುತ್ತದೆ. ಎಲ್ಲರಿಗೂ ಮತ್ತು ಎಲ್ಲದಕ್ಕೂ ಕೃತಜ್ಞರಾಗಿರಿ.



ಅದು ಕ್ಯಾನ್ಸರ್ ರೋಗಿಗಳಿಗೆ ವಿಶೇಷ ಚಿಕಿತ್ಸೆ ನೀಡುತ್ತಿದ್ದ ಪ್ರಸಿದ್ಧ ಆಸ್ಪತ್ರೆಯಾಗಿತ್ತು. ಅಲ್ಲಿ ವೈದ್ಯರು ಅತ್ಯುತ್ತಮ ಚಿಕಿತ್ಸೆ ನೀಡುತ್ತಿದ್ದರು ಮತ್ತು ಆರೋಗ್ಯ ಕಾರ್ಯಕರ್ತರು ರೋಗಿಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಇದು ರೋಗಿಗಳಿಗೆ ಹೊಸ ಭರವಸೆ ನೀಡುತ್ತಿತ್ತು. ಇದು ದೀರ್ಘಾವಧಿಯ ಚಿಕಿತ್ಸೆಯಾಗಿರುವುದರಿಂದ, ರೋಗಿಗಳು ಹಲವಾರು ದಿನಗಳವರೆಗೆ ಆಸ್ಪತ್ರೆಯಲ್ಲೇ ಇರಬೇಕಾಗುತ್ತಿತ್ತು.

ಅವರಲ್ಲಿ ಹಲವರಿಗೆ ಇರುವ ಒಂದೇ ಸಮಸ್ಯೆ ಎಂದರೆ ಆಹಾರ! ಕ್ಯಾನ್ಸರ್‌ಗೆ ಕಿಮೊಥೆರಪಿ ಮಾಡಿದಾಗ, ಅವರ ಬಾಯಿ ತುಂಬಾ ನೋಯುತ್ತದೆ. ಅವರಿಗೆ ತೀವ್ರ ವಾಕರಿಕೆ ಬರುತ್ತದೆ. ಇದರಿಂದಾಗಿ, ಅವರು ಸರಿಯಾಗಿ ತಿನ್ನಲು ಕಷ್ಟಪಡುತ್ತಾರೆ. ಆಸ್ಪತ್ರೆಯ ಆಹಾರದಲ್ಲಿ ರುಚಿಗಿಂತ ಆರೋಗ್ಯಕ್ಕೆ ಆದ್ಯತೆ ನೀಡಲಾಗುತ್ತದೆ. ಆದ್ದರಿಂದ, ಸ್ವಾಭಾವಿಕವಾಗಿ, ರೋಗಿಗಳು ಅದನ್ನು ಇಷ್ಟಪಡುವುದಿಲ್ಲ.

ಮಕ್ಕಳ ವಾರ್ಡ್‌ನ ಉಸ್ತುವಾರಿ ವಹಿಸಿರುವ ಅಡುಗೆಯವರಾದ ಶೀಲಾ ಈ ವಿಷಯದಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಅನಾರೋಗ್ಯದಿಂದ ಗುಣಮುಖವಾಗುವುದು ಆಹಾರದಿಂದ ಪ್ರಾರಂಭವಾಗುತ್ತದೆ ಎಂದು ಅವರು ನಂಬುತ್ತಿದ್ದರು. ಪ್ರತಿ ಮಗುವೂ ತನ್ನ ತಟ್ಟೆಯನ್ನು ಖಾಲಿ ಮಾಡಿಯೇ ಹಿಂತಿರುಗಿಸಬೇಕು ಎಂದು ಅವರು ಹೇಳುತ್ತಿದ್ದರು. ಯಾರಾದರೂ ಅದನ್ನು ತಿನ್ನದೆ ಬಿಟ್ಟರೆ, ಅವರು ಆ ಮಗುವನ್ನು ಪ್ರಶ್ನಿಸುತ್ತಿದ್ದರು.

ಎಂಟು ವರ್ಷದ ಕಿರಣ್ ಅಲ್ಲಿಗೆ ಬಂದ ಮೊದಲ ದಿನ ಊಟ ಮಾಡಲಿಲ್ಲ. ಕಿಮೊಥೆರಪಿ ಚಿಕಿತ್ಸೆಯಿಂದ ಬಾಯಿ ನೋಯುತ್ತಿದ್ದ ಕಾರಣ ಅಳುತ್ತಲೇ ಇದ್ದ. ಅವನು ಕೆಲವು ಬಿಸ್ಕತ್ತುಗಳನ್ನು ಮಾತ್ರ ತಿಂದನು. ಶೀಲಾ ಕಳುಹಿಸಿದ್ದ ಆಹಾರ ಹಾಗೆಯೇ ಹಿಂತಿರುಗಿತು. ನಂತರ ಶೀಲಾ ಹೋಗಿ ಅವನೊಂದಿಗೆ ಮಾತನಾಡಿದಳು. ಬಂದ ಕೂಡಲೇ, "ನಿನಗೆ ಏನು ತಿನ್ನಲು ಇಷ್ಟ? ನೀನು ಯಾಕೆ ಇದನ್ನು ತಿನ್ನಲಿಲ್ಲ?" ಎಂದು ಅವಳು ಅವನನ್ನು ಕೇಳಲಿಲ್ಲ. ಬದಲಿಗೆ ಸ್ವಲ್ಪ ಹೊತ್ತು ಅವನೊಂದಿಗೆ ತಮಾಷೆಯಾಗಿ ಮಾತನಾಡಿದಳು. "ಜ್ವರ ಬಂದಾಗ ನೀನು ಏನು ತಿನ್ನುತ್ತೀಯ?" ಎಂದು ಅವಳು ಕೇಳಿದಳು. "ನಮ್ಮ ಅಜ್ಜಿ ಅನ್ನದ ಗಂಜಿ ಮಾಡಿ ಅದರಲ್ಲಿ ಯಾವುದೋ ಪುಡಿ ಬೆರೆಸುತ್ತಾಳೆ. ಅದು ರುಚಿಕರವಾಗಿರುತ್ತದೆ" ಎಂದು ಕಿರಣ್ ಹೇಳಿದ.

ಅವಳು ತಕ್ಷಣ ಅಲ್ಲಿಂದ ಹೊರಟು ಬಂದು, ಬೇಳೆ ಮತ್ತು ಅಕ್ಕಿಯನ್ನು ಬೆರೆಸಿ ಗಂಜಿಯನ್ನು ತಯಾರಿಸಿ ಕಿರಣ್‌ಗೆ ಕೊಡಲು ಆದೇಶಿಸಿದಳು. ಕೆಲವೇ ನಿಮಿಷಗಳಲ್ಲಿ ಕಪ್ ಖಾಲಿಯಾಗಿತ್ತು. "ನೀವು ನಮ್ಮ ಅಜ್ಜಿಯಂತೆಯೇ ಗಂಜಿ ಮಾಡಿದ್ದೀರಿ" ಎಂದು ಅವನು ಶೀಲಾಳಿಗೆ ಹೇಳಿದ. ಶೀಲಾ ಅವನನ್ನು ಪ್ರೀತಿಯಿಂದ ಮುದ್ದಿಸಿದಳು. ನಂತರದ ದಿನಗಳಲ್ಲಿ, ಅವಳು ಅವನಿಗೆ ಏನು ಇಷ್ಟ ಎಂದು ಕೇಳಿ, ಅವನಿಗಾಗಿ ಅಡುಗೆ ತಯಾರಿಸುತ್ತಿದ್ದಳು. ಅವನು ತುಂಬಾ ದಣಿದ ದಿನಗಳಲ್ಲಿಯೂ ಸಹ, ಸ್ವಲ್ಪವಾದರೂ ತಿನ್ನುತ್ತಿದ್ದನು. ಔಷಧಿಯ ಜೊತೆಗೆ ಆಹಾರವೂ ಅವನಿಗೆ ಭರವಸೆಯನ್ನು ನೀಡಿತು ಮತ್ತು ಅವನು ಬೇಗನೆ ಚೇತರಿಸಿಕೊಂಡನು.

ಅವನು ಚೇತರಿಸಿಕೊಂಡು ಮನೆಗೆ ಹೋಗುವ ದಿನ ಶೀಲಾಳ ಸುಂದರ ಚಿತ್ರವನ್ನು ಬಿಡಿಸಿ ಅವಳಿಗೆ ಉಡುಗೊರೆಯಾಗಿ ಕೊಟ್ಟನು. ಯಾವುದಾದರೂ ಒಂದು ಮಗು ಊಟ ಮಾಡದೆ ಹಿಂತಿರುಗಿಸಿದಾಗಲೆಲ್ಲಾ ಶೀಲಾ ಆ ಚಿತ್ರವನ್ನು ನೋಡುತ್ತಿದ್ದಳು. ಅವಳು ತಕ್ಷಣ ಹೋಗಿ ಮಗುವಿನ ಆಹಾರದ ರುಚಿಯನ್ನು ವಿಚಾರಿಸುತ್ತಿದ್ದಳು.

ದೊಡ್ಡ ಯಂತ್ರಗಳು, ವೈದ್ಯಕೀಯ ಉಪಕರಣಗಳು ಮತ್ತು ಔಷಧಿಗಳು ತುಂಬಿರುವ ಆ ಸ್ಥಳದಲ್ಲಿ, ಪ್ರತಿ ಮಗುವಿನ ಆಹಾರದ ಬಗ್ಗೆಯೂ ಚಿಂತಿಸುವುದೇ ಶೀಲಾಳ ವಿಶಿಷ್ಟತೆಯಾಗಿತ್ತು.

ಕಣ್ಣನ್ ಒಂದು ಶಾಲೆಯಲ್ಲಿ ಗುಮಾಸ್ತನಾಗಿ ದೀರ್ಘ ಕಾಲದಿಂದ ಕೆಲಸ ಮಾಡುತ್ತಿದ್ದ. ಶಿಕ್ಷಕರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವುದು, ಪ್ರಾಂಶುಪಾಲರಿಗೆ ಸಹಾಯ ಮಾಡುವುದು, ಕಚೇರಿ ಕೆಲಸ ಮಾಡುವುದು ಮತ್ತು ವಿದ್ಯಾರ್ಥಿಗಳನ್ನು ನೋಡಿಕೊಳ್ಳುವುದರಿಂದ ಹಿಡಿದು ಎಲ್ಲವನ್ನೂ ಅವನು ಮಾಡುತ್ತಿದ್ದ. ಅವನು ನಿವೃತ್ತಿ ಹೊಂದುವ ದಿನ ಬಂದೇ ಬಿಟ್ಟಿತು.

ಸಾಮಾನ್ಯವಾಗಿ ಶಿಕ್ಷಕರು ನಿವೃತ್ತರಾದಾಗ, ಅವರ ಸಹ ಶಿಕ್ಷಕರು ಪರಸ್ಪರ ಹಣ ಸಂಗ್ರಹಿಸಿ, ಅವರಿಗೆ ಏನಾದರೂ ಉಡುಗೊರೆ ನೀಡಿ, ಬೀಳ್ಕೊಡುಗೆ ಪಾರ್ಟಿ ಮಾಡಿ ಅವರನ್ನು ಹೊಗಳುತ್ತಾರೆ. ಆದರೆ ಆ

# ಬೇರೆಯವರು ನೋಡದುದನ್ನು ನೋಡಿದವರು!



ಶಾಲೆಯ ಮುಖ್ಯ ಶಿಕ್ಷಕರು ಕಣ್ಣನ್‌ಗೆ ಹಾಗೆ ಮಾಡಲು ಬಯಸಲಿಲ್ಲ. ಅವನು ಒಬ್ಬ ಸಾಮಾನ್ಯ ಉದ್ಯೋಗಿ ಅಷ್ಟೇ. ಅವನಿಗೆ ಕೋಣೆಯೊಳಗೇ ಒಂದು ಶಾಲು ಹೊದಿಸಿ ಕಳಿಸಿದರಾಯಿತು ಎಂದು ಮುಖ್ಯ ಶಿಕ್ಷಕರು ಯೋಚಿಸಿದ್ದರು.

ಆದರೆ ಕಣ್ಣನ್ ನಿವೃತ್ತಿಯಾಗುವ ದಿನ, ಅನೇಕ ಹಳೆಯ ವಿದ್ಯಾರ್ಥಿಗಳು ಶಾಲೆಗೆ ಬರಲು ಪ್ರಾರಂಭಿಸಿದರು. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ಜಮಾಯಿಸಿದ್ದರು. ಅವರನ್ನೆಲ್ಲ ಅಲ್ಲಿ ನೋಡಿ ಮುಖ್ಯ ಶಿಕ್ಷಕರು ಗೊಂದಲಕ್ಕೊಳಗಾದರು. ಅವರುಗಳು, ‘ಕಣ್ಣನ್ ಅವರ ನಿವೃತ್ತಿ ಸಮಾರಂಭದಲ್ಲಿ ಭಾಗವಹಿಸಲು ತಾವು ಬಂದಿದ್ದೇವೆ’ ಎಂದು ಹೇಳಿದರು. ಕೆಲವರು ವಿದೇಶದಿಂದ ಬಂದಿದ್ದರು. ಎಲ್ಲರೂ ಕಣ್ಣನ್ ಅವರ ಕೈಗಳನ್ನು ಹಿಡಿದು ಭಾವುಕರಾಗಿ ಮಾತನಾಡಿದರು. ಕಣ್ಣನ್‌ಗಳ ಕಣ್ಣುಗಳಲ್ಲಿ ನೀರು ತುಂಬುಕೊಂಡಿತ್ತು...

“ನಾನು ನೆಲಕ್ಕೆ ಬಿದ್ದಾಗ, ಇವರು ನನ್ನನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಆಸ್ಪತ್ರೆಗೆ ಹೋದರು. ನಮ್ಮ ಕುಟುಂಬದ ಬಳಿ ಆಸ್ಪತ್ರೆಗೆ ಪಾವತಿಸಲು ಹಣವೂ ಇರಲಿಲ್ಲ. ಇವರೇ ನನ್ನನ್ನು ತನ್ನ ಸ್ವಂತ ಖರ್ಚಿನಲ್ಲಿ ಗುಣಪಡಿಸಿದರು" ಎಂದು ಒಬ್ಬ ಹಳೆಯ ವಿದ್ಯಾರ್ಥಿ ಹೇಳಿದ.

"ನಾನು ಗಣಿತದಲ್ಲಿ ಅನುತ್ತೀರ್ಣನಾದೆ ಎಂದು ಶಿಕ್ಷಕರು ತರಗತಿಯ ಹೊರಗೆ ಮಂಡಿಯೂರಿ ಕುಳಿತುಕೊಳ್ಳಲು ಹೇಳಿದರು. ಇವರು ಪ್ರತಿದಿನ ಸಂಜೆ ನನಗೆ ಗಣಿತದ ಟ್ಯೂಷನ್ ತೆಗೆದುಕೊಂಡು ಉತ್ತಮ ಅಂಕಗಳನ್ನು ಗಳಿಸುವಂತೆ ಮಾಡಿದರು. ನನ್ನಂತಹ ಅನೇಕ ಜನರು ಇವರ ಬಳಿ ಪಾಠ ಹೇಳಿಸಿಕೊಂಡಿದ್ದಾರೆ" ಎಂದು ಮತ್ತೊಬ್ಬ ಹೇಳಿದ. ಕಣ್ಣನ್ ಅವರು ಮಕ್ಕಳ ಬಳಿ ಏನೋ ಮಾತನಾಡುತ್ತಿದ್ದಾರೆಂದು ಮಾತ್ರ ಶಿಕ್ಷಕರಿಗೆ ತಿಳಿದಿತ್ತು. ಅವರು ಗಣಿತದಲ್ಲಿ ಅಷ್ಟೊಂದು ಪ್ರತಿಭಾನ್ವಿತರು ಎಂದು ಯಾರಿಗೂ ತಿಳಿದಿರಲಿಲ್ಲ.

ಪ್ರತಿದಿನ ಉಪಾಹಾರವಿಲ್ಲದೆ ಶಾಲೆಗೆ ಬರುವ ವಿದ್ಯಾರ್ಥಿನಿಗೆ ಆತ ಊಟ ಕೊಡುತ್ತಿದ್ದ. ಯಾರೋ ಹೇಳಿದರು, ದೂರದ ಹಳ್ಳಿಯ ಹುಡುಗಿಗೆ ಸೈಕಲ್ ಖರೀದಿಸಿ ಕೊಟ್ಟ ಎಂದು. ತನ್ನ ತಂದೆಯ ನಷ್ಟದಿಂದ ಶಾಲೆ ಬಿಟ್ಟಿದ್ದ ವಿದ್ಯಾರ್ಥಿಯನ್ನು ಸಮಾಧಾನಪಡಿಸಲು ಕಣ್ಣನ್ ಅವರ ಮನೆಗೆ ಹೋಗಿ ಅವನನ್ನು ಮತ್ತೆ ಶಾಲೆಗೆ ಕರೆತಂದಿದ್ದ...

ಆ ಶಾಲೆಯಲ್ಲಿ ನಿವೃತ್ತಿ ಹೊಂದಿದ ಯಾವುದೇ ಶಿಕ್ಷಕರನ್ನು ಬೀಳ್ಕೊಡಲು ಸಹ ಇಷ್ಟೊಂದು ವಿದ್ಯಾರ್ಥಿಗಳು ಹಿಂದೆಂದೂ ಸೇರಿರಲಿಲ್ಲ. ಕಣ್ಣನ್‌ಗೆ ಬೀಳ್ಕೊಡುಗೆ ನೀಡಲು ಅವರೆಲ್ಲರೂ ಒಟ್ಟಾಗಿ ಬಂದಿದ್ದರು ಮತ್ತು ಅವರೆಲ್ಲರೂ ಸೇರಿ ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿ ತಂದಿದ್ದರು. ಕಣ್ಣನ್ ಅದನ್ನೂ ಶಾಲೆಗೇ ನೀಡಿದ.

ಆ ದಿನ ಶಾಲಾ ಮೈದಾನದಲ್ಲಿ ಮುಖ್ಯೋಪಾಧ್ಯಾಯರು ಭವ್ಯವಾದ ಬೀಳ್ಕೊಡುಗೆ ಸಮಾರಂಭವನ್ನೇ ಏರ್ಪಡಿಸಬೇಕಾಯಿತು. "ನಾವೆಲ್ಲರೂ ತರಗತಿಯ ಒಳಗಿರುವ ಮಕ್ಕಳ ಬಗ್ಗೆ ಮಾತ್ರ ಕಾಳಜಿ ವಹಿಸುತ್ತಿದ್ದೆವು. ತರಗತಿಯ ಹೊರಗೆ, ಕಣ್ಣನ್ ನಾವು ನೋಡದ ಅವರ ಸಮಸ್ಯೆಗಳನ್ನು ನೋಡಿದ್ದಾರೆ. ನಾವು ಸಹ ಹಾಗೆಯೇ ನೋಡಬೇಕೆಂದು ಇವರು ನಮಗೆ ಕಲಿಸಿದ್ದಾರೆ. ಕಣ್ಣನ್ ಶಾಲೆಗೆ ಬಂದು ಮಕ್ಕಳ ಸೇವೆ ಮಾಡುವುದನ್ನು ಇನ್ನು ಮುಂದೆಯೂ ಮುಂದುವರಿಸಬೇಕು. ಅವರು ನಮಗೆ ನೀಡಿದ ಹಣವನ್ನು ಅವರಿಗೇ ನೀಡುವುದರೊಂದಿಗೆ, ಶಾಲೆಯಲ್ಲಿ ಅವರು ಸಲ್ಲಿಸುವ ಈ ಸೇವೆಗಾಗಿ ಬೇರೊಂದು ಮೊತ್ತವನ್ನು ಸಹ ನೀಡುತ್ತೇವೆ" ಎಂದು ಮುಖ್ಯೋಪಾಧ್ಯಾಯರು ಹೇಳಿದರು. ಎಲ್ಲಾ ಶಿಕ್ಷಕರೂ ಕೈ ಚಪ್ಪಾಳೆ ತಟ್ಟಿ ಅದನ್ನು ಸ್ವಾಗತಿಸಿದರು.

# ಮಕ್ಕಳಿಗೆ ಸದ್ಗುಣಗಳನ್ನು ಕಲಿಸಿ!



ಇಂದಿನ ಮಕ್ಕಳು ತಾಂತ್ರಿಕವಾಗಿ ಹಿರಿಯರಿಗಿಂತ ಹೆಚ್ಚು ಬುದ್ಧಿವಂತರು. ಇದು ಅವರ ಕಲ್ಪನೆಗಳಲ್ಲಿಯೂ ಪ್ರತಿಫಲಿಸುತ್ತದೆ. ಒಬ್ಬ ಅಜ್ಜಿ ಮಗುವಿಗೆ ಒಂದು ಕಥೆಯನ್ನು ಹೇಳಿದಳು.... ಬಾಯಾರಿಕೆಯಿಂದ ಬಳಲುತ್ತಿದ್ದ ಕಾಗೆ ನೀರಿನ ಹೂಜಿಯೊಳಗೆ ಕಲ್ಲುಗಳನ್ನು ಹಾಕಿ ನೀರನ್ನು ಮೇಲಕ್ಕೆ ತರುವ ಮೂಲಕ ನೀರು ಕುಡಿದ ಕಥೆ ಅದು. ಪೂರ್ತಿ ಕೇಳಿದ ಮೇಲೆ ಮಗು ಕಥೆಯನ್ನು ಈ ರೀತಿ ಬದಲಾಯಿಸಿತು: 'ಹೂಜಿಯಲ್ಲಿ ನೀರು ಕೆಳಭಾಗದಲ್ಲಿತ್ತು. ಅದನ್ನು ಕುಡಿಯಲು ಸಾಧ್ಯವಿಲ್ಲ ಎಂದು ಅದಕ್ಕೆ ತಿಳಿಯಿತು. ಕಾಗೆ ತಕ್ಷಣ ಗೂಗಲ್ ನಕ್ಷೆಯಲ್ಲಿ ಹುಡುಕಾಡಿತು. ನಕ್ಷೆಯು ಹತ್ತಿರದಲ್ಲಿ ಒಂದು ಕೊಳವಿದೆ ಎಂದು ತೋರಿಸಿತು. ಕಾಗೆ ಆ ಕೊಳಕ್ಕೆ ಹೋಗಿ ನೀರು ಕುಡಿಯಿತು.' ಈ ಕಲ್ಪನೆಯನ್ನು ನಿರೀಕ್ಷಿಸದ ಅಜ್ಜಿ ಆಶ್ಚರ್ಯಚಕಿತರಾದರು.

ಇನ್ನೊಂದು ನೀತಿಕಥೆ: ಒಂದು ನರಿ ದ್ರಾಕ್ಷಿ ತೋಟಕ್ಕೆ ಹೋಗಿ ದ್ರಾಕ್ಷಿಯನ್ನು ತಿನ್ನಲು ಉತ್ಸಾಹದಿಂದ ಪ್ರಯತ್ನಿಸಿತು. ಹಣ್ಣುಗಳು ಗಿಡದಲ್ಲಿ ತುಂಬಾ ಎತ್ತರದಲ್ಲಿದ್ದವು. ನರಿ ಮೇಲೆ ಹಾರಿ ಅವುಗಳನ್ನು ಕೀಳಲು ಪ್ರಯತ್ನಿಸಿತು ಆದರೆ ವಿಫಲವಾಯಿತು. ಕಡೆಗೆ ಅದು, "ಹೇ... ಈ ಹಣ್ಣು ಹುಳಿಯಾಗಿದೆ" ಎಂದು ಹೇಳುತ್ತಾ ಅಲ್ಲಿಂದ ಹೊರಟು ಹೋಯಿತು. ಈ ಕಥೆಯನ್ನು ಕೇಳಿದ ಮಗುವೊಂದು ಕಥೆಯನ್ನು ಹೀಗೆ ಬದಲಾಯಿಸಿತು: "ದ್ರಾಕ್ಷಿಯನ್ನು ಕೀಳಲು ಸಾಧ್ಯವಾಗದ ಕಾರಣ, ನರಿ ತಕ್ಷಣ ಫೋನ್ ಎತ್ತಿ, ಫುಡ್ ಡೆಲಿವರಿ ಅಪ್ಲಿಕೇಶನ್ ಮೂಲಕ ಒಂದು ಕಿಲೋ ದ್ರಾಕ್ಷಿಯನ್ನು ಆರ್ಡರ್ ಮಾಡಿತು. ಕಾಲು ಗಂಟೆಯೊಳಗೆ ಆಹಾರ ಡೆಲಿವರಿ ಮ್ಯಾನ್ ಬಂದು ದ್ರಾಕ್ಷಿಯನ್ನು ಕೊಟ್ಟು ಹೋದನು. ಸಂತೋಷದಿಂದ, ಅದು ಸಿಹಿಯಾದ ದ್ರಾಕ್ಷಿಯನ್ನು ತಿಂದಿತು"

ಮಕ್ಕಳಿಗೆ ನೀತಿಯ ಮೂಲಕ ಸದ್ಗುಣಗಳನ್ನು ಕಲಿಸಿದರೆ, ಅವರ ಕಲ್ಪನೆಗಳು ಸಹ ನೈತಿಕತೆಯ ಮೇಲೆ ಆಧಾರಿತವಾಗಿರುತ್ತವೆ. ಅವರಿಗೆ ಎಂತಹ ನೀತಿಗಳನ್ನು ತಿಳಿಸಬೇಕು?

- ಮಗುವಿನ ಬೆಳವಣಿಗೆಯಲ್ಲಿ ಕುಟುಂಬವು ಪ್ರಮುಖ ಪಾತ್ರ ವಹಿಸುತ್ತದೆ. ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಎಷ್ಟೇ ಸಮಸ್ಯೆಗಳು ಬಂದರೂ ಪರಸ್ಪರ ಒಬ್ಬರನ್ನೊಬ್ಬರು ಬಿಟ್ಟು ಕೊಡದೆ ಇನ್ನೊಬ್ಬರಿಗೆ ನೀಡುವ ಪ್ರೀತಿ ಮತ್ತು ವಾತ್ಸಲ್ಯವನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಅದೇ ಭಾವನೆಯನ್ನು ಅವರು ತಮ್ಮಲ್ಲೂ ಬೆಳೆಸಿಕೊಳ್ಳಬೇಕು.

- ವಯಸ್ಕರಾಗಲಿ, ಸ್ನೇಹಿತರಾಗಲಿ, ಮನೆಗೆಲಸದವರಾಗಿರಲಿ ಅಥವಾ ಆಟದ ಸಹಪಾಠಿಗಳಾಗಿರಲಿ ಎಲ್ಲರನ್ನೂ ಗೌರವದಿಂದ ನಡೆಸಿಕೊಳ್ಳಬೇಕು. ಮಕ್ಕಳು ತಮ್ಮ ಪೋಷಕರು ಮತ್ತು ಇತರರನ್ನು ನೋಡಿ ಗೌರವದಿಂದ ವರ್ತಿಸಲು ಕಲಿಯುತ್ತಾರೆ. ಅವರಿಗೆ ಉತ್ತಮ ಮಾದರಿಗಳನ್ನು ಪರಿಚಯಿಸಬೇಕು.

- ಸವಾಲುಗಳು ಮತ್ತು ಸಮಸ್ಯೆಗಳು ಎದುರಾದಾಗ, ನಾವು ಮಣಿಯಬೇಕು ಮತ್ತು ವಿನಮ್ರತೆಯನ್ನು ಹೊಂದಿರಬೇಕು. ಸಂಬಂಧಗಳು ಮತ್ತು ಸ್ನೇಹಗಳಲ್ಲಿ ನಾವು ವಿನಯವನ್ನು ಹೊಂದಿರಬೇಕು. ಆದರೆ, ನಾವು ಪೂರ್ತಿಯಾಗಿ ಅವರಿಗೆ ಮಣಿದರೆ,

ನಾವು ನಮ್ಮ ಸ್ವಾಭಿಮಾನವನ್ನು ಕಳೆದುಕೊಳ್ಳುವ ಅಪಾಯವಿದೆ. ಈ ವ್ಯತ್ಯಾಸದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು ಮತ್ತು ಅವರು ಇತರರೊಂದಿಗೆ ಹೇಗೆ ಬೆರೆಯಬೇಕೆಂದು ಅವರಿಗೆ ಕಲಿಸಬೇಕು.

● ಸಹಾಯದ ಅಗತ್ಯವಿರುವ ಯಾರಿಗಾದರೂ ಸಹಾಯಹಸ್ತ ಚಾಚುವುದನ್ನು ನಾವು ಅಭ್ಯಾಸ ಮಾಡಿಸಬೇಕು. ಇಂತಹ ದಯಾ ಹೃದಯದಿಂದ ಬೆಳೆಯುವ ಮಕ್ಕಳನ್ನು ಸಮಾಜವು ಗೌರವದಿಂದ ನೋಡುತ್ತದೆ.

● ಇದು ಜಗತ್ತಿನ ಯಾವುದೇ ಮೂಲೆಗೆ ಯಾರು ಬೇಕಾದರೂ ಪ್ರಯಾಣಿಸಬಹುದಾದ ಕಾಲಘಟ್ಟ. ಜಗತ್ತಿನ ಪ್ರತಿಯೊಬ್ಬರೂ ಆಹಾರ, ಬಟ್ಟೆ, ಪದ್ಧತಿಗಳು, ಧಾರ್ಮಿಕ ಆಚರಣೆಗಳು ಮತ್ತು ಮಾತು – ಎಲ್ಲದರಲ್ಲೂ ವಿಭಿನ್ನರು. ಮಕ್ಕಳು ಈ ವ್ಯತ್ಯಾಸಗಳನ್ನು ಗೌರವಿಸಲು ಮತ್ತು ಅವುಗಳನ್ನು ಲೆಕ್ಕಿಸದೆ ಎಲ್ಲರನ್ನೂ ಸಮಾನವಾಗಿ ನಡೆಸಿಕೊಳ್ಳಲು ಕಲಿಯಬೇಕು.

● ಸಮಸ್ಯೆ ಎದುರಾದಾಗ, ನಮ್ಮ ಮಗು ತಪ್ಪು ಮಾಡಿದ್ದರೂ ನಾವು ಅವನನ್ನು ಬೆಂಬಲಿಸಿದರೆ, ಆ ಮಗು ನ್ಯಾಯದ ಪ್ರಜ್ಞೆಯನ್ನು ಕಳೆದುಕೊಳ್ಳುತ್ತದೆ. ನಾವು ಮಗುವಿಗೆ "ನೀನು ಮಾಡಿದ್ದು ತಪ್ಪು" ಎಂದು ಹೇಳಬೇಕು ಮತ್ತು ಅವರಿಗೆ ನ್ಯಾಯವನ್ನು ಅರ್ಥ ಮಾಡಿಸಬೇಕು. ಅವರು ನ್ಯಾಯದ ಪರವಾಗಿ ನಿಲ್ಲಲು ಕಲಿಯುತ್ತಾರೆ.

● ಯಾರು ಯಾರೊಂದಿಗೂ ಕೋಪಗೊಳ್ಳಬಹುದು, ಯಾರೊಂದಿಗೂ ಘರ್ಷಣೆಗಳನ್ನು ಹೊಂದಬಹುದು, ಸಣ್ಣಪುಟ್ಟ ಜಗಳಗಳನ್ನು ಹೊಂದಬಹುದು. ಅವೆಲ್ಲವೂ ತಾತ್ಕಾಲಿಕ. ಆದ್ದರಿಂದ, ಯಾವುದೇ ಸಂದರ್ಭದಲ್ಲೂ ಯಾರಿಗೂ ನೋವುಂಟು ಮಾಡದಂತೆ ನಡೆದುಕೊಳ್ಳಬೇಕೆಂಬುದನ್ನು ಅವರಿಗೆ ಕಲಿಸಿ.

● ಆಹಾರ, ಪುಸ್ತಕಗಳು, ಆಟಿಕೆಗಳು ಇತ್ಯಾದಿ ಎಲ್ಲವನ್ನೂ ಇತರರೊಂದಿಗೆ ಹಂಚಿಕೊಳ್ಳುವ ಅಭ್ಯಾಸವನ್ನು ಪ್ರೋತ್ಸಾಹಿಸಿ. ಅವರು ಸಾಮಾಜಿಕ ಜೀವಿಗಳಾಗಿ ಬೆಳೆಯುತ್ತಾರೆ.

● ಇತರರಿಗೆ ಸೇರಿದ ವಸ್ತುಗಳಿಗೆ ದುರಾಸೆಪಡದಂತೆ ಚಿಕ್ಕ ವಯಸ್ಸಿನಿಂದಲೇ ಅವರಿಗೆ ಕಲಿಸಿ. ಇನ್ನೊಂದು ಮಗುವಿನ ಬಳಿ ತನ್ನಲ್ಲಿಲ್ಲದ ವಸ್ತು ಇದ್ದಾಗ... ಅದು ಪೆನ್ಸಿಲ್ ಆಗಿರಬಹುದು ಅಥವಾ ಸಣ್ಣ ಆಟಿಕೆ ಆಗಿರಬಹುದು, ಮಕ್ಕಳು ಆತಂಕಕ್ಕೊಳಗಾಗುತ್ತಾರೆ. ಅವರು ಕೂಡ ಅದನ್ನು ಬಯಸುತ್ತಾರೆ ಮತ್ತು ಈ ಆಸೆಗೆ ಯಾವುದೇ ಮಿತಿಗಳಿಲ್ಲ ಎಂದು ಅವರಿಗೆ ಅರಿವು ಮೂಡಿಸಿ. ಇದು ಅಸೂಯೆ ಮತ್ತು ಕೀಳರಿಮೆಯಂತಹ ಬಹಳಷ್ಟು ನಕಾರಾತ್ಮಕ ಭಾವನೆಗಳನ್ನು ಅವರಲ್ಲಿ ಉಂಟು ಮಾಡುತ್ತದೆ.

● ಇತರರು ಏನನ್ನಾದರೂ ಸಾಧಿಸಿದಾಗ, ಅವರನ್ನು ಬಹಿರಂಗವಾಗಿ ಹೊಗಳುವ ಗುಣ ಮಕ್ಕಳಲ್ಲಿ ಬೇರೂರಬೇಕು. ಇದು ಎಲ್ಲಾ ನಕಾರಾತ್ಮಕ ಗುಣಗಳನ್ನು ನಾಶ ಮಾಡುವ ಸದ್ಗುಣ. ಇತರರನ್ನು ಹೊಗಳುವ ಮಗುವಿಗೆ ಇತರರಿಂದಲೂ ಬಹಳಷ್ಟು ಹೊಗಳಿಕೆ ಸಿಗುತ್ತದೆ. ಅದು ಅವರಿಗೆ ತೃಪ್ತಿಯನ್ನು ನೀಡುತ್ತದೆ. ಆ ಭಾವನೆ ಅವರನ್ನು ಏನನ್ನಾದರೂ ಸಾಧಿಸಲು ಅನುವು ಮಾಡಿಕೊಡುತ್ತದೆ. ಮಕ್ಕಳಿಗೆ ಈ ಘಟನೆಗಳ ಸರಪಣಿಯನ್ನು ಅರ್ಥ ಮಾಡಿಸಿ.

● ಎಲ್ಲದಕ್ಕೂ ಹೆದರುವ ಮಗು, ಆತ್ಮವಿಶ್ವಾಸ ಮತ್ತು ಸ್ವಂತಿಕೆಯನ್ನು ಕಳೆದುಕೊಳ್ಳುತ್ತದೆ. ಕಷ್ಟದ ಸಂದರ್ಭಗಳಲ್ಲಿ ತಪ್ಪು ಮಾಡುತ್ತದೆ. ಯಾವುದೇ ಪರಿಸ್ಥಿತಿಯನ್ನಾಗಲೀ ಧೈರ್ಯದಿಂದ ಎದುರಿಸಲು ಅವರಿಗೆ ಕಲಿಸಿ. ಅವರು ಧೈರ್ಯದಿಂದ ಏನನ್ನಾದರೂ ಮಾಡಿದಾಗ ಅವರನ್ನು ಪ್ರಶಂಸಿಸಿ. ಹೀಗೆ ಮಾಡುವುದರಿಂದ ಅವರಲ್ಲಿ ಧೈರ್ಯ ಬೆಳೆಯುತ್ತದೆ.


● ಒಂದು ಮಗು ತನ್ನ ಬಗ್ಗೆ ಉನ್ನತವಾಗಿ ಭಾವಿಸುತ್ತದೆ. ಆದರೆ ಇತರರು ಅವನನ್ನು ಟೀಕಿಸಬಹುದು. ಆ ಟೀಕೆಯನ್ನು ಸ್ವೀಕರಿಸುವ ಪ್ರಬುದ್ಧತೆಯನ್ನು ಅವನಲ್ಲಿ ಬೆಳೆಸಿ. 'ಹಲವರು ನಮ್ಮ ಅಭಿಪ್ರಾಯಗಳಿಗಿಂತ ಭಿನ್ನವಾದ ಅಭಿಪ್ರಾಯಗಳನ್ನು ಹೊಂದಿರಬಹುದು' ಎಂಬುದನ್ನು ಮಕ್ಕಳು ಅರಿತುಕೊಳ್ಳಬೇಕು. ಆಗ ಮಾತ್ರ ಸಮಾಜದಲ್ಲಿ ಇರುವ ವ್ಯತ್ಯಾಸಗಳನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ.

● ಮಕ್ಕಳಲ್ಲಿ ಜವಾಬ್ದಾರಿಗಳನ್ನು ಸ್ವೀಕರಿಸುವ ಪ್ರಬುದ್ಧತೆಯನ್ನು ಬೆಳೆಸಬೇಕು. ಸಣ್ಣಪುಟ್ಟ ಕೆಲಸಗಳನ್ನು ಅವರಿಗೆ ಬಿಡಿ. ಅವರು ಚೆನ್ನಾಗಿ ಮಾಡಿದಾಗ ಅವರನ್ನು ಪ್ರಶಂಸಿಸಿ. ಶಾಲೆಯಲ್ಲಿ ಮತ್ತು ಸಮುದಾಯದಲ್ಲಿ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಪ್ರೋತ್ಸಾಹಿಸಿ.

● ಮಕ್ಕಳು ಕೋಪ, ಅಳುವುದು ಮತ್ತು ಕಿರಿಕಿರಿಯಂತಹ ಭಾವನೆಗಳನ್ನು ತಕ್ಷಣವೇ ವ್ಯಕ್ತಪಡಿಸುವುದನ್ನು ತಪ್ಪಿಸಲು ಅಗತ್ಯವಾದ ಸ್ವಯಂ ನಿಯಂತ್ರಣವನ್ನು ಬೆಳೆಸಿಕೊಳ್ಳಬೇಕು. ಯಾವುದೇ ಪರಿಸ್ಥಿತಿಯಲ್ಲಿಯೂ ತಮ್ಮ ಭಾವನೆಗಳಿಗೆ ಗುಲಾಮರಾಗದಂತೆ ಅವರಿಗೆ ಕಲಿಸಿ. ಆಗ ಮಾತ್ರ ಅವರು ಜವಾಬ್ದಾರಿಯುತವಾಗಿ ವರ್ತಿಸಲು ಮತ್ತು ಅಜಾಗರೂಕತೆಯಿಂದ ವರ್ತಿಸದಿರಲು ಸಾಧ್ಯವಾಗುತ್ತದೆ.

● ಅವರು ಆಯಾಸಗೊಳ್ಳದೆ, ನಿರುತ್ಸಾಹಗೊಳ್ಳದೆ ಮತ್ತು ಬಿಟ್ಟು ಕೊಡದೆ ನಿರಂತರವಾಗಿ ಏನನ್ನಾದರೂ ಮಾಡಲು ಅಭ್ಯಾಸ ಮಾಡಬೇಕು. ಈ ಪರಿಶ್ರಮವು ಅವರ ಜೀವನದುದ್ದಕ್ಕೂ ಅವರನ್ನು ಉನ್ನತೀಕರಿಸುತ್ತದೆ. ●





# ನಾವು ಕಲಿಯಬೇಕಾದ ಸದ್ಗುಣಗಳು!

ಮೀನಿನ ಮರಿ ಹುಟ್ಟುವಾಗಲೇ ಈಜುವುದನ್ನು ಕಲಿತಿರುವಂತೆಯೇ, ನಾವು ಕೂಡ ಹುಟ್ಟಿನಿಂದಲೇ ಅನೇಕ ನೀತಿಗಳನ್ನು ಹೊಂದಿರುತ್ತೇವೆ. ಉಳಿದದ್ದನ್ನು ನಮ್ಮ ಕುಟುಂಬ ಮತ್ತು ಸಮಾಜದ ಅನುಭವಗಳ ಮೂಲಕ ಕಲಿಯುತ್ತೇವೆ. ಇವುಗಳ ಆಧಾರದ ಮೇಲೆ ನಾವು ನಮ್ಮ ಜೀವನವನ್ನು ಕಟ್ಟಿಕೊಳ್ಳುತ್ತೇವೆ.

ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವ ಜನರನ್ನು ನೋಡುವಾಗ, "ಇದು ನಿಮ್ಮ ಮನೆಯಾಗಿದ್ದರೆ ಹೀಗೆ ಮಾಡುತ್ತಿದ್ದಿರಾ?" ಎಂಬ ಪ್ರಶ್ನೆ ಕೇಳಬೇಕೆನಿಸುತ್ತದೆ. ಕಾರಣ, ನಮ್ಮ ಮನೆಗಳಂತೆಯೇ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವ ಕಡ್ಡಾಯ ನೈತಿಕತೆ ನಮಗಿದೆ.

ಕೆಲವರು ಕಿರುಚುವ ಆಂಬ್ಯುಲೆನ್ಸ್‌ಗೆ ಕೂಡ ದಾರಿ ಮಾಡಿಕೊಡದೆ ತಮ್ಮ ವಾಹನಗಳನ್ನು ಟ್ರಾಫಿಕ್‌ನಲ್ಲಿ ಓಡಿಸುತ್ತಾರೆ. ಅವರನ್ನು ನೋಡಿದಾಗ, 'ಅವರ ಸಂಬಂಧಿಕರಲ್ಲಿ ಯಾರಾದರೂ ಆ ಆಂಬ್ಯುಲೆನ್ಸ್‌ನಲ್ಲಿದ್ದರೆ ಅವರು ಹೀಗೆ ಮಾಡುತ್ತಿದ್ದರಾ?' ಎಂದು ನಾವು ಆಶ್ಚರ್ಯ ಪಡುತ್ತೇವೆ. ಆಂಬ್ಯುಲೆನ್ಸ್‌ನ ಶಬ್ದ ಕೇಳಿದ ತಕ್ಷಣ ಅದಕ್ಕೆ ದಾರಿ ಬಿಟ್ಟು ಅದರಲ್ಲಿರುವ ರೋಗಿಯು ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುವ ನೈತಿಕ ಸಂಹಿತೆಯನ್ನು ನಾವು ಹೊಂದಿರಬೇಕು. ಗರ್ಭಿಣಿ ಮಹಿಳೆಯೊಬ್ಬರು ಕಿಕ್ಕಿರಿದ ಬಸ್ ಹತ್ತಿ ಸೀಟು ಸಿಗದೆ ಕಷ್ಟಪಡುವಾಗ, ಪಕ್ಕದಲ್ಲಿ ಕುಳಿತಿರುವ ಅನೇಕ ಜನರು ಅದನ್ನು ಗಮನಿಸದ ಹಾಗೆ ನಿದ್ರಿಸುತ್ತಿರುವಂತೆ ನಟಿಸುತ್ತಾರೆ. ತಮ್ಮ ಕುಟುಂಬದ ಮಹಿಳೆಯರಾಗಿದ್ದರೆ ಅವರು ಹೀಗೆ ಮಾಡುತ್ತಿದ್ದರಾ ಎಂದೆನ್ನಿಸುತ್ತದೆ. ಗರ್ಭಿಣಿಯರು ಅಥವಾ ಅಂಗವಿಕಲರನ್ನು ನೋಡಿದರೆ, ನಾವು ತಕ್ಷಣ ಅವರಿಗೆ ಅಗತ್ಯ ಸಹಾಯ ಮಾಡಬೇಕು ಎಂದು ನಮ್ಮ ಸಮಾಜ ನಮಗೆ ಕಲಿಸಿದೆ.

ಇಂತಹ ಹಲವು ಸನ್ನಿವೇಶಗಳು ಮತ್ತು ಉದಾಹರಣೆಗಳನ್ನು ನಾವು ನೀಡಬಹುದು. ನೀತಿ ರಹಿತವಾದ ಸಮಾಜ ಅಪಾಯಕಾರಿ. ಪ್ರತಿಯೊಬ್ಬರೂ ಸ್ವಾರ್ಥಿಗಳಾಗಿದ್ದರೆ ಮತ್ತು ಅವರು ಬಯಸಿದ್ದನ್ನು ಸಾಧಿಸಲು ಏನು ಬೇಕಾದರೂ ಮಾಡಿದರೆ, ಅಲ್ಲಿ ಮಾನವೀಯತೆ ಅಭಿವೃದ್ಧಿ ಹೊಂದುವುದಿಲ್ಲ. ಕಾನೂನುಗಳು ಮತ್ತು ಸಾಮಾಜಿಕ ನಿಯಮದ ಮೂಲಕ ನೈತಿಕ ಜೀವನವನ್ನು ಅನುಸರಿಸುವ ಸ್ಥಳಗಳು ಶಾಂತಿಯುತ ಸ್ಥಳಗಳಾಗುತ್ತವೆ. ನಾವು ಅಂತಹ ಶಾಂತಿ ತುಂಬಿದ ಸ್ವರ್ಗವಾದ ಭಾರತದಲ್ಲಿ ವಾಸಿಸುತ್ತಿದ್ದೇವೆ ಎಂಬುದು ಹೆಮ್ಮೆಯ ವಿಷಯ.

ಕೆಲವು ನಿಯಮಗಳು ಮತ್ತು ಕಾನೂನುಗಳು ದೇಶದಿಂದ ದೇಶಕ್ಕೆ ಬದಲಾಗುತ್ತವೆ. ಒಂದು ದೇಶದಲ್ಲಿ ಕಾನೂನುಬದ್ಧವಾಗಿ ಅನುಮತಿಸಲಾದ ಕೆಲವು ನಿಯಮಗಳು ಮತ್ತೊಂದು ದೇಶದಲ್ಲಿ ಕಾನೂನುಬದ್ಧವಾಗಿಲ್ಲದಿರಬಹುದು. ಅದನ್ನು ಕಾನೂನುಬಾಹಿರವೆಂದು ಅಲ್ಲಿ ಪರಿಗಣಿಸಲಾಗುತ್ತದೆ. ಆದಾಗ್ಯೂ, ಎಲ್ಲಾ ದೇಶಗಳಲ್ಲಿಯೂ ಮಾನವರು ಪಾಲಿಸಬೇಕಾದ ಕೆಲವು ನೈತಿಕತೆಗಳಿರುತ್ತವೆ. ಅವುಗಳನ್ನು ನಾವೆಲ್ಲರೂ ಪಾಲಿಸಬೇಕು.

- ನೀವು ಯಾವುದೇ ವಿಷಯವನ್ನಾಗಲೀ, ಯಾವುದೇ ವ್ಯಕ್ತಿಯನ್ನಾಗಲೀ ಮುಕ್ತ ಮನಸ್ಸಿನಿಂದ, ಪೂರ್ವಾಗ್ರಹಗಳಿಲ್ಲದೆ

ಅಥವಾ ಇಷ್ಟಾನಿಷ್ಟಗಳಿಲ್ಲದೆ ನೋಡುವ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ನೀವು ಜನರನ್ನು ಮತ್ತು ಅವರು ವ್ಯಕ್ತಪಡಿಸುವ ವಿಚಾರಗಳನ್ನು ಅರ್ಥ ಮಾಡಿಕೊಳ್ಳಬಹುದು. ನೀವು ಎಲ್ಲದಕ್ಕೂ ಬೇರೊಂದು ಇನ್ನಾವುದೋ ಒಳ ಉದ್ದೇಶಗಳನ್ನು ಆರೋಪಿಸದೇ ಇರಲೂ ಸಾಧ್ಯವಾಗುತ್ತದೆ. ನೀವು ಇತರರಿಗೆ ಪ್ರೀತಿಯನ್ನೂ ತೋರಿಸಬಹುದು. ನೀವು ಅವರಿಂದ ಕಲಿಯಲೂಬಹುದು.

- ನಾವು ತಪ್ಪು ಮಾಡಿದಾಗ ಒಪ್ಪಿಕೊಳ್ಳುವ ಪ್ರಾಮಾಣಿಕತೆ ನಮ್ಮಲ್ಲಿರಬೇಕು. ಆಗ ಮಾತ್ರ ಮುಂದಿನ ಬಾರಿ ಅದನ್ನು ಸರಿಯಾಗಿ ಮಾಡಿ ಗೆಲ್ಲಬಹುದು. ಅದೇ ರೀತಿ, ಹಣ, ಅಂತಸ್ತು ಅಥವಾ ಹಿನ್ನೆಲೆಯ ಆಧಾರದ ಮೇಲೆ ಯಾರನ್ನೂ ಪ್ರತ್ಯೇಕಿಸದೆ ಎಲ್ಲರನ್ನೂ ಸಮಾನವಾಗಿ ಮತ್ತು ಘನತೆಯಿಂದ ನಡೆಸಿಕೊಳ್ಳುವ ಪ್ರಾಮಾಣಿಕತೆ ನಮ್ಮಲ್ಲಿರಬೇಕು.
- ಒಬ್ಬ ವ್ಯಕ್ತಿಯು ತನ್ನ ಕುಟುಂಬ, ಸ್ನೇಹಿತರು, ಸಂಬಂಧಿಕರು, ಕೆಲಸ ಮಾಡುವ ಕಚೇರಿ ಮತ್ತು ಉತ್ತಮ ಅವಕಾಶಗಳನ್ನು ಒದಗಿಸುವ ತಮ್ಮ ದೇಶಕ್ಕೆ ನಿಷ್ಠರಾಗಿರಬೇಕು ಮತ್ತು ಪ್ರಾಮಾಣಿಕರಾಗಿರಬೇಕು. ಈ ನಿಷ್ಠೆಯು ಜನರು ಪರಸ್ಪರ ಉತ್ತಮ ಪ್ರಜ್ಞೆಯಿಂದ ಇತರರನ್ನು ನೋಡುವಂತೆ ಮಾಡುತ್ತದೆ. ಯಾವುದೇ ವಸ್ತುವನ್ನಾದರೂ ಸರಿಯಾಗಿ ಬಳಸುವ ಕಾಳಜಿ ಮತ್ತು ಅಕ್ಕರೆಯನ್ನು ಮನಸ್ಸಿನಲ್ಲಿ ತುಂಬುತ್ತದೆ.
- ನಾವು ನಮ್ಮ ಸಹ ಮಾನವರನ್ನು ಮತ್ತು ಅವರ ನಂಬಿಕೆಗಳನ್ನು ಗೌರವಿಸಬೇಕು. ಸಾರ್ವಜನಿಕ ಸ್ಥಳಗಳನ್ನು ನಮ್ಮ ಸ್ವಂತ ಆಸ್ತಿಯೆಂದು ಗೌರವಿಸುವ ಭಾವನೆ ನಮ್ಮಲ್ಲಿರಬೇಕು. ನಾವು ಯಾರಿಗೂ ನೋವುಂಟು ಮಾಡಬಾರದು, ಅಥವಾ ನಮ್ಮ ಪರಿಸರದ ಯಾವುದೇ ಸ್ಥಳಕ್ಕೆ ಹಾನಿ ಮಾಡಬಾರದು.
- ನೀವು ಯಾವುದೇ ಕೆಲಸ ಮಾಡಿದರೂ, ನಿಮ್ಮ ಸಂಪೂರ್ಣ ಪ್ರಯತ್ನವನ್ನು ಮಾಡುವ ಮೂಲಕ ಅದನ್ನು ಚೆನ್ನಾಗಿ ಮಾಡಬೇಕು. 'ಈ ವ್ಯಕ್ತಿಯು ಈ ಕೆಲಸವನ್ನು ಸಮಯಕ್ಕೆ ಸರಿಯಾಗಿ, ಉತ್ತಮ ರೀತಿಯಲ್ಲಿ ಮತ್ತು ಜವಾಬ್ದಾರಿಯುತವಾಗಿ ಪೂರ್ಣಗೊಳಿಸುತ್ತಾನೆ' ಎಂಬ ವಿಶ್ವಾಸವನ್ನು ನೀವು ನಿಮ್ಮ ಸಹವರ್ತಿಗಳಲ್ಲಿ ತುಂಬಬೇಕು. ಪರಿಸ್ಥಿತಿ ಎಷ್ಟೇ ನಿರ್ಣಾಯಕವಾಗಿದ್ದರೂ ಅಥವಾ ನೀವು ಯಾವುದೇ ರೀತಿಯ ಹಿನ್ನಡೆಗಳನ್ನು ಎದುರಿಸಿದರೂ, ನೀವು ನಿರಂತರ ಪ್ರಯತ್ನದಿಂದ ಕೆಲಸ ಮಾಡಬೇಕು.
- ಎಲ್ಲಾ ಸಮಯದಲ್ಲೂ ನಿಯಮಗಳನ್ನು ಗೌರವಿಸುವ ಜವಾಬ್ದಾರಿಯುತ ಪ್ರಜ್ಞೆ ನಿಮ್ಮಲ್ಲಿರಬೇಕು. ಆ ಜವಾಬ್ದಾರಿಯ ಪ್ರಜ್ಞೆ ಎಂಬುದು ಮಧ್ಯರಾತ್ರಿಯಲ್ಲಿ ಯಾವುದೇ ವಾಹನಗಳು ಬರದಿದ್ದಾಗಲೂ ಸಿಗ್ನಲ್‌ನಲ್ಲಿ ಕೆಂಪು ದೀಪದ ಬಳಿ ನಿಲ್ಲುವ ಕಾಳಜಿಯಂತಿರಬೇಕು.
- ಇತರರ ಭಾವನೆಗಳನ್ನು ಅರ್ಥ ಮಾಡಿಕೊಂಡು ಅವರಿಗೆ ಸಹಾಯ ಮಾಡುವ ಹೃದಯ ನಿಮ್ಮಲ್ಲಿರಬೇಕು. ತಪ್ಪು ಮಾಡಿದವರನ್ನು ಮತ್ತು ಪಶ್ಚಾತ್ತಾಪ ಪಡುವವರನ್ನು ಕ್ಷಮಿಸುವ ಔದಾರ್ಯ ನಿಮ್ಮಲ್ಲಿರಬೇಕು. ನಿಮಗೆ ಸಹಾಯ ಮಾಡಿದ ಯಾರಿಗಾದರೂ ಕೃತಜ್ಞತೆ ಸಲ್ಲಿಸುವ ಹೃದಯ ನಿಮ್ಮಲ್ಲಿರಬೇಕು. ಕಾಲ್ ಸೆಂಟರ್ ಉದ್ಯೋಗಿಗಳು ಮಾತನಾಡುವಂತೆ ವಿನಮ್ರವಾಗಿ ನೀವು ಎಲ್ಲರೊಂದಿಗೂ ಮಾತನಾಡಬೇಕು.
- ನೀವು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ, ಯಾರನ್ನೂ ಕೀಳಾಗಿ ಮಾತನಾಡದಿರುವ ವಿನಯ ನಿಮ್ಮಲ್ಲಿರಬೇಕು. ಇತರರಿಗೆ ಸಹಾಯ ಮಾಡಲು ಯಾವುದೇ ಮಟ್ಟಕ್ಕೆ ಇಳಿಯುವ ವಿನಯ ನಿಮ್ಮಲ್ಲಿರಬೇಕು. ಯಾವುದಕ್ಕೂ ಕಿರಿಕಿರಿಯಾಗದಿರುವ ತಾಳ್ಮೆಯೂ ನಿಮ್ಮಲ್ಲಿರಬೇಕು.
- ನಾವು ನಮ್ಮನ್ನು ಮತ್ತು ನಾವಿರುವ ಸ್ಥಳವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ನಾವು ಇರುವ ಪರಿಸರದ ಸ್ವಚ್ಛತೆಯನ್ನು ಹಾಳುಮಾಡುವ ಯಾವುದನ್ನೂ ನಾವು ಮಾಡಬಾರದು. ಈ ಸ್ವಚ್ಛತೆ ನಮ್ಮ ಮನಸ್ಸಿನಲ್ಲೂ ಮೇಲುಗೈ ಸಾಧಿಸಬೇಕು.
- ಒಂದು ಸಮುದಾಯವಾಗಿ ಒಟ್ಟಾಗಿ ಕೆಲಸ ಮಾಡಲು ಒಗ್ಗಿಕೊಂಡಿರುವ ನಾವು, ಯಾವುದೇ ಗುಂಪಿನಲ್ಲಿ ಹಿಂಜರಿಕೆಯಿಲ್ಲದೆ ನಮ್ಮನ್ನು ನಾವು ಸಂಯೋಜಿಸಿಕೊಳ್ಳುವ ಗುಣವನ್ನು ಪಡೆದುಕೊಳ್ಳಬೇಕು. ಅದು ನಮ್ಮನ್ನು ಯಾವುದೇ ಎತ್ತರಕ್ಕೆ ಕೊಂಡೊಯ್ಯುತ್ತದೆ.

●


# ಬಿಳುಪು

ಭಾವನೆಗಳು

**ಸಂಪುಟ 8 | ಸಂಚಿಕೆ 9**

**ಫೆಬ್ರವರಿ 2026**

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು

**ಕೆ.ಆರ್. ನಾಗರಾಜನ್**

ಲೇಖಕರು

**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ

**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
ನಂ, 188, ನೆಲ ಮಹಡಿ
14ನೇ ಅಡ್ಡರಸ್ತೆ ಜಂಕ್ಷನ್
ಡಿಫೆನ್ಸ್ ಕಾಲನಿ,
ಈಕ್ಕಾಟ್ಟು ತಾಂಗಲ್,
ಚೆನ್ನೈ 600 032.



ಈ ಸಂಚಿಕೆಯಲ್ಲಿರುವ ಯಾವುದೇ
ಭಾಗವನ್ನಾಗಲೀ ವಿಷಯಗಳನ್ನಾಗಲೀ
ಸಂಪಾದಕರ ಲಿಖಿತ ಪೂರ್ವ ಅನುಮತಿ
ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ,
ಅಂತರ್ಜಾಲ ತಾಣಗಳಲ್ಲಿ
ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು
ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.



Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604. | Ph: 0421-4304106

# ಇಬ್ಬರು ಮಾರ್ಗದರ್ಶಿಗಳು!

ಒಂದು ಕಾಲೇಜಿನಲ್ಲಿ ಒಬ್ಬ ಹೆಸರಾಂತ ಪ್ರಾಧ್ಯಾಪಕರು ಇದ್ದರು. ಅವರು ರಾಜಕೀಯ, ತತ್ವಶಾಸ್ತ್ರ, ಇತಿಹಾಸ ಹೀಗೆ ಅನೇಕ ಕ್ಷೇತ್ರಗಳಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದರು. ಅವರನ್ನು ಎಲ್ಲರೂ ಮಹಾನ್ ವಿದ್ವಾಂಸರೆಂದು ಹೊಗಳುತ್ತಿದ್ದರು. ಅವರು ಶ್ರೇಷ್ಠ ಬುದ್ಧಿಜೀವಿ ಎಂದು ಎಲ್ಲರೂ ಹೆಮ್ಮೆಪಡುತ್ತಿದ್ದರು. ಆದರೆ ಅವರು ತಮ್ಮ ತರಗತಿಯ ವಿದ್ಯಾರ್ಥಿಗಳನ್ನು ತುಂಬಾ ಕೆಟ್ಟದಾಗಿ ಅವಮಾನಿಸುತ್ತಿದ್ದರು ಮತ್ತು ಅವರಿಗೆ ಅಪ್ರಸ್ತುತ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರು ಉತ್ತರ ತಿಳಿಯದೆ ಒದ್ದಾಡುತ್ತಿರುವಾಗ, ಅವರು "ನಿಮಗೆ ಸ್ವಲ್ಪವಾದರೂ ಏನಾದರೂ ಜ್ಞಾನವಿದೆಯೇ? ನಾನು ಎಷ್ಟು ದೊಡ್ಡ ಬುದ್ಧಿಜೀವಿ ಎಂದು ನಿಮಗೆ ತಿಳಿದಿದೆಯೇ? ನಿಮ್ಮಂತಹ ಮೂರ್ಖರಿಗೆ ಪಾಠ ಕಲಿಸಬೇಕಾಗಿರುವುದು ನನ್ನ ವಿಧಿ" ಎಂದು ತಮ್ಮನ್ನು ಹಳಿದುಕೊಳ್ಳುತ್ತಿದ್ದರು.

ಒಂದು ದಿನ ಅವರು ತಮ್ಮ ಜ್ಞಾನದ ಬಗ್ಗೆ ತರಗತಿಯಲ್ಲಿ ಹೆಮ್ಮೆ ಪಡುತ್ತಿದ್ದಾಗ, ಒಬ್ಬ ವಿದ್ಯಾರ್ಥಿ ಎದ್ದು ನಿಂತು, "ಒಬ್ಬರು ಜ್ಞಾನವನ್ನು ಹೇಗೆ ಪಡೆಯುತ್ತಾರೆ ಸರ್?" ಎಂದು ಕೇಳಿದ. ಈ ಹಠಾತ್ ಪ್ರಶ್ನೆಗೆ ಪ್ರಾಧ್ಯಾಪಕರು ಉತ್ತರ ಹೇಳುವಲ್ಲಿ ಗೊಂದಲಕ್ಕೊಳಗಾದರು. "ನಾನು ತತ್ವಶಾಸ್ತ್ರ, ರಾಜಕೀಯ ಮತ್ತು ಇತಿಹಾಸ ಇತ್ಯಾದಿಗಳನ್ನೆಲ್ಲ ಅಧ್ಯಯನ ಮಾಡಿದ್ದೇನೆ. ಆದರೆ ಜ್ಞಾನವನ್ನು ಹೇಗೆ ಸಂಪಾದಿಸುವುದು ಎನ್ನುವ ಈ ಪ್ರಶ್ನೆಗೆ ನನಗೆ ಉತ್ತರ ತಿಳಿದಿಲ್ಲ" ಎಂದು ಅವರು ಹೇಳಿದರು.

"ನೀವು ಯಾವಾಗಲೂ ನಿಮ್ಮ ಜ್ಞಾನ ಮತ್ತು ನಮ್ಮ ಮೂರ್ಖತನದ ಬಗ್ಗೆ ಮಾತನಾಡುತ್ತಲೇ ಇರುತ್ತೀರಿ? ನಿಮಗೆ ನಿಮ್ಮ ಆ ಜ್ಞಾನ ಹೇಗೆ ಬಂತು ಎಂಬ ಸರಳ ಪ್ರಶ್ನೆಗೆ ಉತ್ತರ ನಿಮಗೆ ನಿಜವಾಗಿಯೂ ತಿಳಿದಿಲ್ಲವೇ ಸರ್?" ಎಂದು ಆ ವಿದ್ಯಾರ್ಥಿ ಮತ್ತೆ ಕೇಳಿದ. ತರಗತಿಯಲ್ಲಿ ನಗುವಿನ ಅಲೆ ಉಕ್ಕಿತು. ಪ್ರಾಧ್ಯಾಪಕರು ಸದ್ದಿಲ್ಲದೆ ಹೊರಟು ಹೋದರು. ಮರುದಿನ ಅವರು ತರಗತಿಯೊಳಗೆ ಬಂದು, "ನಿನ್ನೆ ನಾನು ನಿಮ್ಮ ಪ್ರಶ್ನೆಯ ಬಗ್ಗೆ ಯೋಚಿಸಿದೆ. ಈಗ ನಾನು ಅದಕ್ಕೆ ಉತ್ತರಿಸುತ್ತೇನೆ. ಒಬ್ಬ ವ್ಯಕ್ತಿಯು ತನ್ನೊಳಗೆ ಯೋಚಿಸುವ ಮೂಲಕ ಮತ್ತು ಸ್ವಯಂ ಪರೀಕ್ಷೆ ಮಾಡುವ ಮೂಲಕ ಜ್ಞಾನವನ್ನು ಪಡೆಯುತ್ತಾನೆ. ಜ್ಞಾನವನ್ನು ಪಡೆಯಲು ಇದೊಂದೇ ಮಾರ್ಗ" ಎಂದು ಅವರು ಹೇಳಿದರು. ವಿದ್ಯಾರ್ಥಿ ಮತ್ತೆ ಎದ್ದು ನಿಂತು, "ನಾವು ನಮ್ಮಷ್ಟಕ್ಕೆ ಯೋಚಿಸುವುದರಿಂದ ಮಾತ್ರ ಜ್ಞಾನವನ್ನು ಪಡೆಯಲು ಸಾಧ್ಯವಾದರೆ, ನಾವು ಏಕೆ ಅಧ್ಯಯನಕ್ಕೆ ಬರಬೇಕು? ನೀವು ನಡೆಸುತ್ತಿರುವ ಪಾಠವನ್ನು ಏಕೆ ಕೇಳಬೇಕು?" ಎಂದು ಕೇಳಿದ.

ಈ ಪ್ರಶ್ನೆಗೂ ಹೇಗೆ ಉತ್ತರಿಸಬೇಕೆಂದು ತಿಳಿಯದೆ ಪ್ರಾಧ್ಯಾಪಕರು ಸುಮ್ಮನೆ ನಿಂತರು. ಮತ್ತೆ ತರಗತಿಯು ನಗೆಯಲ್ಲಿ ಮುಳುಗಿತು. "ಪರವಾಗಿಲ್ಲ ಸರ್. ನೀವು ಮನೆಗೆ ಹೋಗಿ, ಇದರ ಬಗ್ಗೆ ಯೋಚಿಸಿ ಮತ್ತು ನಾಳೆ ಬಂದು ಉತ್ತರಿಸಿ" ಎಂದು ವಿದ್ಯಾರ್ಥಿ ಹೇಳಿ ಕುಳಿತ.

ಮರುದಿನ, ಪ್ರಾಧ್ಯಾಪಕರು ಹೊಸ ಮನುಷ್ಯನಾಗಿ ತರಗತಿಗೆ ಪ್ರವೇಶಿಸಿದರು. "ನಾನು ಇಷ್ಟು ದಿನ ನಿಮ್ಮನ್ನು ಕೆಟ್ಟದಾಗಿ ನಡೆಸಿಕೊಂಡಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ" ಎಂದು ಆ ಪ್ರಾಧ್ಯಾಪಕರು ವಿದ್ಯಾರ್ಥಿಗಳಲ್ಲಿ ಕ್ಷಮೆ ಯಾಚಿಸಿ, ಆ ವಿದ್ಯಾರ್ಥಿಯನ್ನು ಕುರಿತು ಹೇಳಿದರು: "ನೀವು ನನಗೆ ಒಂದು ಪ್ರಮುಖ ಪಾಠವನ್ನು ಕಲಿಸಿದ್ದೀರಿ. ಈಗ ನನಗೆ ಅರ್ಥವಾಯಿತು. ನಾವು ನಾವೇ ಯೋಚಿಸುವ ಮೂಲಕ ಜ್ಞಾನವನ್ನು ಪಡೆಯಬಹುದು ಮತ್ತು ನಾವು ಅದನ್ನು ಇತರರಿಂದಲೂ ಪಡೆಯಬಹುದು. ಅದಕ್ಕಾಗಿಯೇ ನಾವು ಶಿಕ್ಷಣವನ್ನು ಪಡೆಯುತ್ತೇವೆ" ಎಂದು ಅವರು ಹೇಳಿದರು.

"ನೀವು ಹೇಳಿದ್ದು ಸರಿ. ಜ್ಞಾನವನ್ನು ಪಡೆಯಲು ಮೂರನೇ ಮಾರ್ಗವಿದೆ," ವಿದ್ಯಾರ್ಥಿ ಹೇಳಿದನು. "ಅದು ಏನು? ನಾನು ನಿಮ್ಮಿಂದ ಕಲಿಯಲು ಬಯಸುತ್ತೇನೆ."





‘ತಿಳಿಸಲು ನಾನು ಸಿದ್ಧ’ ಎಂದು ಹೇಳಿ ಅವನು ಹೇಳಿದ. "ನಾವು ಅನುಭವಗಳ ಮೂಲಕ ಕೂಡ ಕಲಿಯಬಹುದು ಸರ್. ಇಷ್ಟು ದಿನ ನಾವು ನಿಮ್ಮಿಂದ ಅವಮಾನಿತರಾಗಲಿಲ್ಲವೇ? ಆ ಅನುಭವ ನಮಗೆ ಜ್ಞಾನವನ್ನು ನೀಡಿದೆ. ನೀವು ಕೂಡ ಈ ತರಗತಿಯಲ್ಲಿ ಅವಮಾನಿತರಾಗಿದ್ದೀರಿ, ಅಲ್ಲವೇ? ಆ ಅನುಭವ ನಿಮಗೂ ಜ್ಞಾನವನ್ನು ನೀಡಿದೆ" ವಿದ್ಯಾರ್ಥಿ ಹೇಳಿದ.

ಕನ್ಫ್ಯೂಷಿಯಸ್ ಎನ್ನುವ ಶ್ರೇಷ್ಠ ತತ್ವಜ್ಞಾನಿ ಹೇಳುವಂತೆ ಮಾನವರು ಜ್ಞಾನವನ್ನು ಮೂರು ವಿಧಗಳಲ್ಲಿ ಪಡೆಯುತ್ತಾರೆ. ಮೊದಲನೆಯ ಮಾರ್ಗವೆಂದರೆ ಮನಸ್ಸಿನಲ್ಲೇ, ದೊರೆತ ಮಾಹಿತಿಯನ್ನು ವಿಶ್ಲೇಷಿಸಿ ಅದರ ಬಗ್ಗೆ ಚಿಂತಿಸುವುದು. ಅದು ಪ್ರಾಮಾಣಿಕವಾದುದು. ಎರಡನೆಯ ಮಾರ್ಗವೆಂದರೆ ಇತರರನ್ನು ನೋಡಿ ಅವರಂತೆಯೇ ಮಾಡುವುದು. ಅದು ಸುಲಭವಾದುದು. ಮೂರನೆಯ ಮಾರ್ಗವೆಂದರೆ ಅನುಭವದ ಮೂಲಕ ಅದನ್ನು ಪಡೆಯುವುದು. ಅದು ಕಹಿಯಾಗಿರಬಹುದು. ಇತರ ಮಾರ್ಗಗಳಿದ್ದರೂ, ಇವು ಮೂರೂ ಆರಂಭದ ಹಂತಗಳು ಎಂದು ಕನ್‌ಫ್ಯೂಷಿಯಸ್ ಹೇಳುತ್ತಾನೆ.

ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಂದ ಕೂಡ ಕೆಲವು ನೀತಿಪಾಠವನ್ನು ಹೇಗೆ ಕಲಿಯಬಹುದು ಎಂಬುದಕ್ಕೆ ಈ ಘಟನೆ ಒಂದು ಉದಾಹರಣೆಯಾಗಿದ್ದರೆ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಹೇಗೆ ಕಲಿಸಬಹುದು ಎಂಬುದಕ್ಕೆ ಮತ್ತೊಂದು ಘಟನೆ ಒಂದು ಉದಾಹರಣೆಯಾಗಿದೆ. ಇದು ನಿಜ ಜೀವನದ ಘಟನೆ.

ಅದು ಶಾಲೆಯಲ್ಲಿ ಪರೀಕ್ಷೆಯ ಸಮಯ. ಪ್ರತಿ ತರಗತಿಯಲ್ಲೂ ವಿದ್ಯಾರ್ಥಿಗಳು ಕುಳಿತು ಮಾಸಿಕ ಪರೀಕ್ಷೆ ಬರೆಯುತ್ತಿದ್ದರು. ಒಂದು ತರಗತಿಯಲ್ಲಿ ಒಬ್ಬ ವಿದ್ಯಾರ್ಥಿ ಪುಸ್ತಕವನ್ನು ಮೇಜಿನ ಕೆಳಗೆ ಅಡಗಿಸಿಟ್ಟುಕೊಂಡು ನಕಲು ಮಾಡುತ್ತಿದ್ದ. ತರಗತಿಯ ಒಳಗಿದ್ದ ಶಿಕ್ಷಕರು ಗಮನಿಸಲಿಲ್ಲ.

ಪರೀಕ್ಷೆಯನ್ನು ಮೇಲ್ವಿಚಾರಣೆ ಮಾಡಲು ಪ್ರತಿ ತರಗತಿಗೂ ಸದ್ದಿಲ್ಲದೆ ಬಂದು ನೋಡುತ್ತಿದ್ದ ಮುಖ್ಯೋಪಾಧ್ಯಾಯರು ಆ ವಿದ್ಯಾರ್ಥಿಯನ್ನು ರೆಡ್ ಹ್ಯಾಂಡ್ ಆಗಿ ಹಿಡಿದರು. ಅವರು ತಕ್ಷಣ ಶಿಕ್ಷೆಯನ್ನು ಘೋಷಿಸಿದರು. ಆ ಶಾಲೆಯಲ್ಲಿ ನೀಡಲಾಗುತ್ತಿದ್ದ ಶಿಕ್ಷೆಯೆಂದರೆ ತರಗತಿಯ ಎಲ್ಲಾ ವಿದ್ಯಾರ್ಥಿಗಳ ಮುಂದೆ ದೊಡ್ಡ ಬೆತ್ತದಿಂದ ಆರು ಹೊಡೆತಗಳನ್ನು ಹೊಡೆಯುವುದು.

ಮುಖ್ಯೋಪಾಧ್ಯಾಯರು ಕೈಯಲ್ಲಿ ಕೋಲು ಹಿಡಿದು ವಿದ್ಯಾರ್ಥಿಯ ಬಳಿಗೆ ಬಂದರು. ಆದರೆ ಅವನ ಶಿಕ್ಷಕರು, ‘ಅವನು ನಕಲು ಮಾಡುತ್ತಿದ್ದಾನೆಂದರೆ, ನಾನು ಅವನಿಗೆ ಸರಿಯಾಗಿ ಕಲಿಸಲಿಲ್ಲ ಎಂದು ಅರ್ಥ. ನಾನು ಚೆನ್ನಾಗಿ ಕಲಿಸಿದ್ದರೆ, ಅವನು ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಉತ್ತೀರ್ಣನಾಗುತ್ತಿದ್ದ. ಅವನಿಗೆ ಸರಿಯಾಗಿ ಕಲಿಸದಿರುವುದು ಮತ್ತು ಅವನು ಓದಿದ್ದಾನೆಯೇ ಎಂದು ಖಚಿತಪಡಿಸಿಕೊಳ್ಳದಿರುವುದು ನನ್ನ ತಪ್ಪು. ಆದ್ದರಿಂದ ಆ ಶಿಕ್ಷೆಯನ್ನು ನನಗೇ ನೀಡಿ" ಎಂದು ಹೇಳಿದರು.

ತರಗತಿಯಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳೂ ದಿಗ್ಭ್ರಮೆಗೊಂಡರು. ಮುಖ್ಯೋಪಾಧ್ಯಾಯರು ಇದನ್ನು ನಿರೀಕ್ಷಿಸಿರಲಿಲ್ಲ. ಆದಾಗ್ಯೂ ಅವರು ಶಿಕ್ಷೆ ನೀಡುವುದನ್ನು ನಿಲ್ಲಿಸುವಂತಿರಲಿಲ್ಲ. ಅದು ಶಾಲೆಯ ಶಿಸ್ತನ್ನು ನಾಶ ಪಡಿಸುತ್ತದೆ. ಪ್ರಾಮಾಣಿಕ ಶಿಕ್ಷಕನನ್ನು ಹೊಡೆಯಲು ಅವರು ಹಿಂಜರಿಯುತ್ತಿದ್ದರೂ, ನ್ಯಾಯವನ್ನು ನೀಡುವ ನಿರ್ಧಾರದೊಂದಿಗೆ ಅವರು ಶಿಕ್ಷಕರ ಕಡೆಗೆ ತಿರುಗಿದರು.

"ವಿದ್ಯಾರ್ಥಿ ಮಾಡಿದ ತಪ್ಪಿಗೆ ಶಿಕ್ಷಕನಿಗೆ ಶಿಕ್ಷೆ ನೀಡಲಾತ್ತಿದೆ" ಎಂದು ಅವರು ಹೇಳಿದರು. ಆ ಶಿಕ್ಷಕರು ತಕ್ಷಣ ಅವರ ಮಾತನ್ನು ನಿರಾಕರಿಸಿ ಹೇಳಿದರು: "ಇಲ್ಲ... ಅವನು ಮಾಡಿದ ತಪ್ಪಿಗೆ ಈ ಶಿಕ್ಷೆ ಅಲ್ಲ. ನಾನು ಮಾಡಿದ ತಪ್ಪಿಗೆ ನನ್ನನ್ನು ಶಿಕ್ಷಿಸಿ. ನಾನು ನನ್ನ ಕೆಲಸವನ್ನು ಸರಿಯಾಗಿ ಮಾಡಿದ್ದರೆ, ಅವನು ತಪ್ಪು ಮಾಡುತ್ತಿರಲಿಲ್ಲ. ಹಾಗಾದರೆ, ತಪ್ಪು ಮಾಡಿದ್ದು ನಾನೇ ತಾನೇ" ಎಂದು ಶಿಕ್ಷಕರು ಹೇಳಿ, ಹೊಡೆತವನ್ನು ಸ್ವೀಕರಿಸಲು ಕೈ ಚಾಚಿ ನಿಂತರು.

ಮುಖ್ಯೋಪಾಧ್ಯಾಯರು ಹೊಡೆಯಲು ಕೋಲನ್ನು ಮೇಲೆತ್ತಿದರು. ಆ ಕ್ಷಣ ಆ ವಿದ್ಯಾರ್ಥಿ ಹಾರಿ ಅವರ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, "ದಯವಿಟ್ಟು ಈ ಶಿಕ್ಷಕರನ್ನು ಹೊಡೆಯಬೇಡಿ. ಇದು ನನ್ನ ತಪ್ಪು. ನನ್ನ ತಪ್ಪಿಗೆ ಅವರಿಗೆ ಶಿಕ್ಷೆಯಾಗುವುದನ್ನು ನಾನು ನೋಡಲಾರೆ. ನನ್ನನ್ನು ಶಿಕ್ಷಿಸಿ" ಎಂದು ಅವನು ಅಳುತ್ತಾ, ಶಿಕ್ಷಕರಿಗೆ ನಮಸ್ಕರಿಸಿ, "ಇನ್ನು ಮುಂದೆ ನಾನು ಸರಿಯಾಗಿ ಓದುತ್ತೇನೆ. ನಾನು ಪರೀಕ್ಷೆಯಲ್ಲಿ ಅನುತ್ತೀರ್ಣನಾದ್ದರೂ ಸರಿ, ನಾನು ಅದನ್ನು ಘನತೆಯಿಂದ ಸ್ವೀಕರಿಸುತ್ತೇನೆ. ನಾನು ಇನ್ನು ಮೇಲೆ ಎಂದಿಗೂ ಕಾಪಿ ಹೊಡೆಯುವುದಿಲ್ಲ" ಎಂದು ಹೇಳಿದ. ಮುಖ್ಯೋಪಾಧ್ಯಾಯರು ತಮ್ಮ ಕೈಯಲ್ಲಿದ್ದ ಬೆತ್ತವನ್ನು ಮುರಿದು ಹಾಕಿದರು.

ಆ ದಿನ ‘ಯಾವುದು ತಪ್ಪು’ ಎಂಬುದರ ಸರಿಯಾದ ವ್ಯಾಖ್ಯಾನ ಇಡೀ ಶಾಲೆಗೆ ಮನವರಿಕೆಯಾಯಿತು. ಯಾವುದೇ ಶಿಕ್ಷೆಯಿಲ್ಲದೆ ವಿದ್ಯಾರ್ಥಿಗಳು ಹೊಸ ಪಾಠ ಕಲಿತರು!

## ನಿಮ್ಮ ಬಳಿ ಉನ್ನತ ಮೌಲ್ಯಗಳಿವೆಯೇ?

ಈ ಅಂಶಗಳು ನಿಮ್ಮಲ್ಲಿದ್ದರೆ, ನಿಮ್ಮಲ್ಲಿ ನೈತಿಕತೆ ಮತ್ತು ಉನ್ನತ ಮೌಲ್ಯಗಳಿವೆ ಎಂದೇ ಅರ್ಥ.

- ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ವಾದಿಸುವ ಜನರ ಜೊತೆ ಮಾತನಾಡುವಾಗಲೂ ಧ್ವನಿ ಎತ್ತರಿಸಿ ಮಾತನಾಡಬೇಡಿ. ಅವರು ನಿಮ್ಮೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರೂ ಸಹ ಅವರನ್ನು ಅಗೌರವದಿಂದ ನಡೆಸಿಕೊಳ್ಳಬೇಡಿ.
- ಯಾವುದೇ ಸ್ಥಳಕ್ಕೆ ಹೋಗುವಾಗಲೂ ನಿಗದಿತ ಸಮಯದಲ್ಲಿ ಅಲ್ಲಿಗೆ ತಲುಪಿ. ನಿಮಗೆ ನೀಡಲಾದ ಸಮಯಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳಬೇಡಿ. ಹೀಗೆ ನಡೆದುಕೊಳ್ಳುವುದರಿಂದ ಎಲ್ಲರೂ ನಿಮ್ಮನ್ನು ಗೌರವಿಸುತ್ತಾರೆ.
- ಯಾರನ್ನೂ ಅವರ ಹೊರಗಿನ ರೂಪ ಅಥವಾ ಮಾತಿನಿಂದ ನಿರ್ಣಯಿಸಬೇಡಿ. ಇತರರ ಗುಣಮಟ್ಟವನ್ನು ನಿರ್ಣಯಿಸುವುದು ನಮ್ಮ ಕೆಲಸವಲ್ಲ.
- ನಾವು ಇತರರನ್ನು ಪ್ರೋತ್ಸಾಹಿಸಿದರೆ, ನಮ್ಮ ಕಾರ್ಯಗಳಿಗೂ ಎಲ್ಲಿಂದಲೋ ಪ್ರೋತ್ಸಾಹ ಸಿಗುತ್ತದೆ. ನಾವು ಇತರರನ್ನು ಹೊಗಳಿದರೆ, ನಮಗೂ ಪ್ರಶಂಸೆ ಸಿಗುತ್ತದೆ.
- ಯಾರನ್ನೂ ಅವರ ಬೆನ್ನ ಹಿಂದೆ ಟೀಕಿಸಬೇಡಿ. ಯಾವುದೇ ಸಂದರ್ಭದಲ್ಲೂ ನೀವು ಪ್ರೀತಿಸುವ ಜನರನ್ನು ಬಿಟ್ಟು ಕೊಡಬೇಡಿ.
- ನೀವು ನೋಡುವ ಎಲ್ಲದರ ಬಗ್ಗೆಯೂ ಕಾಮೆಂಟ್ ಮಾಡಬೇಕಾಗಿಲ್ಲ ಮತ್ತು ಕೆಲವು ಸಂದರ್ಭಗಳಲ್ಲಿ ನಿಮ್ಮ ಬಾಯಿ ಮುಚ್ಚಿಕೊಂಡಿರುವುದೇ ನಿಮ್ಮ ಬುದ್ಧಿವಂತಿಕೆಯಾಗಿರುತ್ತದೆ.
- "ನಿಮ್ಮಿಂದ ಇದನ್ನು ಮಾಡಲು ಸಾಧ್ಯವಿಲ್ಲ" ಎಂದು ಹೇಳುವವರನ್ನು ನಂಬಬೇಡಿ. ಅವರು ತಮ್ಮ ಸಾಮರ್ಥ್ಯದ ಆಧಾರದ ಮೇಲೆ ಅದನ್ನು ನಿರ್ಣಯಿಸುತ್ತಿದ್ದಾರೆ. ನಿಮ್ಮ ಸ್ವಂತ ಸಾಮರ್ಥ್ಯವೇನೆಂಬುದು ನಿಮಗೆ ತಿಳಿದಿರಲಿ.





## ನಂಬಿಕೆ ನೀಡುವ ಸದ್ಗುಣಗಳು!

- ನೀವು ಪ್ರೀತಿಸುವವರಿಗೆ ಸಹಾಯ ಮಾಡಲು ಯಾವುದೇ ಹಂತಕ್ಕೆ ಬೇಕಾದರೂ ಹೋಗಿ.
- ನೀವು ಯಾರಿಗಾದರೂ ಭರವಸೆ ನೀಡಿದರೆ, ಅದನ್ನು ಉಳಿಸಿಕೊಳ್ಳಲು ಮರೆಯದಿರಿ.
- ಪರಿಶ್ರಮ ಯಶಸ್ಸನ್ನು ತರುತ್ತದೆ. ನೀವು ಸರಿ ಎಂದು ನಂಬುವುದನ್ನು ಮಾಡಲು ಧೈರ್ಯ ಮಾಡಿ.
- ಎಲ್ಲರ ಮೇಲೂ ಔದಾರ್ಯ ತೋರಿಸಿ. ಆಗ ಅನೇಕ ಪ್ರಯೋಜನಗಳು ನಿಮಗೆ ದೊರೆಯುತ್ತವೆ.
- ಜೀವನದಲ್ಲಿ ಅಸಾಧಾರಣ ಸಾಧನೆಗಳು ಸಾಧ್ಯ ಎಂದು ಯಾವಾಗಲೂ ನಂಬಿರಿ.
- ಯಾವುದೇ ಸಂದರ್ಭದಲ್ಲೂ ಭರವಸೆ ಕಳೆದುಕೊಳ್ಳಬೇಡಿ. ಜಗತ್ತು ಭರವಸೆಯ ಅಡಿಪಾಯದ ಮೇಲೆ ನಡೆಯುತ್ತದೆ.
- ನಿಮ್ಮ ಎಲ್ಲಾ ಕನಸುಗಳೂ ನನಸಾಗುತ್ತವೆ. ಅದಕ್ಕಾಗಿ ಕೆಲಸ ಮಾಡುವುದಷ್ಟೇ ನಿಮ್ಮ ಕೆಲಸ.
- ಎಂದಿಗೂ ತಾಳ್ಮೆ ಕಳೆದುಕೊಳ್ಳಬೇಡಿ. ಒಳ್ಳೆಯ ಫಲಿತಾಂಶಗಳಿಗಾಗಿ ನೀವು ಕಾಯಬೇಕು.

## ಅದು ನನ್ನಿಂದ ಸಾಧ್ಯವಿಲ್ಲ!

ಒಂದು ಹಳ್ಳಿಗೆ ಬಡಗಿ ಕೆಲಸ ಮಾಡಲು ಬಂದಿದ್ದ ಬಡಗಿಯೊಬ್ಬ ತನ್ನ ಸುತ್ತಿಗೆಯನ್ನು ಮನೆಯಲ್ಲೇ ಮರೆತು ಬಂದಿರುವುದನ್ನು ಅಲ್ಲಿಗೆ ಬಂದು ತಲುಪಿದ ಮೇಲಷ್ಟೇ ಅರಿತುಕೊಂಡ. ಹಳ್ಳಿಯಲ್ಲಿರುವ ಕಮ್ಮಾರನ ಬಳಿ ಹೋಗಿ ಸುತ್ತಿಗೆಯನ್ನು ಎರವಲು ಕೇಳಿದ. ಅವನು ತನ್ನ ಸುತ್ತಿಗೆಯನ್ನು ಕೊಟ್ಟ. ಅದು ನೋಡಲು ಚೆನ್ನಾಗಿ ಕಾಣುತ್ತಿತ್ತು. ಬಡಗಿ ಅದನ್ನು ಬಳಸಿದ ಕ್ಷಣದಲ್ಲೇ ತನ್ನ ಸುತ್ತಿಗೆಗೂ ಇದಕ್ಕೂ ಇರುವ ವ್ಯತ್ಯಾಸವನ್ನು ಅನುಭವಿಸಿದ. ಇದು ಪ್ರಸಿದ್ಧ ಕಂಪನಿಗಳ ಉತ್ಪನ್ನಗಳಿಗಿಂತ ಎಷ್ಟೋ ಪಟ್ಟು ಉತ್ತಮ ಗುಣಮಟ್ಟದ್ದಾಗಿತ್ತು. ಇದರಿಂದಾಗಿ ಅವನು ತನ್ನ ಕೆಲಸವನ್ನು ಬೇಗನೆ ಪೂರ್ಣಗೊಳಿಸಲು ಸಾಧ್ಯವಾಯಿತು.

ನಾನು ಅದನ್ನು ಹಿಂತಿರುಗಿಸಲು ಹೋದಾಗ, ಅವನು "ಈ ಸುತ್ತಿಗೆಯನ್ನು ಎಲ್ಲಿ ಕೊಂಡುಕೊಂಡಿರಿ?" ಎಂದು ಕೇಳಿದ. 'ಇದನ್ನು

# ದುಡಿಮೆಯನ್ನು ನಂಬುತ್ತೇನೆ!



ಒಬ್ಬ ರಾಜನು ತನ್ನ ದೇಶದ ಪ್ರಜೆಗಳು ಕಠಿಣ ಪರಿಶ್ರಮದಲ್ಲಿ ನಂಬಿಕೆ ಇಟ್ಟಿದ್ದಾರೆಯೇ ಅಥವಾ ಅಡ್ಡದಾರಿಗಳ ಮೂಲಕ ಅದೃಷ್ಟವನ್ನು ಹುಡುಕುತ್ತಿದ್ದಾರೆಯೇ ಎಂದು ತಿಳಿಯಲು ಬಯಸಿದ. ಅವನು ತನ್ನ ಈ ಪರೀಕ್ಷೆಗಾಗಿ ಒಂದು ಹಳ್ಳಿಯನ್ನು ಆರಿಸಿಕೊಂಡನು. 'ನಮ್ಮ ಮಹಾರಾಜರು ಈ ಹಳ್ಳಿಯಲ್ಲಿರುವ ಎಲ್ಲರಿಗೂ ಅರಮನೆಯಲ್ಲಿ ಔತಣವನ್ನು ನೀಡುತ್ತಾರೆ' ಎಂದು ಒಂದು ಸರ್ಕಾರಿ ಘೋಷಣೆಯನ್ನು ಹೊರಡಿಸಲಾಯಿತು.

ಔತಣಕೂಟಕ್ಕೆ ಹೋದರೆ ರಾಜ ದುಬಾರಿ ಉಡುಗೊರೆಗಳನ್ನು ನೀಡುತ್ತಾನೆ ಎಂದು ಆಶಿಸುತ್ತಾ ಜನರು ಗುಂಪು ಗುಂಪಾಗಿ ಅರಮನೆಯತ್ತ ಹೊರಟರು. ಎಲ್ಲರೂ ಅರಮನೆಗೆ ಹೋದಾಗ, ರಾಜನು ಮಾರುವೇಷ ಧರಿಸಿ ಹಳ್ಳಿಯೊಳಗೆ ಪ್ರವೇಶಿಸಿದನು. ಇಡೀ ಹಳ್ಳಿ ಖಾಲಿಯಾಗಿತ್ತು. ಅಲ್ಲಿ ಒಬ್ಬ ಮಹಿಳೆ ಮಾತ್ರ ಹೊಲಗಳಲ್ಲಿ ಒಂಟಿಯಾಗಿ ಕೆಲಸ ಮಾಡುತ್ತಿದ್ದಳು.

ಅದನ್ನು ನೋಡಿ ರಾಜ ಆಶ್ಚರ್ಯಚಕಿತನಾಗಿ ಆ ಮಹಿಳೆಯ ಬಳಿ ಹೋಗಿ, "ನಿನಗೇನೂ ಗೊತ್ತಿಲ್ಲವೇ? ರಾಜ ಅರಮನೆಯಲ್ಲಿ ಔತಣ-ಕೂಟ ನೀಡುತ್ತಿದ್ದಾನೆ. ಎಲ್ಲರೂ ತಮಗೆ ಅದೃಷ್ಟದ ಬಹುಮಾನ ಸಿಗುತ್ತದೆ ಎಂದು ಆಶಿಸಿ ಅಲ್ಲಿಗೆ ಹೋಗಿದ್ದಾರೆ. ನೀನು ಹೋಗಲಿಲ್ಲವೇ?" ಎಂದು ಕೇಳಿದ. "ನನಗೆ ಅದೃಷ್ಟದಲ್ಲಿ ನಂಬಿಕೆ ಇಲ್ಲ. ನಾನು ಕೆಲಸ ಮಾಡಿದರೆ ಮಾತ್ರ ನನಗೆ ಸಂಬಳ ಸಿಗುತ್ತದೆ. ನನ್ನ ದುಡಿಮೆಯನ್ನು ಮಾತ್ರವೇ ನಾನು ನಂಬುತ್ತೇನೆ. ನಾನು ಇಂದು ದುಡಿಯದೇ ಹೋದರೆ ನನ್ನ ಕುಟುಂಬಕ್ಕೆ ಆಹಾರ ನೀಡಲು ಸಾಧ್ಯವಿಲ್ಲ ಎಂದು ನಂಬುತ್ತೇನೆ" ಎಂದು ಆಕೆ ಹೇಳಿದಳು.

ಇದನ್ನು ಕೇಳಿ ರಾಜ ಭಾವುಕನಾದ. "ತಾಯೀ! ಎಲ್ಲರೂ ಅದೃಷ್ಟವನ್ನು ಆಶಿಸಿ ರಾಜನ ಅರಮನೆಗೆ ಹೋಗಿದ್ದಾರೆ. ಆ ರಾಜ ಸ್ವತಃ ನಿನ್ನನ್ನು ಹುಡುಕಿಕೊಂಡು ಬಂದು ನಿನಗೆ ಉಡುಗೊರೆಗಳನ್ನು ಕೊಟ್ಟನೆಂದು ಎಲ್ಲರಿಗೂ ಹೇಳು" ಎಂದು ಹೇಳಿ ರಾಜನು ಚಿನ್ನದ ನಾಣ್ಯಗಳ ಚೀಲವನ್ನು ಆ ಮಹಿಳೆಗೆ ಕೊಟ್ಟು ಹೊರಟು ಹೋದ.

ಕಠಿಣ ಪರಿಶ್ರಮವೇ ನಿಜವಾದ ಅದೃಷ್ಟ!

ಸ್ವತಃ ನಾನೇ ನನ್ನ ಕುಲುಮೆಯಲ್ಲಿ ತಯಾರಿಸಿದ್ದು' ಎಂದು ಕಮ್ಮಾರ ಹೇಳಿದ. 'ಇಂತಹ ಸಣ್ಣ ಹಳ್ಳಿಯಲ್ಲಿ ಇಷ್ಟೊಂದು ಪ್ರತಿಭಾನ್ವಿತ ವ್ಯಕ್ತಿ ಇದ್ದಾನಾ?' ಎಂದು ಬಡಗಿಗೆ ಆಶ್ಚರ್ಯವಾಯಿತು. ಕಮ್ಮಾರನ ಕೌಶಲ್ಯವನ್ನು ಹೊಗಳಿದ ನಂತರ, ತನ್ನ ಸ್ವಂತ ಬಳಕೆಗಾಗಿ ನಾಲ್ಕೈದು ಸುತ್ತಿಗೆಗಳನ್ನು ಮಾಡಿ ಕೊಡುವಂತೆ ತಿಳಿಸಿ, ಅವುಗಳನ್ನು ಬೆಲೆಗೆ ಖರೀದಿಸಿದ.

ಅವನು ನಗರಕ್ಕೆ ತೆಗೆದುಕೊಂಡು ಹೋದ ಆ ಸುತ್ತಿಗೆಗಳನ್ನು ನೋಡಿ ತುಂಬ ಜನ ಅದನ್ನು ಮೆಚ್ಚಿಕೊಂಡರು. ನಂತರ ಹಳ್ಳಿಯ ಕಮ್ಮಾರನ ಬಳಿಗೆ ಅನೇಕ ಜನರು ಬಂದು ಸುತ್ತಿಗೆಗಳನ್ನು ಖರೀದಿಸಿ ತೆಗೆದುಕೊಂಡು ಹೋದರು. ಒಬ್ಬ ಗುತ್ತಿಗೆದಾರ ಬಂದು ಒಟ್ಟು 20 ಸುತ್ತಿಗೆಗಳು ತನಗೆ ಬೇಕೆಂದು ತಿಳಿಸಿ, "ಆ ಬಡಗಿಗೆ ಮಾಡಿ ಕೊಟ್ಟಿದ್ದಕ್ಕಿಂತಲೂ ಉತ್ತಮವಾಗಿ ನನಗೆ ಮಾಡಿಕೊಡಿ" ಎಂದು ಹೇಳಿದ. "ನೀವು ಹಾಗೆ ಹೇಳಬಾರದು. ನಾನು ಏನೇ ಮಾಡಿದರೂ ಅದನ್ನು ಚೆನ್ನಾಗಿ ಯಾವುದೇ ತಪ್ಪುಗಳಿಲ್ಲದಂತೆ ಮಾಡುತ್ತೇನೆ. ನಾನು ಯಾರಿಗಾಗಿ ಮಾಡಿದರೂ ಅದರ ಗುಣಮಟ್ಟ ಒಂದೇ ಆಗಿರುತ್ತದೆ" ಎಂದು ಕಮ್ಮಾರ ಹೇಳಿದ. ಆತನ ಪ್ರತಿಭೆ ಶೀಘ್ರದಲ್ಲೇ ಖ್ಯಾತಿಯನ್ನು ಗಳಿಸಲು ಪ್ರಾರಂಭಿಸಿತು.

ಒಂದು ದೊಡ್ಡ ಕಂಪನಿಯವರು ಅವನನ್ನು ಹುಡುಕಿಕೊಂಡು ಬಂದರು. ಅವರು, "ಇತರರು ನೀಡುವುದಕ್ಕಿಂತ ಒಂದೂವರೆ ಪಟ್ಟು ಹೆಚ್ಚು ಹಣ ನೀಡುತ್ತೇವೆ. ನೀವು ತಯಾರಿಸುವ ಎಲ್ಲಾ ಸುತ್ತಿಗೆಗಳನ್ನು ನಮಗೇ ಮಾರಾಟ ಮಾಡಬೇಕು. ನೀವು ಅವುಗಳನ್ನು ಬೇರೆ ಯಾರಿಗೂ ಮಾರಾಟ ಮಾಡಲು ಸಾಧ್ಯವಿಲ್ಲ. ನಾವು ನಿಮಗೆ ಒಂದು ವರ್ಷದ ಹಣವನ್ನು ಮುಂಗಡವಾಗಿ ನೀಡುತ್ತೇವೆ" ಎಂದು ಹೇಳಿದರು.

"ಈಗ ನನಗೆ ಬರುತ್ತಿರುವ ಆದಾಯ ನನಗೆ ಸಾಕು. ನಾನು ದುರಾಸೆಗೆ ಬಲಿಯಾದರೆ ಸುತ್ತಿಗೆಯ ಬೆಲೆ ಹೆಚ್ಚಾಗುತ್ತದೆ ಮತ್ತು ನೀವು ಅದರಿಂದ ಹೆಚ್ಚು ಸಂಪಾದನೆ ಮಾಡುವಿರಿ. ಆಗ ಬಡ ಜನರು ನಷ್ಟ ಅನುಭವಿಸುತ್ತಾರೆ. ನನ್ನ ಕೌಶಲ್ಯ ಅವರಿಗೇ ಉಪಯೋಗವಾಗಲಿ" ಎಂದು ಅವನು ಹೇಳಿದ.

ಪ್ರತಿಭಾನ್ವಿತರು ಮತ್ತು ಪ್ರಾಮಾಣಿಕರು ಎಲ್ಲರ ಒಳಿತಿನ ಬಗ್ಗೆ ಯೋಚಿಸುತ್ತಾರೆ.

# ಸದ್ಗುಣಗಳನ್ನು ರೂಢಿಸಿಕೊಳ್ಳಿ!




ಒಂದು ದೊಡ್ಡ ಮರವು ಒಂದು ಚಿಕ್ಕ ಬೀಜದಿಂದ ಮೊಳಕೆಯೊಡೆದು ಬೆಳೆಯುವಂತೆಯೇ, ಎಲ್ಲಾ ಸದ್ಗುಣಗಳೂ ಕೆಲವು ಚಿಕ್ಕ ಅಂಶಗಳಿಂದಲೇ ಹುಟ್ಟಿಕೊಳ್ಳುತ್ತವೆ. ಪ್ಲೇಟೋ ಮತ್ತು ಅರಿಸ್ಟಾಟಲ್‌ನಂತಹ ತತ್ವಜ್ಞಾನಿಗಳು ಸಹ ಇದನ್ನೇ ಹೇಳಿರುವುದು. ಎಲ್ಲಾ ಸದ್ಗುಣಗಳೂ ಐದು ಮೂಲಭೂತ ಮೌಲ್ಯಗಳಿಂದ ಹುಟ್ಟಿಕೊಳ್ಳುತ್ತವೆ. ಅವು: ನ್ಯಾಯ, ಸತ್ಯ, ಪ್ರೀತಿ, ಸೌಂದರ್ಯ ಮತ್ತು ಒಳ್ಳೆಯತನ.

**ಒಬ್ಬ ವ್ಯಕ್ತಿಯು ತನ್ನ ಸ್ವಂತ ನೈತಿಕತೆಯನ್ನು ಹೇಗೆ ಬೆಳೆಸಿಕೊಳ್ಳುತ್ತಾನೆ?**

- ಜೀವನದಲ್ಲಿ ನಿಮಗೆ ಯಾವುದು ಮುಖ್ಯ? ನೀವು ಯಾವುದನ್ನು ನಂಬುತ್ತೀರಿ? ನಿಮ್ಮ ದೀರ್ಘಕಾಲೀನ ಗುರಿಗಳು ಯಾವುವು? ಜಗತ್ತು ನಿಮ್ಮನ್ನು ಹೇಗೆ ಮೌಲ್ಯಮಾಪನ ಮಾಡಬೇಕೆಂದು ನೀವು ಬಯಸುತ್ತೀರಿ ಇತ್ಯಾದಿ ನಿಮ್ಮ ನಂಬಿಕೆಗಳು ಮತ್ತು ಗುರಿಗಳೇ ನಿಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತವೆ.
- ನಿಮ್ಮ ಜೀವನದಲ್ಲಿ, ನಿಮ್ಮ ಕೆಲಸದಲ್ಲಿ, ನಿಮ್ಮ ವೃತ್ತಿಯಲ್ಲಿ ನೀವು ಯಾವ ವಿಷಯಗಳನ್ನು ಗೌರವಿಸುತ್ತೀರಿ? ಆ ಮೌಲ್ಯಗಳು ನಿಮ್ಮ ಕಾರ್ಯಗಳು ಮತ್ತು ನಿರ್ಧಾರಗಳಲ್ಲಿ ಪ್ರತಿಫಲಿಸುತ್ತವೆ. ಅವು ನಿಮಗೆ ಸರಿ ಮತ್ತು ತಪ್ಪುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಪ್ರಬುದ್ಧತೆಯನ್ನು ನೀಡುತ್ತವೆ. ಪ್ರಾಮಾಣಿಕತೆ, ಘನತೆ, ಗೌರವ, ಜವಾಬ್ದಾರಿ ಮತ್ತು ದಯೆ ನಿಮ್ಮ ಮೌಲ್ಯವನ್ನು ನಿರ್ಧರಿಸುತ್ತವೆ.
- ನೀವು ಮೆಚ್ಚುವ ಮತ್ತು ಗೌರವಿಸುವ ನಿಮ್ಮ ಆದರ್ಶ ವ್ಯಕ್ತಿಗಳನ್ನು ಹುಡುಕಿರಿ. ಜನರ ಜೀವನವನ್ನು ನೋಡಿ. ಅವರು ಏನನ್ನು ಗೌರವಿಸುತ್ತಾರೆ? ಅವರು ಯಾವ ತತ್ವಗಳನ್ನು ಪಾಲಿಸುತ್ತಾರೆ? ಆ ಮೌಲ್ಯಗಳು ಮತ್ತು ತತ್ವಗಳು ಅವರ ಜೀವನದಲ್ಲಿ ಯಾವ ಬದಲಾವಣೆಗಳನ್ನು ಮಾಡಿವೆ? ಇದೆಲ್ಲವನ್ನೂ ನೋಡಿ ಮತ್ತು ಅದರಿಂದ ಕಲಿಯಿರಿ.
- ನಿಮಗಾಗಿ ಕೆಲವು ತತ್ವಗಳನ್ನು ಬೆಳೆಸಿಕೊಳ್ಳಿ. ಆ ತತ್ವಗಳ ಪ್ರಕಾರ ಬದುಕುವುದನ್ನು ಅಭ್ಯಾಸ ಮಾಡಿಕೊಳ್ಳಿ. ಅವುಗಳನ್ನು ನಿಮ್ಮ ಕಾರ್ಯಗಳಲ್ಲಿ ಪ್ರತಿಬಿಂಬಿಸಿ. ನಿಮ್ಮ ಬೆಳವಣಿಗೆ ಅವುಗಳ ಮೇಲೆ ಆಧಾರಿತವಾಗಿರಬೇಕು.
- ನಾವು ಇತರರಿಗೆ ಸತ್ಯವಂತರಾಗುವ ಮೊದಲು, ನಮಗೆ ನಾವೇ ಸತ್ಯವಂತರಾಗಿರಬೇಕು. ನಾವು ನಮಗೆ ಹೇಳುವ ಯಾವುದೂ ಸುಳ್ಳಾಗಿರಬಾರದು.
- ನಮ್ಮ ಆಲೋಚನೆಗಳು ಮತ್ತು ಕಾರ್ಯಗಳ ನಡುವೆ ಯಾವುದೇ ವ್ಯತ್ಯಾಸ ಇರಬಾರದು. ನಮ್ಮ ಮಾತು ಮತ್ತು ಕಾರ್ಯಗಳ ನಡುವೆ ಕೂಡ ಯಾವುದೇ ವ್ಯತ್ಯಾಸ ಇರಬಾರದು. ನಮ್ಮ ಪ್ರಾಮಾಣಿಕತೆ ಎಲ್ಲದರಲ್ಲೂ ಸ್ಪಷ್ಟವಾಗಿರಬೇಕು.
- ಮಾತು ಅಥವಾ ಕೃತ್ಯದಿಂದ ಯಾರನ್ನೂ ನೋಯಿಸಬಾರದು. ಅವರು ಯಾರೇ ಆಗಿರಲಿ, ಅವರನ್ನು ಗೌರವಿಸಬೇಕು.
- ನಮ್ಮ ಮಾತು ಯಾರಿಗೂ ಈ ವ್ಯಕ್ತಿಯೊಂದಿಗೆ ಮಾತನಾಡುವುದು ಚೌಕಾಸಿ ಮಾಡಿದಂತೆ ಎಂದು ಅನಿಸಬಾರದು. ಸಂಭಾಷಣೆಯಲ್ಲಿ ಅಸಭ್ಯ ಪದಗಳನ್ನು ಬಳಸಬಾರದು. ಆಗ ಮಾತ್ರ ನಮ್ಮ ಮಾತುಗಳಿಗೆ ಮೌಲ್ಯವಿರುತ್ತದೆ.
- ಜೀವನದ ಪ್ರತಿಯೊಂದು ಹಂತದಲ್ಲೂ ಒಳ್ಳೆಯತನ ಪ್ರಕಟವಾಗಬೇಕು. ಜ್ಞಾನದ ಬೆಳಕು ನಿಮಗೆ ಮಾರ್ಗದರ್ಶನ ನೀಡಬೇಕು. ಆಗ ನೀವು ಜೀವನದಲ್ಲಿ ಪ್ರಗತಿ ಮತ್ತು ಯಶಸ್ಸನ್ನು ಸಾಧಿಸುವಿರಿ!



Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL


Inners for Winners
RAMRAJ
VESTS
BRIEFS • TRUNKS
Uplift
your spirit from
Within
UPLIFT
YOUR SPRIT FROM
Shreyas Iyer - Cricketer
SUKRA
SUPER FINE COTTON VESTS
ROMEX
SUPERIOR BANIANS
RISE-UP
PREMIUM BANIANS
ACOSTE
LUXURY INNERWEARS
Breeze
Eye Let Vests
WinStripe
STRIPED BANIANS
ARCHERY
GYM VEST
COMPACT
PREMIUM COTTON RIB VESTS
LITTLE STARS
KIDS INNERWEARS
Available at Ramraj Showrooms and All Leading Textile Shops | Shop Online at www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-02-2026 Posted at Tirupur BPC on 5th of every month.

